prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಸರಾನಿ ಇನ್ನಿಲ್ಲ
ಹಿಂದಿ ಚಿತ್ರರಂಗದ ಅಪರೂಪದ ಹಾಸ್ಯನಟ ಗೋವರ್ಧನ್ ಅಸರಾನಿ ಅವರು ಮುಂಬೈನಲ್ಲಿ ಸೋಮವಾರ ನಿಧನರಾದರು.

ನುಡಿನಮನ ಪುಟ ▶8

ಆಯುಷ್ ಕಣಕ್ಕೆ
ಕರ್ನಾಟಕದ ಆಯುಷ್ ಶೆಟ್ಟಿ ಅವರು ಮಂಗಳವಾರ ಆರಂಭವಾಗಲಿರುವ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ

ಸೆನ್ಸೆಕ್ಸ್ 84,363 | ನಿಫ್ಟಿ 25,843 | $/₹ 87.93 | ಚಿನ್ನ (Std. 10g) ₹1,34,620 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,85,297 (ಬೆಂಗಳೂರು)

ಭಾರಿ ಸುಂಕ: ಟ್ರಂಪ್ ಎಚ್ಚರಿಕೆ

ರಷ್ಯಾದಿಂದ ಕಚ್ಚಾತೈಲ ಖರೀದಿ ನಿಲ್ಲಿಸುವಂತೆ ಭಾರತದ ಮೇಲೆ ಅಮೆರಿಕ ಇನ್ನಷ್ಟು ಒತ್ತಡ

ವಾಷಿಂಗ್ಟನ್ (ಪಿಟಿಐ/ ಎಎಫ್‌ಪಿ): 'ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದರೆ ಭಾರಿ ಸುಂಕ ತೆರಬೇಕಾಗುತ್ತದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಎಚ್ಚರಿಕೆ ನೀಡಿದ್ದಾರೆ.

'ರಷ್ಯಾದಿಂದ ಇನ್ನು ಮುಂದೆ ಕಚ್ಚಾತೈಲ ಖರೀದಿಸುವುದಿಲ್ಲ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದ್ದಾರೆ' ಎಂಬ ಹೇಳಿಕೆಯನ್ನು ಅವರು ಪುನರುಚ್ಚರಿಸಿದ್ದಾರೆ.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, 'ರಷ್ಯಾದಿಂದ ತೈಲ ಖರೀದಿ ನಿಲ್ಲಿಸದಿದ್ದರೆ, ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು ಹೆಚ್ಚಿಸುತ್ತಲೇ ಇರುತ್ತೇವೆ. ಅವರು ಅದನ್ನು (ರಷ್ಯಾದಿಂದ ತೈಲ ಖರೀದಿ) ಮುಂದುವರಿಸಲು ಬಯಸುವುದಿಲ್ಲ' ಎಂದು ಹೇಳಿದರು.

'ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಲಿದೆ' ಎಂದು ಟ್ರಂಪ್ ಅಕ್ಟೋಬರ್ 15ರಂದು ಹೇಳಿದ್ದರು. ಅದನ್ನು ಅಲ್ಲಗಳೆದಿದ್ದ ಭಾರತ, 'ಮಾರುಕಟ್ಟೆಯ ಬೇಡಿಕೆ ಆಧರಿಸಿ ವಿವಿಧ ದೇಶಗಳಿಂದ ತೈಲ ಖರೀದಿಗೆ ಆದ್ಯತೆ ನೀಡಲಾಗುವುದು' ಎಂದು ಹೇಳಿತ್ತು. 'ಟ್ರಂಪ್ ಮತ್ತು ಮೋದಿ ನಡುವೆ ಅ.15ರಂದು ದೂರವಾಣಿ ಸಂಭಾಷಣೆಯೇ ನಡೆದಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸ್ಪಷ್ಟಪಡಿಸಿದ್ದರು.



ಭಾರತದ ಹೇಳಿಕೆಗೆ ಸಂಬಂಧಿಸಿದಂತೆ ಸುದ್ದಿಗಾರರ ಪ್ರಶ್ನೆಗೆ ಟ್ರಂಪ್, 'ಭಾರತ ಅಂತಹ ಹೇಳಿಕೆ ನೀಡಿದೆ ಎಂದು ನಾನು ಭಾವಿಸುವುದಿಲ್ಲ. ಮೋದಿ ಅವರೊಂದಿಗೆ ಮಾತನಾಡಿದ್ದೇನೆ. ರಷ್ಯಾದೊಂದಿಗೆ ತೈಲ ಖರೀದಿಸುವುದಿಲ್ಲ ಎಂಬ ಭರವಸೆಯನ್ನು ಅವರು ನೀಡಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ರಷ್ಯಾದಿಂದ ಕಚ್ಚಾತೈಲ ಖರೀದಿಸುವ ಮೂಲಕ ಭಾರತವು ಉಕ್ರೇನ್ ವಿರುದ್ಧದ ಯುದ್ಧಕ್ಕೆ ಹಣಕಾಸು ಒದಗಿಸಲು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಸಹಾಯ ಮಾಡುತ್ತಿದೆ ಎಂದು ಅಮೆರಿಕ ಆರೋಪಿಸುತ್ತಾ ಬಂದಿದೆ. ಅಮೆರಿಕದ ನಿರಂತರ ಒತ್ತಡ, ಸುಂಕ ಹೆಚ್ಚಳದ ಬೆದರಿಕೆ ಹೊರತಾಗಿಯೂ ರಷ್ಯಾದಿಂದ ಕಚ್ಚಾತೈಲ ಖರೀದಿಸುವುದನ್ನು ಭಾರತ ನಿಲ್ಲಿಸಿಲ್ಲ. ಅದಕ್ಕೆ ಪ್ರತೀಕಾರವಾಗಿ ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು ಶೇ 50ಕ್ಕೆ ಹೆಚ್ಚಿಸಿತ್ತು. ಇದರಿಂದ, ಉಭಯ ದೇಶಗಳ ನಡುವಣ ಸಂಬಂಧ ತೀವ್ರ ಹದಗೆಟ್ಟಿತ್ತು. ಸುಂಕ ಹೆಚ್ಚಿಸಿದ ಅಮೆರಿಕದ ಕ್ರಮವನ್ನು ಭಾರತ, 'ನ್ಯಾಯಸಮ್ಮತವಲ್ಲದ ಮತ್ತು ಅಸಮಂಜಸ' ಎಂದು ಟೀಕಿಸಿತ್ತು.

'ಯುದ್ಧ ನಿಲ್ಲಿಸಿದ್ದು ನಾನು': 'ಭಾರತ –ಪಾಕಿಸ್ತಾನ ನಡುವಿನ ಯುದ್ಧವನ್ನು ನಿಲ್ಲಿಸಿದ್ದು ನಾನು' ಎಂಬ ಹೇಳಿಕೆಯನ್ನೂ ಟ್ರಂಪ್ ಪುನರುಚ್ಚರಿಸಿದ್ದಾರೆ.

ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, 'ಯುದ್ಧ ನಿಲ್ಲಿಸದಿದ್ದರೆ ಎರಡೂ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 200ರಷ್ಟು ಸುಂಕ ವಿಧಿಸಲಾಗುವುದು ಎಂದಿದ್ದೆ. ನಾವು ನಿಮ್ಮೊಂದಿಗೆ ವ್ಯಾಪಾರ ಮಾಡುವುದಿಲ್ಲವೆಂದು ಬೆದರಿಕೆ ಹಾಕಿದ್ದೆ. ಇದರಿಂದ ಉಭಯ ದೇಶಗಳು ಯುದ್ಧ ನಿಲ್ಲಿಸಿದವು' ಎಂದಿದ್ದಾರೆ.

ತೈಲ ಖರೀದಿ ಹೆಚ್ಚಳ

2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ಸಮರ ಸಾರಿದ ಬಳಿಕ ಭಾರತವು ರಷ್ಯಾದಿಂದ ಖರೀದಿಸುವ ಕಚ್ಚಾತೈಲದ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದೆ.

2025ರ ಮೊದಲ ಒಂಬತ್ತು ತಿಂಗಳಲ್ಲಿ ರಷ್ಯಾದಿಂದ ಪ್ರತಿದಿನ 19 ಲಕ್ಷ ಬ್ಯಾರಲ್‌ನಷ್ಟು ತೈಲ ಖರೀದಿಸಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ) ಹೇಳಿದೆ. ಆಂದರೆ, ಈ ಅವಧಿಯಲ್ಲಿ ರಷ್ಯಾದ ಒಟ್ಟು ರಫ್ತಿನ ಶೇ 40ರಷ್ಟು ತೈಲ ಭಾರತಕ್ಕೆ ಬಂದಿದೆ. ಉಕ್ರೇನ್ ಸೇನೆಯು ರಷ್ಯಾದ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿಯನ್ನು ಹೆಚ್ಚಿಸಿದೆ. ಇದರ ನಡುವೆಯೇ ಭಾರತದ ಮೇಲೆ ಅಮೆರಿಕದ ಒತ್ತಡ ಬಂದಿದೆ.

ರಷ್ಯಾಕ್ಕೆ ನೆರವಾಗಲಿದೆಯೇ ಚೀನಾ?

ಭಾರತವು ಖರೀದಿಯನ್ನು ತಗ್ಗಿಸಿದರೆ, ಚೀನಾದ ತೈಲ ಸಂಸ್ಕರಣ ಕಂಪನಿಗಳು ರಷ್ಯಾದ ನೆರವಿಗೆ ನಿಲ್ಲಬಹುದು ಎಂದು ವಿಶ್ಲೇಷಿಸಲಾಗಿದೆ. ಜಾಗತಿಕ ಮಾರುಕಟ್ಟೆ ದರಕ್ಕಿಂತ ಅಗ್ಗದ ಬೆಲೆಯಲ್ಲಿ ತೈಲ ಮಾರಾಟ ಮಾಡುವುದನ್ನು ರಷ್ಯಾ ಮುಂದುವರಿಸಿದರೆ ಚೀನಾದ ಕಂಪನಿಗಳು ಖರೀದಿ ಪ್ರಮಾಣ ಹೆಚ್ಚಿಸುವ ಸಾಧ್ಯತೆಯಿದೆ.

ರಷ್ಯಾದಿಂದ ಅತಿಹೆಚ್ಚು ಕಚ್ಚಾತೈಲ ಖರೀದಿಸುವ ದೇಶಗಳಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದು, ಈ ವರ್ಷದ ಜನವರಿಯಿಂದ ಸೆಪ್ಟೆಂಬರ್‌ವರೆಗೆ ಪ್ರತಿದಿನ 21 ಲಕ್ಷ ಬ್ಯಾರಲ್‌ನಷ್ಟು ತೈಲ ಖರೀದಿಸಿದೆ.

ದ್ವಿಪಕ್ಷೀಯ ಭೇಟಿ ಮೇಲೆ ಕರಿನೆರಳು...

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಶೃಂಗಸಭೆ ಕ್ವಾಲಾಲಂಪುರದಲ್ಲಿ ಇದೇ 26ರಿಂದ 28ರವರೆಗೆ ನಿಗದಿಯಾಗಿದೆ. ಈ ಶೃಂಗದಲ್ಲಿ ಡೊನಾಲ್ಡ್ ಟ್ರಂಪ್ ಅವರೂ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈ ವೇಳೆ ಮೋದಿ ಮತ್ತು ಟ್ರಂಪ್ ದ್ವಿಪಕ್ಷೀಯ ಮಾತುಕತೆ ನಡೆಸುವ ಸಾಧ್ಯತೆಯಿದೆ. ಆದರೆ, ಟ್ರಂಪ್ ಅವರು ಪದೇ ಪದೇ ಭಾರತ ವಿರೋಧಿ ಹೇಳಿಕೆ ನೀಡುತ್ತಿರುವುದು ದ್ವಿಪಕ್ಷೀಯ ಭೇಟಿ ಮೇಲೆ ಕರಿನೆರಳು ಬೀರಿದೆ. 'ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂಬ ಭರವಸೆಯನ್ನು ಮೋದಿ ನೀಡಿದ್ದಾರೆ' ಎಂದು ಟ್ರಂಪ್ ಈ ಹಿಂದೆ ಹೇಳಿದ್ದಾಗ ಕಾಂಗ್ರೆಸ್ ಒಳಗೊಂಡಂತೆ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದವು. ಟ್ರಂಪ್ ಅದೇ ಹೇಳಿಕೆ ಪುನರುಚ್ಚರಿಸಿರುವುದರಿಂದ ಸರ್ಕಾರವನ್ನು ಟೀಕಿಸಲು ವಿಪಕ್ಷಗಳಿಗೆ ಹೊಸ ಅಸ್ತ್ರ ಸಿಕ್ಕಂತಾಗಿದೆ.

ನೌಕಾಪಡೆಯೊಂದಿಗೆ ದೀಪಾವಳಿ...

ಪಿಟಿಐ ಚಿತ್ರ

ಗೋವಾ ಹಾಗೂ ಕಾರವಾರ ಕರಾವಳಿ ಪ್ರದೇಶದಲ್ಲಿ ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆಯಲ್ಲಿ ಸೋಮವಾರ ನೌಕಾಪಡೆ ಯೋಧರಿಗೆ ಪ್ರಧಾನಿ ನರೇಂದ್ರ ಮೋದಿ ಸಿಹಿ ತಿನ್ನಿಸುವ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಿದರು

ಸುದ್ದಿ ಪುಟ ▶8

'ರಸ್ತೆಯ ಮೇಲೆ ಪ್ರಾರ್ಥನೆ ಅನುಮತಿ ಪಡೆಯಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ಮೇಲೆ ಪ್ರಾರ್ಥನೆ ಮಾಡಲು ಅರ್ಜಿ ಹಾಕಿ ಅನುಮತಿ ಪಡೆದುಕೊಳ್ಳಬೇಕು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಿಯಾಂಕ್ ಖರ್ಗೆ

'ರಸ್ತೆ ಮೇಲೆ ಪೂರ್ವಾನುಮತಿ ಇಲ್ಲದೇ ನಮಾಜ್ ಮಾಡಲು ಮುಸ್ಲಿಮರಿಗೆ ಅವಕಾಶ ನೀಡಬಾರದು' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಪತ್ರ ಬರೆದಿದ್ದಾರಲ್ಲ ಎಂಬ ಪ್ರಶ್ನೆಗೆ, ಪ್ರಿಯಾಂಕ್ ಹೀಗೆ ಪ್ರತಿಕ್ರಿಯಿಸಿದರು.

'ನಮ್ಮದು ಒಕ್ಕೂಟ ವ್ಯವಸ್ಥೆ. ಕೇಂದ್ರದ ಎಲ್ಲ ನಿಯಮಗಳನ್ನು ಅಳವಡಿಸಿಕೊಳ್ಳಲಾಗದು. ಕೇಂದ್ರ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಎಂದು ಕಾನೂನು ತಿದ್ದುಪಡಿ ತಂದಿದೆ. ಆದರೆ, ರಾಜ್ಯ ಸರ್ಕಾರಿ ನೌಕರರು ಭಾಗವಹಿಸಲು ಅವಕಾಶ ಇಲ್ಲ' ಎಂದರು.

ಹಸ್ತಕ್ಷೇಪ ಮಾಡುವುದಿಲ್ಲ: 'ಪಥ ಸಂಚಲನ ನಡೆಸಲು ಹೈಕೋರ್ಟ್ ಆದೇಶದಂತೆ ಆರ್‌ಎಸ್‌ಎಸ್ ಹೊಸದಾಗಿ ಅರ್ಜಿ ಸಲ್ಲಿಸಲಿ. ಅನುಮತಿ ನೀಡುವ ಕುರಿತು ಜಿಲ್ಲಾಡಳಿತ ತೀರ್ಮಾನ ಮಾಡಲಿದೆ. ನಾವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ' ಎಂದೂ ಹೇಳಿದರು. 'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹಿಂದೆ ಆರ್‌ಎಸ್‌ಎಸ್ ಬಗ್ಗೆ ಏನು ಹೇಳಿದ್ದರು ಎಂದು ನೋಡಲಿ. ಈಗ ಸಿದ್ಧಾಂತ ಬದಲಿಸಿ, ಕುರ್ಚಿಗಾಗಿ ಬಿಜೆಪಿ ಜೊತೆ ಸೇರಿದ್ದಾರೆ. ನಾನು ಸಿ.ಎಂ ಆಗಿದ್ದಾಗ ಹೊರಡಿಸಿದ್ದ ಸುತ್ತೋಲೆಯಲ್ಲಿ ಆರ್‌ಎಸ್‌ಎಸ್ ಹೆಸರು ಪ್ರಸ್ತಾಪಿಸಿಲ್ಲ ಎಂದು ಜಗದೀಶ ಶೆಟ್ಟರ್ ಬಾಲಿಶ ಹೇಳಿಕೆ ನೀಡಿದ್ದಾರೆ. ಈಗ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಆರ್‌ಎಸ್‌ಎಸ್‌ಗೆ ನಿರ್ಬಂಧ ಎಂದು ಹೇಳಿಲ್ಲ. ಅವರು ಹೊರಡಿಸಿದ್ದ ಆದೇಶವನ್ನೇ ನಾವು ಮಾಡಿದ್ದೇವೆ' ಎಂದು ಸ್ಪಷ್ಟಪಡಿಸಿದರು.

> **ನಾನು ಸಿ.ಎಂ ಆಗಿದ್ದಾಗ ಸರ್ಕಾರಿ ಶಾಲಾ ಆವರಣದಲ್ಲಿ ಖಾಸಗಿ ಕಾರ್ಯಕ್ರಮ ನಡೆಸದಂತೆ ಸುತ್ತೋಲೆ ಹೊರಡಿಸಿಲ್ಲ. ಶಿಕ್ಷಣ ಇಲಾಖೆ ತಿಳಿಸಿತ್ತು. ಅದು ಸಂಪುಟದ ನಿರ್ಣಯವಲ್ಲ**
> **ಜಗದೀಶ ಶೆಟ್ಟರ್,** ಬಿಜೆಪಿ ಸಂಸದ

'ತಪ್ಪು ಮಾಹಿತಿ ತಡೆಗೆ ಕಾಯ್ದೆ'

ಪುತ್ತೂರು (ದಕ್ಷಿಣ ಕನ್ನಡ): ತಪ್ಪು ಮಾಹಿತಿ ಪ್ರಚಾರ ತಡೆಯಲು ಮತ್ತು ಕೋಮು ಸೌಹಾರ್ದ ರಕ್ಷಣೆಗೆ ಹೊಸ ಕಾನೂನು ರೂಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ತಿಳಿಸಿದರು.

ರೈ ಎಸ್ಟೇಟ್ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್ ಇಲ್ಲಿನ ಕೊಂಬೆಟ್ಟು ಮೈದಾನದಲ್ಲಿ ಸೋಮವಾರ 'ಅಶೋಕ ಜನ-ಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯ

'ಕಾನೂನು ಸಚಿವ ಎಚ್.ಕೆ. ಪಾಟೀಲ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಈ ಕಾಯ್ದೆಯ ರೂಪುರೇಷೆ ಸಿದ್ಧಪಡಿಸಲು ಸೂಚಿಸಲಾಗಿದೆ' ಎಂದು ತಿಳಿಸಿದರು. 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುದ್ವೇಷದ ಚಟುವಟಿಕೆ ಮಿತಿಮೀರಿತ್ತು. ಅದನ್ನು ತಡೆಯಲು ದಕ್ಷ ಅಧಿಕಾರಿಗಳನ್ನು ನಿಯೋಜಿಸಲಾಯಿತು. ನಂತರ ಪರಿಸ್ಥಿತಿ ಹದ್ದುಬಸ್ತಿನಲ್ಲಿದೆ' ಎಂದು ಹೇಳಿದರು.

'ಸಾರ್ವಜನಿಕ ಸ್ಥಳದಲ್ಲಿ ಚಟುವಟಿಕೆಗೆ ಯಾವುದೇ ಸಂಘಟನೆಗೆ ಅವಕಾಶ ನೀಡುವುದಿಲ್ಲ ಎಂದು ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ 2013ರಲ್ಲಿ ನಿಷೇಧ ಹೇರಲಾಗಿತ್ತು. ಅದನ್ನು ಈಗ ಕಾಂಗ್ರೆಸ್ ಸರ್ಕಾರ ಜಾರಿ ಮಾಡಿದರೆ ಆರ್‌ಎಸ್‌ಎಸ್ ಮಟ್ಟ ಹಾಕಲು ಹೊರಟಿರುವುದಾಗಿ ವಿರೋಧ ಪಕ್ಷದವರು ಆರೋಪಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ದೀಪಾವಳಿ: ಸಿಹಿ ತಯಾರಿಸಿದ ರಾಹುಲ್ ▶8

ಆರ್‌ಜೆಡಿ 143, ಕಾಂಗ್ರೆಸ್ 61 ಕ್ಷೇತ್ರಗಳಲ್ಲಿ ಸ್ಪರ್ಧೆ: 9 ಕಡೆ ಪರಸ್ಪರ ಮುಖಾಮುಖಿ

ಒಪ್ಪಂದಕ್ಕೆ ಬಾರದ 'ಇಂಡಿಯಾ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಗೆ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಡುವೆ ಕೊನೆಗೂ ಅಧಿಕೃತವಾಗಿ ಸೀಟು ಹಂಚಿಕೆ ಒಪ್ಪಂದ ಏರ್ಪಡಲಿಲ್ಲ.

ಆಯಾ ಪಕ್ಷಗಳು ಅಭ್ಯರ್ಥಿಗಳನ್ನು ಘೋಷಿಸಿದ ಪ್ರಕಾರ, ಆರ್‌ಜೆಡಿ 143ರಲ್ಲಿ, ಕಾಂಗ್ರೆಸ್ 61ರಲ್ಲಿ, ಸಿಪಿಐ (ಎಂಎಲ್) 20ರಲ್ಲಿ ಸ್ಪರ್ಧಿಸಲಿವೆ. ಬಾಕಿ ಕ್ಷೇತ್ರಗಳನ್ನು ವಿಐಪಿ, ಸಿಪಿಐ (ಎಂ) ಸೇರಿ ಉಳಿದ ಪಕ್ಷಗಳಿಗೆ ಬಿಟ್ಟು ಕೊಡಲಾಗಿದೆ. ಒಪ್ಪಂದ ಏರ್ಪಡದ ಕಾರಣ ಕನಿಷ್ಠ ಒಂಬತ್ತು ಕ್ಷೇತ್ರಗಳಲ್ಲಿ ಮೈತ್ರಿ ಕೂಟದ ಪಕ್ಷಗಳು ಪರಸ್ಪರ ಸ್ಪರ್ಧೆಗೆ ಇಳಿದಿವೆ.

ಐದು ಕ್ಷೇತ್ರಗಳಲ್ಲಿ ಆರ್‌ಜೆಡಿ–ಕಾಂಗ್ರೆಸ್ ಮುಖಾಮುಖಿಯಾಗಲಿವೆ. ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳಿಗೆ ನಾಮಪತ್ರ ವಾಪಸ್ ಪಡೆಯಲು ಬುಧವಾರ ಕೊನೆ ದಿನ. ಹೀಗಾಗಿ, ನಾಲ್ಕು ಕ್ಷೇತ್ರಗಳಲ್ಲಿ-ಸಮಸ್ಯೆ ಬಗೆಹರಿಸಬಹುದು ಎಂದು ಮೈತ್ರಿಕೂಟದ ನಾಯಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಅಭ್ಯರ್ಥಿಗಳನ್ನು ನಿಲ್ಲಿಸಿವೆ. ಮೊದಲ ಹಂತದ ಚುನಾವಣೆ ನಡೆಯುವ 121 ಕ್ಷೇತ್ರಗಳಲ್ಲಿ ನಾಮಪತ್ರ ವಾಪಸ್ ಪಡೆಯಲು ಸೋಮವಾರ ಕೊನೆಯ ದಿನವಾಗಿತ್ತು. ▶9

ಎಲ್ಲೆಲ್ಲಿ 'ಮೈತ್ರಿ' ಪರಸ್ಪರ ಹೋರಾಟ

ವೈಶಾಲಿ	ಅಜಯ್ ಕುಶ್ವಾಹ (ಆರ್‌ಜೆಡಿ)–ಸಂಜೀವ್ ಕುಮಾರ್ (ಕಾಂಗ್ರೆಸ್)
ಲಾಲ್‌ಗಂಜ್	ಶಿವಾನಿ ಶುಕ್ಲ (ಆರ್‌ಜೆಡಿ)– ಆದಿತ್ಯ ರಾಜ (ಕಾಂಗ್ರೆಸ್)
ನರ್ಕಟಿಯಾಗಂಜ್	ದೀಪಕ್ ಯಾದವ್ (ಆರ್‌ಜೆಡಿ)– ಶಾಶ್ವತ್ ಕೇದಾರ್ ಪಾಂಡೆ
ಕಹಲ್‌ಗಾಂವ್	ರಜನೀಶ್ ಭಾರ್ತಿ (ಆರ್‌ಜೆಡಿ)–ಪ್ರವೀಣ್ ಸಿಂಗ್ ಕುಶ್ವಾಹ
ಸಿಕಂದ್ರ	ಉದಯ್ ಚೌಧರಿ (ಆರ್‌ಜೆಡಿ)–ವಿನೋದ್ ಚೌಧರಿ (ಕಾಂಗ್ರೆಸ್)
ತಾರಾಪುರ	ಅರುಣ್ ಶಾ (ಆರ್‌ಜೆಡಿ)– ಸಕಲ್ದಿಯೊ ಬಿಂದ್ (ವಿಐಪಿ)
ಬಚ್ವಾರ	ಅವಧೇಶ್ ರೈ (ಸಿಪಿಐ)– ಶಿವ ಪ್ರಕಾಶ್ ದಾಸ್ (ಕಾಂಗ್ರೆಸ್)
ರಾಜ್‌ಪಕರ್	ಮೋಹಿತ್ ಪಾಸ್ವಾನ್ (ಸಿಪಿಐ)– ಪ್ರತಿಮಾ ದಾಸ್ (ಕಾಂಗ್ರೆಸ್)
ರೊಸೆರಾ	ಲಕ್ಷ್ಮಣ್ ಪಾಸ್ವಾನ್ (ಸಿಪಿಐ)–ಬಿ.ಕೆ. ರವಿ (ಕಾಂಗ್ರೆಸ್)

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಅಖಾಡದಿಂದಲೇ ಜೆಎಂಎಂ ಹಿಂದಕ್ಕೆ

ಜಾರ್ಖಂಡ್‌ನ ಆಡಳಿತಾರೂಢ ಜಾರ್ಖಂಡ್ ಮುಕ್ತಿ ಮೋರ್ಚಾವು (ಜೆಎಂಎಂ) ನೆರೆಯ ಬಿಹಾರದಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಸೋಮವಾರ ಪ್ರಕಟಿಸಿತು. ▶9

28 ಪುಟಗಳ ದೀರ್ಘ ಮರಣಪತ್ರ ಬರೆದಿಟ್ಟು ನೌಕರ ಆತ್ಮಹತ್ಯೆ

ಓಲಾ ಸಿಇಒ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಓಲಾ ಎಲೆಕ್ಟ್ರಿಕ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಹಾಗೂ ಹಿರಿಯ ಅಧಿಕಾರಿಯೊಬ್ಬರ ವಿರುದ್ಧ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕಂಪನಿಯ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕೆ.ಅರವಿಂದ್ ಅವರು ಸೆ.28ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರು ಆತ್ಮಹತ್ಯೆ ಮಾಡಿಕೊಳ್ಳಲು ಸಿಇಒ ಭವೀಶ್ ಅಗರ್‌ವಾಲ್, ಹಿರಿಯ ಅಧಿಕಾರಿಯಾದ ಸುಬ್ರತ್ ಕುಮಾರ್ ದಾಸ್ ಸೇರಿ ಕಂಪನಿಯ ಸಿಬ್ಬಂದಿ ಕಿರುಕುಳ ಹಾಗೂ ಮಾನಸಿಕ ಒತ್ತಡ ಹೇರಿದ್ದು ಕಾರಣ ಎಂಬ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ▶9

ಭವೀಶ್ ಅಗರ್‌ವಾಲ್

ಮುಖ್ಯಾಂಶಗಳು

- ಸಿಇಒ ಸೇರಿ ಹಿರಿಯ ಅಧಿಕಾರಿಗಳಿಂದ ಕಿರುಕುಳದ ಆರೋಪ
- ನೌಕರ ಸತ್ತ ಬಳಿಕ ಅನುಮಾನಾಸ್ಪದವಾಗಿ ₹17.46 ಲಕ್ಷ ವರ್ಗಾವಣೆ
- 28 ಪುಟಗಳ ಮರಣಪತ್ರದಲ್ಲಿ ಹಲವರ ಹೆಸರು ಉಲ್ಲೇಖ

ನೂಕುನುಗ್ಗಲು: 11 ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಶಾಸಕರ ದೀಪಾವಳಿ ಉಡುಗೊರೆ ಮತ್ತು ಮುಖ್ಯಮಂತ್ರಿಗಾಗಿ ತಾಸುಗಟ್ಟಲೆ ಕಾದಿದ್ದ ಜನರಿಗೆ ಕುಡಿಯಲು ನೀರು ಕೊಡಲೂ ಪೊಲೀಸರು ಅವಕಾಶ ನೀಡದೇ ನಿರ್ಜಲೀಕರಣದಿಂದ ಹಲವು ಮಂದಿ ಸೋಮವಾರ ಇಲ್ಲಿ ನಡೆದ 'ಅಶೋಕ ಜನಮನ' ಕಾರ್ಯಕ್ರಮ ದಲ್ಲಿ ನಿತ್ರಾಣರಾದರು.

ಬಟ್ಟೆ ಮತ್ತು ತಟ್ಟೆ ಪಡೆಯುವ ವೇಳೆ ಉಂಟಾದ ನೂಕುನುಗ್ಗಲಿನ ಕಾರಣ ಅಸ್ವಸ್ಥಗೊಂಡ 11 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು 13 ವರ್ಷದಿಂದ ದೀಪಾವಳಿ ವೇಳೆ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದು, ಈ ವರ್ಷ ಒಂದು ಲಕ್ಷ ಜನರಿಗೆ ಉಡುಗೊರೆ ನೀಡಲು ನಿರ್ಧರಿಸಲಾಗಿತ್ತು. ▶5

ಅಸ್ವಸ್ಥಗೊಂಡ ಮಹಿಳೆಯನ್ನು ಪುತ್ತೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು

ವೈದ್ಯಕೀಯ, ಅರೆವೈದ್ಯಕೀಯ, ನರ್ಸಿಂಗ್ ಕಾಲೇಜುಗಳಲ್ಲಿ ಮಾರ್ಗಸೂಚಿ ಪಾಲನೆ ಕಡ್ಡಾಯ

ಮಹಿಳೆಯರಿಗೆ ಸುರಕ್ಷತೆಯ 'ಖಾತ್ರಿ'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿದ್ಯಾರ್ಥಿನಿಯರು, ಮಹಿಳಾ ಅಧಿಕಾರಿಗಳು ಮತ್ತು ಸಿಬ್ಬಂದಿ ತಡರಾತ್ರಿಗಳಲ್ಲೂ ಕ್ಷೇಮವಾಗಿ ಓಡಾಡಲು ಅಗತ್ಯವಾದ ಸುರಕ್ಷತಾ ಕ್ರಮಗಳನ್ನು ರಾಜ್ಯದ ಎಲ್ಲ ವೈದ್ಯಕೀಯ, ಅರೆ ವೈದ್ಯಕೀಯ, ನರ್ಸಿಂಗ್ ಕಾಲೇಜುಗಳಲ್ಲಿ ಅಳವಡಿಸಿ-ಕೊಳ್ಳುವುದು ಇನ್ನು ಮುಂದೆ ಕಡ್ಡಾಯವಾಗಲಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಈ ಕುರಿತು ಸುತ್ತೋಲೆ ಹೊರಡಿಸಿದ್ದು, ಮಹಿಳಾ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರ ಭದ್ರತೆ, ಸುರಕ್ಷತೆ ಮತ್ತು ಸುಸ್ಥಿತಿಯನ್ನು ಖಾತ್ರಿಗೊಳಿಸಲು ಸುರಕ್ಷತೆಯ ಹಲವು ಅಂಶಗಳನ್ನು ಒಳಗೊಂಡ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ವೈದ್ಯಕೀಯ, ಅರೆವೈದ್ಯಕೀಯ, ಅಲೈಡ್ ಹೆಲ್ತ್‌ಸೈನ್ಸ್, ನರ್ಸಿಂಗ್ ಕಾಲೇಜು ಕ್ಯಾಂಪಸ್‌ಗಳ ಪ್ರವೇಶ ದ್ವಾರಗಳು, ನಿರ್ಗಮನ ದ್ವಾರಗಳು, ಕಾರಿಡಾರ್‌ಗಳು ಮತ್ತು ಸಾಮಾನ್ಯ ಪ್ರದೇಶಗಳು ಸೇರಿದಂತೆ ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು. ಕಾರಿಡಾರ್‌ಗಳೂ ಸೇರಿದಂತೆ ಎಲ್ಲ ಭಾಗಗಳಲ್ಲೂ ಸೂಕ್ತ ವಿದ್ಯುತ್ ಬೆಳಕು ಇರಬೇಕು. ಬೆಳಕಿನ ವ್ಯವಸ್ಥೆ ಕೈಕೊಡದಂತೆ ಬ್ಯಾಟರಿ, ಜನರೇಟರ್ ವ್ಯವಸ್ಥೆ ಮಾಡಿಕೊಳ್ಳಬೇಕು. ಇಡೀ ಕ್ಯಾಂಪಸ್‌ನ ಎಲ್ಲ ಕಡೆಯ ಚಲನವಲನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಬೇಕು. ಮೇಲ್ವಿಚಾರಣಾ ಘಟಕ ಸ್ಥಾಪಿಸಿ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಮೇಲೆ ನಿರಂತರ ಕಣ್ಗಾವಲು ಇಡಬೇಕು ಎಂದು ಸೂಚಿಸಲಾಗಿದೆ.

ಮಹಿಳೆಯರ ಮೇಲೆ ಯಾವುದೇ ರೀತಿಯ ಕಿರುಕುಳ ನಡೆಯುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕು. ಅಂತಹ ಕೃತ್ಯಗಳು ಕಂಡು ಬಂದರೆ ತಕ್ಷಣವೇ ಕ್ರಮ ಜರುಗಿಸಬೇಕು. ಅವರ ಘನತೆಗೆ ಧಕ್ಕೆಯಾಗದಂತೆ ಪುರುಷ ಅಧಿಕಾರಿಗಳು, ಸಿಬ್ಬಂದಿ ನಡೆದುಕೊಳ್ಳುವುದನ್ನು ಖಾತ್ರಿಪಡಿಸಬೇಕು. ಈ ಕುರಿತು ಕಾರ್ಯಾಗಾರಗಳು, ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಕೆಲಸದಲ್ಲಿ ಅವರ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ವಿವಿಧ ಸೌಲಭ್ಯಗಳು ಮತ್ತು ಸಂಪನ್ಮೂಲಗಳನ್ನು ಒದಗಿಸಬೇಕು ಎಂದು ಉಲ್ಲೇಖಿಸಲಾಗಿದೆ.



> **ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜಿಗಳ ಸಿಬ್ಬಂದಿಯಲ್ಲಿ ಶೇ 40ರಷ್ಟು, ವಿದ್ಯಾರ್ಥಿಗಳಲ್ಲಿ ಶೇ 60ಕ್ಕಿತ ಹೆಚ್ಚು ಹೆಣ್ಣು ಮಕ್ಕಳು ಇದ್ದಾರೆ. ಅವರೆಲ್ಲರ ಘನತೆ, ಸುರಕ್ಷತೆ ಕಾಪಾಡಲು ಕ್ರಮಕೈಗೊಳ್ಳಲಾಗಿದೆ**
> **ಡಾ.ಬಿ.ಸಿ.ಭಗವಾನ್,** ಕುಲಪತಿ, ರಾಜೀವ್ ಗಾಂಧಿ ವಿವಿ

ಅಂಕಿ ಅಂಶಗಳು

- **1,983** ರಾಜೀವ್ ಗಾಂಧಿ ವಿವಿ ವ್ಯಾಪ್ತಿಯ ಕಾಲೇಜುಗಳು
- **21,450** ಮಹಿಳಾ ಅಧಿಕಾರಿಗಳು, ಸಿಬ್ಬಂದಿ
- **2.26 ಲಕ್ಷ** ಅಧ್ಯಯನನಿರತ ವಿದ್ಯಾರ್ಥಿನಿಯರು

ಪ್ರಕರಣ ತಡೆ, ವಿಚಾರಣೆಗೆ ಸಮಿತಿ

ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಯಲು, ಪ್ರಕರಣಗಳ ಪ್ರಾಥಮಿಕ ವಿಚಾರಣೆ ನಡೆಸಲು ಪ್ರತಿ ಕಾಲೇಜಿನಲ್ಲೂ ಸಂಸ್ಥೆಯ ಮುಖ್ಯಸ್ಥರು, ಮಹಿಳಾ ವಸತಿನಿಲಯದ ಮೇಲ್ವಿಚಾರಕಿಯರು, ನಿಯೋಜಿತ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಸಮಿತಿಯು ಕ್ಯಾಂಪಸ್ ಸುರಕ್ಷತಾ ಕ್ರಮಗಳ ಕುರಿತು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಬೇಕು. ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಭೆ ನಡೆಸಿ, ಪರಾಮರ್ಶೆ ನಡೆಸಬೇಕು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಮಗ್ರ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

21 ಅಕ್ಟೋಬರ್, 2025 ರಂದು ನಮ್ಮ ಎಲ್ಲಾ ಮಳಿಗೆಗಳು ಕಾರ್ಯನಿರ್ವಹಿಸುವುದಿಲ್ಲ

ಇಲ್ಲಿ ಲಭ್ಯವಿರುತ್ತೇವೆ www.bhimagold.com

BHIMA

ಬೆಂಗಳೂರು: ಡಿಕನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಎಚ್ ಬಿ ಆರ್ ಲೇಔಟ್ • ರಾಜಾಜಿನಗರ • ಮಾರತಹಳ್ಳಿ • ಹೂಡಿ
ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್ • ಕಮರ್ಷಿಯಲ್ ಸ್ಟ್ರೀಟ್

ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ
ಹೊಸೂರು • ಬೆಳಗಾವಿ • ಹುಬ್ಬಳ್ಳಿ

BHIMA Helpline 1800-121-9076 (10:00 a.m. to 7:00 p.m.)

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಅಪಘಾತ: ಸ್ಥಳದಲ್ಲೇ ಇಬ್ಬರ ಸಾವು

ಚನ್ನರಾಯಪಟ್ಟಣ (ಹಾಸನ ಜಿಲ್ಲೆ): ಹೊರವಲಯದ ಕಗ್ಗಲಿಕಾವಲು ಬಳಿ ಭಾನುವಾರ ಇನ್ನೋವಾ ಕಾರು ಬೈಕ್‌ಗೆ ಡಿಕ್ಕಿಯಾದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟರು.

ಬೆಂಗಳೂರಿನ ಬಸವರಾಜು (20) ಹಾಗೂ ಅನುಶ್ರೀ (20) ಮೃತರು. ಅನುಶ್ರೀ ಸೋದರ ಸಂಬಂಧಿ ಛಾಯಾ ಗಾಯಗೊಂಡಿದ್ದಾರೆ. ಮತ್ತೊಂದು ಬೈಕಿನಲ್ಲಿದ್ದ ಚನ್ನರಾಯಪಟ್ಟಣದ ಮಹಮದ್ ಶಾಹಿದ್ ಸಹ ಗಾಯಗೊಂಡಿದ್ದಾರೆ. ಇವರು ದ್ವಿಚಕ್ರವಾಹನಗಳಲ್ಲಿ ತೆರಳುತ್ತಿದ್ದರು.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಎಆರ್ ಕಾಮಗಾರಿ ಚುರುಕು

ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ, ಶೇಕಡ 90ರಷ್ಟು ಕೆಲಸ ಪೂರ್ಣ

10.7 ಕಿ.ಮೀ.	₹575 ಕೋಟಿ	9 ಬ್ಲಾಕ್	65	100 ಮೀಟರ್
ಎಂಎಆರ್ ಉದ್ದ	ಯೋಜನೆಯ ಅಂದಾಜು ವೆಚ್ಚ	ಸಂಪರ್ಕಿಸುವ ಪ್ರವೇಶ ರಸ್ತೆ	ಕಿರು ಸೇತುವೆ ನಿರ್ಮಾಣ	ರಸ್ತೆ ಅಗಲ

ಬ್ರ್ಯಾಂಡ್ ಬೆಂಗಳೂರು

● ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ನಿರ್ಮಿಸುತ್ತಿರುವ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 10.7 ಕಿಲೋ ಮೀಟರ್ ಉದ್ದದ ಪ್ರಮುಖ ಮುಖ್ಯರಸ್ತೆ (ಮೇಜರ್ ಆರ್ಟೀರಿಯರ್ ರೋಡ್–ಎಂಎಆರ್) ಕಾಮಗಾರಿ ಚುರುಕು ಪಡೆದಿದೆ.

ಎಂಎಆರ್‌ನಿಂದ ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಗೆ ಸಂಪರ್ಕ ಸಿಗುವ ಜತೆಗೆ, ಸೂಲಿಕೆರೆ–ರಾಮಸಂದ್ರ, ಕೆಂಚಾಪುರ, ಕನ್ನಹಳ್ಳಿ ಗ್ರಾಮಗಳಿಗೂ ಸಂಪರ್ಕ ಸುಲಭವಾಗಲಿದೆ. ಇದಲ್ಲದೆ, ನಾಡಪ್ರಭು ಕೆಂಪೇಗೌಡ ಬಡಾವಣೆಯ 56 ರಸ್ತೆಗಳಿಗೆ ಸಂಪರ್ಕ ಒದಗಿಸಲಿದೆ. ನೈಸ್ ರಸ್ತೆಗೆ ಸಮಾನಾಂತರವಾಗಿ ಈ ರಸ್ತೆಯನ್ನು ನಿರ್ಮಿಸಲಾಗುತ್ತಿದೆ.

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯೋಜನೆಯ ಹಲವು ಅನುಮತಿ ಪ್ರಕ್ರಿಯೆಗಳು, ಟೆಂಡರ್ ಸಮ್ಮತಿ ಕಾರ್ಯಗಳು ಮುಗಿದಿರುವುದರಿಂದ ಎಂಎಆರ್ ಕಾಮಗಾರಿ ವೇಗ ಪಡೆದುಕೊಂಡಿದ್ದು, ಶೇಕಡ 90ರಷ್ಟು ಪೂರ್ಣಗೊಂಡಿದೆ. ಆದರೆ, ರೈಲ್ವೆ ಇಲಾಖೆ ಅನುಮತಿ ನೀಡುವುದು ತಡವಾಗಿರುವ ಕಾರಣ ನವೆಂಬರ್ ವೇಳೆಗೆ ಪೂರ್ಣಗೊಳ್ಳಬೇಕಿದ್ದ ಕಾಮಗಾರಿ ಒಂದೆರಡು ತಿಂಗಳು ವಿಳಂಬವಾಗಲಿದೆ.

ಸಂಚಾರ ದಟ್ಟಣೆ ನಿಯಂತ್ರಿಸುವ ಸಲುವಾಗಿ ಬಿಡಿಎ 2018ರಲ್ಲಿ ₹575 ಕೋಟಿ ವೆಚ್ಚದಲ್ಲಿ ಈ ಯೋಜನೆ ಆರಂಭಿಸಿದ್ದು, ಇದು 330 ಅಡಿ ಅಗಲದ ರಸ್ತೆಯಾಗಿದೆ. ಆರು ಪಥ, ಎರಡೂ ಬದಿಗಳಲ್ಲಿ ಸರ್ವಿಸ್ ರಸ್ತೆ ಹಾಗೂ ತಡೆಗೋಡೆಗಳ ಸಹಿತ ನಿರ್ಮಿಸಲಾಗುತ್ತಿದೆ. ಎಂಎಆರ್‌ನಲ್ಲಿ 2.90 ಕಿ.ಮೀ, 5.10 ಕಿ.ಮೀ. ಹಾಗೂ 9.70 ಕಿ.ಮೀನಲ್ಲಿ ಅಂಡರ್‌ಪಾಸ್ ನಿರ್ಮಾಣವಾಗಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಎಂಎಆರ್‌ನಲ್ಲಿ 64 ಕಿರು ಸೇತುವೆ, ಚಲ್ಲಘಟ್ಟದ ಬಳಿ 250 ಮೀಟರ್ ಉದ್ದದ ಸುರಂಗ ರಸ್ತೆ ನಿರ್ಮಾಣದ ಜೊತೆಗೆ ರೈಲು ಕೆಳಸೇತುವೆ ಸಹ ಒಳಗೊಂಡಿದೆ. ಇದು ಬೆಂಗಳೂರು ಪಶ್ಚಿಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಲಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ ಒಂಬತ್ತು ಬ್ಲಾಕ್‌ಗಳನ್ನು ಸಂಪರ್ಕಿಸುವ ಈ ರಸ್ತೆಯು ಬಳಕೆಗೆ ಲಭ್ಯವಾದರೆ ಬಡಾವಣೆಯಲ್ಲಿ ನಿವೇಶನ ಹೊಂದಿರುವವರು ಮನೆಗಳ ನಿರ್ಮಾಣ ಮಾಡಲು ಉತ್ತೇಜನ ದೊರೆಯಲಿದೆ. ಬಡಾವಣೆಯಲ್ಲಿ ಒಂದು ಕಿಲೋ ಮೀಟರ್ ಹೊರತುಪಡಿಸಿ ಉಳಿದ ಭಾಗಗಳಲ್ಲಿ ಶೇಕಡ 80ರಷ್ಟು ಕಾಮಗಾರಿ ನಡೆದಿತ್ತು. ಪ್ರಮುಖ ಪ್ರದೇಶಗಳಾದ ಮಾಚೋಹಳ್ಳಿ, ಸೂಲಿಕೆರೆ, ಕನ್ನಹಳ್ಳಿ ಮತ್ತು ಚಲ್ಲಘಟ್ಟದಲ್ಲಿ ಭೂಸ್ವಾಧೀನ ಸಮಸ್ಯೆಯಿಂದಾಗಿ ಯೋಜನೆಯು ಹಿನ್ನಡೆಯನ್ನು ಅನುಭವಿಸಿತ್ತು.

ಕೆಂಪೇಗೌಡ ಬಡಾವಣೆಯೊಳಗೆ ಹಾದು ಹೋಗುವ ಎಂಎಆರ್ ಮತ್ತು ಹೆದ್ದಾರಿ ಸಂಪರ್ಕಿಸಲು ರ‍್ಯಾಂಪ್ ನಿರ್ಮಿಸಬೇಕು ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಪ್ರತಿನಿಧಿಗಳು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಬಂದ ಬಳಿಕ ಸಚಿವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ಜತೆಗೆ ರಸ್ತೆ ಸಂಪರ್ಕ ಕಲ್ಪಿಸುವ ಕುರಿತು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಬರೆದ ಪತ್ರದ ಕುರಿತು ಚರ್ಚಿಸಲಾಗಿದೆ.

‘ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ಬಿಡಿಎ ವಿಸ್ತರಿಸುತ್ತಿದ್ದು, 9 ಸಾವಿರ ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲು ನಿರ್ಧರಿಸಿದೆ. ಬಡಾವಣೆಯ ವಿಸ್ತರಣೆಗಾಗಿ ಗುರುತಿಸಿರುವ ಜಮೀನುಗಳು ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಯ ನಡುವೆ ಹಾಗೂ ನೈಸ್ ರಸ್ತೆಯ ಹೊರಗಿನ 17 ಗ್ರಾಮಗಳ ವ್ಯಾಪ್ತಿಯಲ್ಲಿವೆ. ಸಾವಿರಾರು ಕುಟುಂಬಗಳು ವಾಸವಾಗಿವೆ. ನೈಸ್ ರಸ್ತೆಗೆ ಸಮಾನಾಂತರವಾಗಿರುವ ಪ್ರಮುಖ ಸಂಪರ್ಕ ರಸ್ತೆಯೇ ಬಡಾವಣೆಗೆ ಪ್ರಾಥಮಿಕ ಸಂಪರ್ಕ ರಸ್ತೆಯಾಗಿದೆ. ಆದ್ದರಿಂದ ಹೆದ್ದಾರಿಯೊಂದಿಗಿನ ಸುಗಮ ಸಂಪರ್ಕ ಅನಿವಾರ್ಯವಾಗಿದೆ. ಇಲ್ಲದಿದ್ದರೆ ಪ್ರಯಾಣ ಸಮಯ ಹೆಚ್ಚಳ, ಚಲ್ಲಘಟ್ಟ ಮತ್ತು ಕುಂಬಳಗೋಡಿನಲ್ಲಿ ದಟ್ಟಣೆ ಹೆಚ್ಚಾಗಬಹುದು’ ಎಂದು ಮುಕ್ತ ವೇದಿಕೆ ಹೇಳಿದೆ.

ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 10.7 ಕಿಲೋ ಮೀಟರ್ ಉದ್ದದ ಪ್ರಮುಖ ಮುಖ್ಯರಸ್ತೆ ಕಾಮಗಾರಿ ನಡೆಯುತ್ತಿದೆ.

ರೈಲ್ವೆ ಕಾಮಗಾರಿ ನವೆಂಬರ್‌ಗೆ ಅನುಮತಿ ಸಾಧ್ಯತೆ

‘ಎಂಎಆರ್ ರಸ್ತೆ ಕಾಮಗಾರಿ ಶೇಕಡ 90ರಷ್ಟು ಪೂರ್ಣಗೊಂಡಿದೆ. ಸೂಲಿಕೆರೆ ಬಳಿಯ ಅರಣ್ಯದಲ್ಲಿ 180 ಮೀಟರ್ ರಸ್ತೆ ಕೆಲಸ ಬಾಕಿ ಇದೆ. ಅರಣ್ಯ ಇಲಾಖೆ ಅನುಮತಿ ದೊರೆತಿದ್ದು, ಕೆಲಸ ಪ್ರಗತಿಯಲ್ಲಿದೆ. ಕೆಂಗೇರಿ ಮತ್ತು ಹೆಜ್ಜಾಲ ರೈಲು ನಿಲ್ದಾಣಗಳ ನಡುವೆ ಚಲಘಟ್ಟ ಬಳಿ ರೈಲ್ವೆ ಕೆಳಸೇತುವೆ ಕಾಮಗಾರಿ ನಡೆಯುತ್ತಿದ್ದು, 6–7 ಹಳಿಗಳನ್ನು ಬದಲಿಸಲು ರೈಲ್ವೆ ಇಲಾಖೆ ಅನುಮತಿ ನೀಡಬೇಕು. ಗರ್ಡರ್‌ಗಳು (ತೊಲೆ) ಸಿದ್ದಗೊಂಡಿದ್ದು, 6–7 ತಾಸು ಕೆಲಸ ಹಿಡಿಯಲಿದೆ. ಈ ವೇಳೆ ರೈಲು ಸಂಚಾರ ಸ್ಥಗಿತಗೊಳಿಸಬೇಕಿದೆ. ಇಲಾಖೆಯ ಅಧಿಕಾರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ಅನುಮತಿ ನೀಡುವುದು ವಿಳಂಬವಾದ ಕಾರಣ ಕಾಮಗಾರಿ ಪೂರ್ಣಗೊಳ್ಳುವುದು ಎರಡು ತಿಂಗಳು ತಡವಾಗಬಹುದು. ನವೆಂಬರ್‌ಗೆ ಅನುಮತಿ ನೀಡುವುದಾಗಿ ರೈಲ್ವೆ ಇಲಾಖೆ ಹೇಳಿದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE
General Public are hereby informed that 1. Mr. JOSEPH ARUN KAROTTU S/o. Karottupuram Kurien Joseph intending to purchase the schedule property from its lawful owner Smt. GOWRAMMA W/o Late. Sri Venkataswamy R/at No. Dasarahalli Village, Jodi dasarahalli Post, Hoskote Taluk, Bangalore Rural District-562 114.
Having acquired the same through a registered partition deed dated 04/01/2024, registered as document No.14662/2023-24, before the office of Sub-registrar, Hoskote, Bangalore Rural.
Anyone having any objections to the proposed sale may lodge their claim with the undersigned with documents, A within 14 days from the date of this publication, failing which I would proceed with further transaction and documentation / execution of sale deed, and any claim lodged thereafter shall not be reckoned with and not binding on me.
SCHEDULE PROPERTY
All that piece and parcel of Agricultural land bearing Sy.No. 51/6, Old Sy.No.51/1, measuring 1 Acre situated at Gottipura Village, Jadigenahalli Hobli, Hoskote Taluk, Bangalore Rural District and bounded as follows. East By: Smt. Krishnamma's Property; West By: Sri. Narayanaswami's Property; North By: Land in Sy.No.51/2; South By: Land in Sy.No.54.
ARB Law Associates
No.44, 2nd Cross, Basavanapura Main Rd, Gayathri Layout, Devasandra, Krishnarajapuram, Bengaluru, Karnataka-560036
Ph No.7760332427, 9739272817

REAL ESTATE SELLING

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

PERSONAL

Announcements

ANNOUNCEMENT
I, Atharva Manchalkar, Residing At Inamdar Colony House No. 572, Vijayapura Dist, do hereby declare that in my Aadhaar Card and Driving Licence, my Father's name is mentioned as Ravi Dashrathrao Manchalkar, in my Pan Card my Father's name is mentioned as Ravi Dasharathrao Manchalkar, In my 10th And 12th Marks Card my Father's name is mentioned as Ravi, In My Birth Certificate my Father's name is mentioned as Ravi Dashrath Manchalkar, and in my Voter Id Card my Father's name is mentioned as Ravi Manchalkar. These names refer to one and the same person, I.E., My Father. This declaration is made vide affidavit registered with certificate No. In-KA70462473668180X, Unique doc reference no. Subin-KAKAKSFCL0850509926136386x In Article 4 Affidavit, Dated: 16-oct-2025, 10:46 am, before Advocate D.S Jinjarawad, Notary, Vijayapura.

TOURS & TRAVEL

Travel

SRILANKA TOUR, WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನಿವೃತ್ತಿ ವಯಸ್ಸು: ವಿಸ್ತೃತ ಪೀಠಕ್ಕೆ ವರ್ಗ

ನವದೆಹಲಿ (ಪಿಟಿಐ): ಆಯುರ್ವೇದ, ಯುನಾನಿ, ಹೋಮಿಯೊಪಥಿ ವೈದ್ಯರ ನಡುವಿನ ಸಮಾನತೆಗೆ ಸಂಬಂಧಿಸಿದಂತೆ ಉದ್ಭವಿಸಿರುವ ಪ್ರಶ್ನೆಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ವಿಸ್ತೃತ ನ್ಯಾಯಪೀಠಕ್ಕೆ ವರ್ಗಾಯಿಸಿದೆ.

ಅಲೋಪಥಿ ಹಾಗೂ ಆಯುರ್ವೇದ ವೈದ್ಯರಿಗೆ ನಿವೃತ್ತಿ ವಯಸ್ಸು ಬೇರೆ ಬೇರೆ ಇರಬಹುದೇ ಎಂದು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಅವರ ಪೀಠವು ಮೇ 13ರಂದು ವಿಚಾರಣೆ ನಡೆಸಿ, ತೀರ್ಪು ಕಾಯ್ದಿರಿಸಿತ್ತು.

ಬಳಿಕ, ಅ. 17ರಂದು ನೀಡಿದ ಆದೇಶದಲ್ಲಿ, ‘ಎರಡೂ ವೈದ್ಯಕೀಯ ಪದ್ಧತಿಗಳ ವೈದ್ಯರನ್ನು ಸೇವಾ ಸೌಲಭ್ಯಗಳಲ್ಲಿ ಒಂದೇ ರೀತಿ ಪರಿಗಣಿಸಬಹುದೇ ಎಂಬುದರ ಬಗ್ಗೆ ವಿಭಿನ್ನ ಅಭಿಪ್ರಾಯ ವ್ಯಕ್ತವಾಗಿವೆ. ಈ ಬಗ್ಗೆ ಒಂದು ಸ್ಪಷ್ಟ ತೀರ್ಮಾನಕ್ಕೆ ಬರಬೇಕಿದೆ’ ಎಂದು ನ್ಯಾಯಪೀಠ ಹೇಳಿದೆ.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: B/TRD.2025-26/20
ದಿನಾಂಕ: 16.10.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(1) 2027ರ ವೇಳೆಗೆ ಎಸ್‌ಜಿಟಿ ವೇಗನ್ ಡಿಪೋನ ಫ್ರೈಟ್ ಲೋಡಿಂಗ್ ಸಾಮರ್ಥ್ಯವನ್ನು 3000 ಮೆಟ. ವರೆಗೆ ಹೆಚ್ಚಿಸುವ ಬೇಡಿಕೆಯ ಪ್ರಸ್ತಾವನೆಗೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕಾಮಗಾರಿಗಳು. (2) ಎಸ್‌ಜಿಟಿ ಯಾರ್ಡ್‌ನಲ್ಲಿ ಎನ್‌ಎಂಜಿ ನಿರ್ವಹಣೆಗಾಗಿ ಪ್ರಸ್ತಾವಿತ ಹೊಸ ಐಓಹೆಚ್ ಶೆಡ್‌ನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕಾಮಗಾರಿಗಳು. (3) ಎಸ್‌ಜಿಟಿ–ಟಿಆರ್‌ಡಿ ಕಾಮಗಾರಿಗಳ ಎಸಿ ಲೋಕೊ ಟ್ರಿಪ್ ಶೆಡ್‌ನಲ್ಲಿ ಹೊಸ ಪಿಟ್‌ಲೈನಿನ ನಿರ್ಮಾಣ ಕಾರ್ಯ.	ರೂ. 5,26,82,274.76/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.11.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಟ್ರಾಕ್ಷನ್ ವಿನಿಯೋಗ/ಬೆಂಗಳೂರು
PUB/570/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

PUBLIC NOTICE
It is hereby notified that, my clients have agreed to purchase the Schedule property from its owners: (1)Sri.M.M.ANAND RAM S/o late M.L.Manjanath Shetty, (2) Sri.MYSORE MANJANATHASETTY PANDURANGA S/o late M.L.Manjanath Shetty, (3)Sri.M.M.PARTHA SARATHI S/o late M.L.Manjanath Shetty; (4)Sri.MYSORE SAMPATHKUMAR SHIVAKUMAR S/o late M.M.Sampath Kumar and his two sisters Smt.USHA RANI CHILKEPALLY & Smt.M.S.ASHA; and (5)Sri.MAHESH LACHIA MANJANATHA S/o late M.Lachia Setty and his sister Smt.K.S.ANURADHA.
Apart from the said owners, if any other person/s have any manner of claim or interest or demand over the Schedule property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within 14 days from the date of publication of this notice. Objection/s received thereafter will not be binding on my clients.
SCHEDULE
All that piece and parcel of the vacant immovable property bearing Municipal No.185 (PID No.61-35-185, New EPID No.2507381096) and Municipal No.59 (PID No.61-11-59, New EPID No.2507391989), together measuring on the East 100ft; on the West 90ft; on the North 115ft; and on the South 100ft, in all measuring 10,212.5 Sq.ft, situated at Rasthriya Vidyalaya Road and Mavalli Main Road, Bangalore and bounded on:
East by : Mavalli Main Road/Susheela Road;
West by : Rasthriya Vidyalaya Road;
North by : Property bearing No.182; and
South by : Property of Raghavendra.
Sd/- S.F. GOUTAM CHAND, Advocate, GOUTAM ASSOCIATES,
No.60, 2nd Floor, Old Kanakapura Road, Basavanagudi, Bengaluru - 560004.

ತಪ್ಪು ಮಾಹಿತಿ ಬದಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನ್ಯಾಸಕರ ಸಾಮಾನ್ಯ ವರ್ಗಾವಣೆ ಸಂದರ್ಭದಲ್ಲಿ ತಪ್ಪು ಮಾಹಿತಿ ನೀಡಿರುವ ಕೆ.ಆರ್. ಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರತಿಭಾ ಪಾರ್ಶ್ವನಾಥ್ ಅವರನ್ನು ತಕ್ಷಣದಿಂದಲೇ ಹುದ್ದೆಯಿಂದ ಮುಕ್ತಗೊಳಿಸುವಂತೆ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಇಲಾಖೆಯ ಬೆಂಗಳೂರು ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

'2024–25ನೇ ಸಾಲಿನ ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಭೌತವಿಜ್ಞಾನ ವಿಷಯದಲ್ಲಿ ಉಪನ್ಯಾಸಕರ ಕಾರ್ಯಭಾರದ ಬಗ್ಗೆ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿ ಇಬ್ಬರು ಉಪನ್ಯಾಸಕರು ವರ್ಗಾವಣೆಯಿಂದ ಅವಕಾಶ ವಂಚಿತರಾಗಲು ಪ್ರತಿಭಾ ಪಾರ್ಶ್ವನಾಥ್ ಕಾರಣರಾಗಿದ್ದಾರೆ. ಹೀಗಾಗಿ, ಪ್ರತಿಭಾ ಅವರು ವಹಿಸಿರುವ ಹುದ್ದೆಯನ್ನು ಅವರ ನಂತರ ಸೇವಾ ಜ್ಯೇಷ್ಠತೆಯಲ್ಲಿ ಹಿರಿಯರಾದ ಪ್ರಾಧ್ಯಾಪಕರು, ಸಹ ಅಥವಾ ಸಹಾಯಕ ಪ್ರಾಧ್ಯಾಪಕರೊಬ್ಬರಿಗೆ ಕೂಡಲೇ ವಹಿಸಿ ವರದಿ ನೀಡಬೇಕು’ ಎಂದೂ ನಿರ್ದೇಶನ ನೀಡಿದ್ದಾರೆ.

‘2024–25ನೇ ಸಾಲಿನಲ್ಲಿ ವರ್ಗಾವಣೆ ಪ್ರಕ್ರಿಯೆ ಆರಂಭಕ್ಕೂ ಮೊದಲು ಕೆ. ಆರ್. ಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭೌತವಿಜ್ಞಾನ ವಿಷಯದಲ್ಲಿ ಹೆಚ್ಚಿನ ಕಾರ್ಯಭಾರದ ಕಾರಣಕ್ಕೆ ಹುದ್ದೆಗಳು ಖಾಲಿ ಇವೆ ಎಂದು ತೋರಿಸಲಾಗಿತ್ತು. ಆದರೆ, ವರ್ಗಾವಣೆಯ ಕೌನ್ಸೆಲಿಂಗ್ ನಡೆಯುವ ಸಂದರ್ಭದಲ್ಲಿ ಕಾರ್ಯಭಾರ ಅವಧಿಯನ್ನು ಕಡಿಮೆ ತೋರಿಸಿ, ಹುದ್ದೆಗಳು ಖಾಲಿ ಇಲ್ಲ ಎಂದು ತೋರಿಸಲಾಗಿತ್ತು. ಇದರಿಂದಾಗಿ ಈ ಕಾಲೇಜಿಗೆ ವರ್ಗಾವಣೆ ಪಡೆಯುವ ಅವಕಾಶದಿಂದ ಇಬ್ಬರು ಉಪನ್ಯಾಸಕರು ವಂಚಿತರಾಗಿದ್ದರು’ ಎಂದು ಉಪನ್ಯಾಸಕರೊಬ್ಬರು ದೂರಿದರು.

ನೈಋತ್ಯ ರೈಲ್ವೆ
ಅರ್ಜಿ ಅಧಿಸೂಚನೆ ಸಂ.: 210/Halts/GLT Halt/2025/SBC Division
ದಿನಾಂಕ: 13.10.2025
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಮಾಡಿದವರು, ಜನಘಟ್ಟ (ಜಿಜಿಟಿ) ಹಾಲ್ಟ್ ರೈಲು ನಿಲ್ದಾಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಂದ ಐದು (05) ವರ್ಷಗಳಅವಧಿಗೆ ಅಥವಾ ನಿಲ್ದಾಣವನ್ನು ಉನ್ನತೀಕರಣಗೊಳಿಸುವವರೆಗೆ ಯಾವುದು ಮೊದಲೇ ಅದರಂತೆ ಕಮಿಷನ್‌ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸುವ ಸಲುವಾಗಿ ಹಾಲ್ಟ್ ಏಜೆಂಟ್‌ಗಳ ನೇಮಕಾತಿಗಾಗಿಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸುತ್ತಾರೆ.

ಕ್ರ.ಸಂ.	ನಿಲ್ದಾಣದ ಹೆಸರು	ವಿಭಾಗ	ಕಾರ್ಯಾರಂಭಗೊಳಿಸುವ ದಿನಾಂಕ
1.	ಜನಘಟ್ಟ (ಜಿಜಿಟಿ)	ಯಲಹಂಕ	ದಿನಾಂಕವನ್ನು ಆಡಳಿತ ಮಂಡಳಿಯಿಂದ ಸೂಚಿಸಲಾಗುವುದು

ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ ಮತ್ತು ಸಮಯ: 10.11.2025 ರಂದು 10:00 ರಿಂದ 16:00 ಗಂಟೆಯವರೆಗೆ
ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 10.11.2025 ರಂದು 16:05 ಗಂಟೆಗೆ
ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
PUB/562/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ತಮಿಳುನಾಡಿನ ಮೊದಲ ಅಂತರರಾಜ್ಯ ಮೆಟ್ರೊ ಮಾರ್ಗಕ್ಕೆ ಅಡ್ಡಿ

ಹೊಸೂರಿಗೆ ಮೆಟ್ರೊ ಸಾಧ್ಯತೆ ಇಲ್ಲ

● ಮುತೀ ಉರ್ ರಹ್ಮಾನ್ ಸಿದ್ದೀಕೀ

ಬೆಂಗಳೂರು: ಬೆಂಗಳೂರು– ಹೊಸೂರು ಸಂಪರ್ಕಿಸುವ ದಕ್ಷಿಣ ಭಾರತದ ಮೊದಲ ಅಂತರರಾಜ್ಯ ಮೆಟ್ರೊ ಮಾರ್ಗ ನಿರ್ಮಿಸುವ ತಮಿಳುನಾಡಿನ ಯೋಜನೆ ನನಸಾಗದೇ ಇರುವ ಹಂತಕ್ಕೆ ತಲುಪಿದೆ.

ಎರಡೂ ರಾಜ್ಯಗಳ ಮೆಟ್ರೊ ವ್ಯವಸ್ಥೆಗಳು ವಿಭಿನ್ನ ವಿದ್ಯುತ್ ಶಕ್ತಿ ಚಾಲಿತ ತಾಂತ್ರಿಕತೆಯನ್ನು ಬಳಸುತ್ತಿರುವುದರಿಂದ ಸಂಯೋಜಿಸಲು ಸಾಧ್ಯವಿಲ್ಲ. ಹಾಗಾಗಿ 23 ಕಿ.ಮೀ. ಉದ್ದದ ಹೊಸೂರು-ಬೊಮ್ಮಸಂದ್ರ ಕಾರಿಡಾರ್ ತಾಂತ್ರಿಕವಾಗಿ ಕಾರ್ಯಸಾಧುವಲ್ಲ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಚೆನ್ನೈ ಮೆಟ್ರೊ ರೈಲು ಲಿಮಿಟೆಡ್ (ಸಿಎಂಆರ್‌ಎಲ್) 25 ಕೆ.ವಿ. ಎಸಿ ಓವರ್‌ಹೆಡ್ ಶಕ್ತಿ ಬಳಸಿಕೊಂಡು ಹೊಸೂರನ್ನು ಬೊಮ್ಮಸಂದ್ರದೊಂದಿಗೆ ಸಂಪರ್ಕಿಸಲು ಕಾರ್ಯಸಾಧ್ಯತಾ ಅಧ್ಯಯನವನ್ನು ಪ್ರಸ್ತಾಪಿಸಿತ್ತು.

ಈ ಮಧ್ಯೆ ಬೊಮ್ಮಸಂದ್ರದಿಂದ ತಮಿಳುನಾಡಿನ ಕಡೆಗೆ ಕೊನೆಯ ಉಪನಗರವಾದ ಅತ್ತಿಬೆಲೆಗೆ ಮೆಟ್ರೊವನ್ನು ವಿಸ್ತರಿಸಲು ಬಿಎಂಆರ್‌ಸಿಎಲ್ ತನ್ನದೇ ಆದ ಅಧ್ಯಯನವನ್ನು ನಡೆಸಿತು. 11 ಕಿ.ಮೀ. ಉದ್ದದ ಈ ಮಾರ್ಗವು ನಮ್ಮ ಮೆಟ್ರೊ ಜಾಲದ ಉಳಿದ ಭಾಗಗಳಂತೆ 750 ಕೆ.ವಿ. ಡಿಸಿ ವಿದ್ಯುತ್ ಶಕ್ತಿ ಬಳಸಲಿದೆ.

‘ನಾವು ನಮ್ಮ ಅಭಿಪ್ರಾಯವನ್ನು ರಾಜ್ಯ ಸರ್ಕಾರದೊಂದಿಗೆ ಹಂಚಿಕೊಂಡಿದ್ದೇವೆ. ಅಂತಿಮ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಮಿಳುನಾಡು ಸರ್ಕಾರವು ಕೈಗಾರಿಕಾ ಪಟ್ಟಣವನ್ನು ಅಭಿವೃದ್ಧಿ ಪಡಿಸುವ ಪ್ರಯತ್ನದ ಭಾಗವಾಗಿ ಹೊಸೂರು-ಬೊಮ್ಮಸಂದ್ರ ಮೆಟ್ರೊ ಯೋಜನೆ ಆರಂಭಿಸುವ ಉದ್ದೇಶ ಹೊಂದಿತ್ತು. ಇದಕ್ಕೆ ಕರ್ನಾಟಕದಲ್ಲಿ ವಿರೋಧ ವ್ಯಕ್ತವಾಗಿತ್ತು. ಈ ಯೋಜನೆಯಿಂದ ಬೆಂಗಳೂರಿಗಿಂತ ಹೊಸೂರಿಗೆ ಹೆಚ್ಚು ಪ್ರಯೋಜನವಾಗಲಿದೆ. ಬೆಂಗಳೂರಿಗೆ ಮತ್ತಷ್ಟು ಹೊರೆಯಾಗಲಿದೆ ಎಂಬುದು ವಿರೋಧ ವ್ಯಕ್ತಪಡಿಸಿದವರ ವಾದವಾಗಿತ್ತು.

ಯೋಜನೆ ಪ್ರಕಾರ ಎರಡೂ ರಾಜ್ಯಗಳ ಗಡಿಯಲ್ಲಿ 300 ಮೀಟರ್ ಅಂತರದಲ್ಲಿ ಎರಡು ನಿಲ್ದಾಣಗಳು ನಿರ್ಮಾಣಗೊಳ್ಳಬೇಕು. ಈ 300 ಮೀಟರ್ ಅನ್ನು ಪಾದಚಾರಿ ಮೇಲ್ಸೇತುವೆ ಮೂಲಕ ದಾಟಬೇಕು. ಇದು ಕಾರ್ಯಸಾಧುವಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ವಿವಿಧ ಯೋಜನೆ: ದೊಡ್ಡಜಾಲ-ದೇವನಹಳ್ಳಿಗೆ ನೀಲಿಮಾರ್ಗ ವಿಸ್ತರಣೆ, ಕೆ.ಆರ್.ಪುರದಿಂದ ಹೊಸಕೋಟೆಗೆ ನೇರಳೆ ಮಾರ್ಗ, ಕಡಬಗೆರೆಯಿಂದ ತಾವರಕೆರೆಗೆ ಬೆಳ್ಳಿ ಮಾರ್ಗ ವಿಸ್ತರಣೆ, ಕಾಳೇನ ಅಗ್ರಹಾರದಿಂದ ಬನ್ನೇರುಘಟ್ಟ, ಜಿಗಣಿ, ಅತ್ತಿಬೆಲೆ, ಸರ್ಜಾಪುರ, ದೊಮ್ಮಸಂದ್ರ ಮತ್ತು ವರ್ತೂರು ಕೋಡಿ ಮೂಲಕ ಕಾಡುಗೋಡಿ ಟ್ರೀ ಪಾರ್ಕ್‌ಗೆ ಹೊಸದಾಗಿ 68 ಕಿಮೀ ಮಾರ್ಗ ನಿರ್ಮಿಸುವ ಯೋಜನೆಗಳಿವೆ.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನಮ್ಮ ಮೆಟ್ರೊ ಜಾಲವನ್ನು ದೆಹಲಿಯ ಮೆಟ್ರೊ ಜಾಲಕ್ಕೆ ಸಮಾನವಾಗಿ 470 ಕಿ.ಮೀ.ಗೆ ವಿಸ್ತರಿಸುವ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ಬಿಎಂಆರ್‌ಸಿಎಲ್‌ಗೆ ತಿಳಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಏಳು ವಿಸ್ತರಣೆಗಳು ಮತ್ತು ಹೊಸ ಮಾರ್ಗಗಳು ಸೇರಿ ಒಟ್ಟು 210.9 ಕಿ.ಮೀ. ಆಗುತ್ತದೆ. ಇದು ನಮ್ಮ ಮೆಟ್ರೊದ ಒಟ್ಟು ಯೋಜಿತ ಜಾಲವನ್ನು 467.69 ಕಿ.ಮೀ.ಗಳಿಗೆ ತಲುಪಿಸಲಿದೆ. ದೆಹಲಿ-ಎನ್‌ಸಿಆರ್ ಮೆಟ್ರೊದ ಯೋಜಿತ ಜಾಲ 467 ಕಿ.ಮೀ.ಗಳಿಗೆ ಸಮಾನವಾಗಿರಲಿದೆ.

ವಿವಿಧೆಡೆ ವಿಸ್ತರಣೆ

ಬಿಎಂಆರ್‌ಸಿಎಲ್ ಮಾದಾವರದಿಂದ ತುಮಕೂರಿನವರೆಗೆ (59.6 ಕಿ.ಮೀ) ಹಸಿರು ಮಾರ್ಗವನ್ನು ವಿಸ್ತರಿಸುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ಮಾಡಿದೆ. 25 ನಿಲ್ದಾಣಗಳನ್ನು ಹೊಂದಿರುವ ₹20,896 ಕೋಟಿ ವೆಚ್ಚದ ಈ ಮಾರ್ಗಕ್ಕಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವಂತೆ ರಾಜ್ಯ ಸರ್ಕಾರ ನಿರ್ದೇಶಿಸಿದೆ.

ಸಿಲ್ಕ್ ಇನ್‌ಸ್ಟಿಟ್ಯೂಟ್‌ನಿಂದ ಕನಕಪುರ ರಸ್ತೆಯ ಹಾರೋಹಳ್ಳಿಯವರೆಗಿನ ಹಸಿರು ಮಾರ್ಗದ ದಕ್ಷಿಣ ವಿಸ್ತರಣೆಯು 18 ನಿಲ್ದಾಣಗಳೊಂದಿಗೆ 24 ಕಿ.ಮೀ. ಉದ್ದವಿರುತ್ತದೆ. ಇದು ಹಳ್ಳಿಗಳ ಮೂಲಕ ಹಾದು ಹೋಗುವುದರಿಂದ ಕಡಿಮೆ ನಿಲ್ದಾಣಗಳಿರಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನೇರಳೆ ಮಾರ್ಗವನ್ನು ಚಲ್ಲಘಟ್ಟದಿಂದ ಬಿಡದಿಯವರೆಗೆ 15 ಕಿ.ಮೀ. ವಿಸ್ತರಿಸುವ ಯೋಜನೆ ಇದೆ. ಇದು 13 ನಿಲ್ದಾಣಗಳನ್ನು ಹೊಂದಿರಲಿದೆ. ಈ 4 ವಿಸ್ತರಣೆಗಳಿಗೆ ಕಾರ್ಯಸಾಧ್ಯತಾ ವರದಿಗಳನ್ನು ಹೈದರಾಬಾದ್‌ನ ಆರ್ವೀ ಅಸೋಸಿಯೇಟ್ಸ್ ಆರ್ಕಿಟೆಕ್ಟ್ಸ್ ಎಂಜಿನಿಯರ್ಸ್ ಮತ್ತು ಕನ್ಸಲ್ಟೆಂಟ್ಸ್ ಪ್ರೈವೆಟ್ ಲಿಮಿಟೆಡ್ ಸಿದ್ಧಪಡಿಸಿದೆ. ಕರಡು ವರದಿಗಳು ಸಿದ್ಧವಾಗಿವೆ ಮತ್ತು ಅಕ್ಟೋಬರ್ ಅಂತ್ಯದ ವೇಳೆಗೆ ಅಂತಿಮಗೊಳಿಸಲಾಗುವುದು ಎಂದು ಅಧಿಕಾರಿಯೊಬ್ಬರು ಹೇಳಿದರು.

ಡಯಟ್‌ಗೆ ಹೊಣೆ ಸಂಘದ ಆಕ್ಷೇಪ

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಲು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಹಿರಿಯ ಉಪನ್ಯಾಸಕರನ್ನು ನಿಯೋಜನೆ ಮಾಡಿರುವ ಸುತ್ತೋಲೆಗೆ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪದವಿ ಪೂರ್ವ ಶಿಕ್ಷಣದ ಗುಣಮಟ್ಟ ಅಳೆಯಲು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿದೆ. ಡಯಟ್ ಉಪನ್ಯಾಸಕರು ಪ್ರತಿ ಕಾಲೇಜಿಗೂ ತೆರಳಿ ಈ ಪ್ರಶ್ನಾವಳಿಗಳ ಆಧಾರದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಿ, ಮೊಬೈಲ್ ಅಪ್ಲಿಕೇಷನ್‌ನಲ್ಲಿ ಅಪ್‌ಲೋಡ್ ಮಾಡಲಿದ್ದಾರೆ.

ಈ ಕುರಿತು ಪತ್ರ ಬರೆದಿರುವ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಡಿಎಸ್‌ಇಆರ್‌ಟಿ ಜಂಟಿಯಾಗಿ ಹೊರಡಿಸಿರುವ ಸುತ್ತೋಲೆಯನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿದೆ.

‘ಈ ಆದೇಶ ಪದವಿ ಪೂರ್ವ ಶಿಕ್ಷಣದ ಅಸ್ಮಿತೆ, ಗೌರವದ ಬಗ್ಗೆ ಗಂಭೀರ ಪ್ರಶ್ನೆ ಎತ್ತಿದೆ. ಡಯಟ್ ಉಪನ್ಯಾಸಕರಿಗೆ ಪದವಿ ಪೂರ್ವ ಪಠ್ಯಕ್ರಮದ ವೈಜ್ಞಾನಿಕ ಹಿನ್ನೆಲೆ, ಎನ್‌ಸಿಇಆರ್‌ಟಿ ಆಧಾರಿತ ವಿಷಯದ ವ್ಯಾಪ್ತಿ ಹಾಗೂ ಆಳವಾದ ಅರಿವು ಇರುವುದಿಲ್ಲ. ವಿಷಯದ ಅರಿವಿಲ್ಲದವರು ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಬೋಧನೆ, ಪ್ರಾಯೋಗಿಕತೆ ಹಾಗೂ ಪಠ್ಯಮೌಲ್ಯ ಹೇಗೆ ವಿಮರ್ಶಿಸಬಲ್ಲರು’ ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಪ್ರಶ್ನಿಸಿದ್ದಾರೆ.

ತೆರಿಗೆದಾರರಿಗೆ ಪ್ರಶ್ನಿಸುವ ಅಧಿಕಾರವೂ ಇದೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಯಮಿಗಳ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ರಸ್ತೆ ಸರಿಪಡಿಸಿ ಎಂದರೆ ಇವರು ನೀತಿ ಪಾಠ ಹೇಳುತ್ತಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮೋಹನ್‌ದಾಸ್ ಪೈ ಹಾಗೂ ಕಿರಣ್ ಮಜುಂದಾರ್ ಷಾ ಪ್ರಶ್ನೆ ಮಾಡಿದರೆ ಅವರನ್ನೂ ಶಿವಕುಮಾರ್ ಟೀಕಿಸಿದ್ದಾರೆ. ಬೆಂಗಳೂರಿನಿಂದ ಎಲ್ಲವನ್ನೂ ಪಡೆದಿದ್ದಾರೆ ಎನ್ನಲು ಈ ನಗರವನ್ನು ಸಿದ್ದರಾಮಯ್ಯ–ಶಿವಕುಮಾರ್ ಕಟ್ಟಿ ಬೆಳೆಸಿದ್ದಲ್ಲ’ ಎಂದು ಕಿಡಿಕಾರಿದರು.

ತೆರಿಗೆ ಕಟ್ಟುವವರಿಗೆ ಪ್ರಶ್ನೆ ಕೇಳುವ ಅಧಿಕಾರವೂ ಇದೆ. ಬಿಜೆಪಿ ಸರ್ಕಾರ ಇದ್ದಾಗಲೂ ಇದೇ ಉದ್ಯಮಿಗಳು ‘ಎಕ್ಸ್’ ಮೂಲಕ ಪ್ರಶ್ನೆ ಕೇಳಿದ್ದರು. ಆಗ ಅಧಿಕಾರಿಗಳ ಜತೆ ಚರ್ಚೆ ನಡೆಸಿ ಕೂಡಲೇ ಹಣ ಬಿಡುಗಡೆ ಮಾಡಿ ರಸ್ತೆ ದುರಸ್ತಿ ಮಾಡಲಾಗಿತ್ತು. ಸಮಸ್ಯೆ ಬಂದಾಗ ಟೀಕಿಸಿದವರನ್ನು ತೆಗಳುವುದು ಬಿಟ್ಟು ಸಮಸ್ಯೆಗಳನ್ನು ಬಗೆಹರಿಸಲಿ. ರಸ್ತೆ ಗುಂಡಿ ಮುಚ್ಚಲು ₹2,000 ಕೋಟಿ ಖರ್ಚು ಮಾಡಿದ್ದಾಗಿ ಸರ್ಕಾರ ಹೇಳುತ್ತಿದೆ. ಅದರ ಫಲಿತಾಂಶ ಕಾಣುತ್ತಿಲ್ಲ. ಆ ಹಣ ಎಲ್ಲಿ ಹೋಗಿದೆ ಎಂದು ಅಶೋಕ ಪ್ರಶ್ನಿಸಿದರು.

ಪ್ರವಾಹ ಬಂದಾಗ ಸರ್ವಪಕ್ಷ ಸಭೆ ಕರೆಯಬೇಕಿತ್ತು. ಸಭೆ ನಡೆಸದೆ, ಕೇಂದ್ರ ಸರ್ಕಾರದ ಬಳಿ ಹೋಗದೆ ಪರಿಹಾರ ಸಿಗುತ್ತಿಲ್ಲ ಎನ್ನುತ್ತಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರ ನಿಯಮದ ಅನುಸಾರ ಪರಿಹಾರ ಬಿಡುಗಡೆ ಮಾಡಿದೆ ಎಂದರು.

ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಮತ್ತು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಅವರು ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು

ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ನಿರ್ದೇಶಿಸಿದ ಹೈಕೋರ್ಟ್

‘ಆಭರಣ’ದ ಅಕ್ರಮ ಕಟ್ಟಡ: ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆ.ಪಿ ನಗರ ಐದನೇ ಹಂತದಲ್ಲಿರುವ ಆಭರಣ ಟೈಮ್‌ಲೆಸ್ ಜ್ಯುವೆಲರ್ಸ್ ಮಳಿಗೆಯ ಸ್ಥಿರಾಸ್ತಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಕಾನೂನು ಬಾಹಿರ ಕಟ್ಟಡ ನಿರ್ಮಾಣದ ಬಗೆಗಿನ ದೂರನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಿ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಹೈಕೋರ್ಟ್ ನಿರ್ದೇಶಿಸಿದೆ.

ಅಕ್ರಮ ಕಟ್ಟಡ ನಿರ್ಮಾಣ ಪ್ರಶ್ನಿಸಿ ಆನೇಕಲ್‌ನ ನಾರಾಯಣ ಸ್ವಾಮಿ ಲೇ ಔಟ್‌ನ ಧನುಷ್ ಮತ್ತು ಸಹಕಾರ ನಗರದ ಭರತ್ ಕಾಮತ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರಾದ ಎಚ್‌.ಸುನಿಲ್ ಕುಮಾರ್ ಮತ್ತು ನವೀದ್ ಅಹಮದ್ ವಾದ ಆಲಿಸಿದ ನ್ಯಾಯಪೀಠ, ‘ಕಟ್ಟಡದ ಮಾಲೀಕರು ಮತ್ತು ಇತರರಿಗೆ ವಿಚಾರಣೆಗೆ ಅವಕಾಶ ನೀಡಿದ ನಂತರ ಅಕ್ರಮ ಕಟ್ಟಡ ನಿರ್ಮಾಣದ ವಿರುದ್ಧ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿವಾದಿ ಜಿಬಿಎಗೆ ತಾಕೀತು ಮಾಡಿದೆ.

ವಿಚಾರಣೆ ವೇಳೆ ಜಿಬಿಎ ಪರ ವಕೀಲ ಕೆ.ಎಸ್.ಮಲ್ಲಿಕಾರ್ಜುನ ರೆಡ್ಡಿ ಕಳೆದ ಆಗಸ್ಟ್ 20ರಂದು ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿ, ‘ಆಸ್ತಿಯಲ್ಲಿ ಕೆಲವು ಅಕ್ರಮ ನಿರ್ಮಾಣಗಳು ನಡೆದಿರುವುದು ನಿಜ ಎಂಬುದು ಕಂಡುಬಂದಿದೆ’ ಎಂದು ವಿವರಿಸಿ ಕೆಲವು ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದ್ದರು.



ಇದನ್ನು ಪರಿಗಣಿಸಿರುವ ನ್ಯಾಯಪೀಠ, ‘ರಿಟ್ ಅರ್ಜಿಗೆ ಸಂಬಂಧಿಸಿದಂತೆ ವಿವಾದಿತ ಕಟ್ಟಡದ ಜಾಗದಲ್ಲಿ ಯಾವುದಾದರೂ ಅಕ್ರಮ ನಿರ್ಮಾಣ ನಡೆದಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ’ ಎಂದು ಇದೇ ವೇಳೆ ಸ್ಪಷ್ಟಪಡಿಸಿದ್ದು, ‘ಈ ಕುರಿತಂತೆ ಮುಂದಿನ ಯಾವುದೇ ಕಾನೂನು ಕ್ರಮ ಕೈಗೊಳ್ಳುವುದನ್ನು ಜಿಬಿಎ ವಿವೇಚನೆಗೆ ಬಿಡಲಾಗಿದೆ’ ಎಂದು ವಿವರಿಸಿದೆ.

ಪ್ರಕರಣವೇನು?: ಜೆ.ಪಿ ನಗರದ ಐದನೇ ಹಂತದ 15ನೇ ತಿರುವಿನಲ್ಲಿ ಇರುವ ಸುಮಾರು 3,500 ಚದರ ಅಡಿ ನೆಲ ಅಂತಸ್ತಿನ ಜಾಗವನ್ನು, ಅದರ ಮಾಲೀಕ ಭರತ್ ಕಾಮತ್ ತಮ್ಮ ಸಂಬಂಧಿಯೂ ಆದ ಪ್ರತಾಪ್ ಕಾಮತ್ ಅವರಿಗೆ 2021ರಲ್ಲಿ 21 ವರ್ಷಗಳ ಅವಧಿಗೆ ಕರಾರಿನ ಅಡಿಯಲ್ಲಿ ಗುತ್ತಿಗೆ ನೀಡಿದ್ದರು.

‘ಈ ಜಾಗದಲ್ಲಿ ನನ್ನ ಮತ್ತು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಪ್ರತಾಪ್ ಕಾಮತ್ ಅವರು ಕಾನೂನು ಬಾಹಿರವಾಗಿ ನೆಲ ಅಂತಸ್ತು ಹೊರತುಪಡಿಸಿ ಮೊದಲ ಮತ್ತು ಎರಡನೇ ಅಂತಸ್ತನ್ನು ನಿರ್ಮಾಣ ಮಾಡಿದ್ದಾರೆ. ಆರಂಭದಲ್ಲೇ ಜಿಬಿಎಗೆ ದೂರು ನೀಡಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ದೂರಿದ್ದರು.

ನಂತರ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ವೇಳೆ ಏಕಸದಸ್ಯ ನ್ಯಾಯಪೀಠ, ಸ್ಥಳದ ಮಹಜರು ವರದಿ ಕೇಳಿತ್ತು. ಇದರ ಅನುಸಾರ ಜಿಬಿಎ ಅಧಿಕಾರಿಗಳು ವರದಿ ಸಲ್ಲಿಸಿದ್ದರು. ಇದನ್ನು ಉಲ್ಲೇಖಿಸಿದ್ದ ಅರ್ಜಿದಾರರು, ‘ಹೈಕೋರ್ಟ್ ನಿರ್ದೇಶನದ ಅನುಸಾರ ಈ ಜಾಗದ ಮಹಜರು ನಡೆಸಲಾಗಿದ್ದು ಸ್ಥಳದಲ್ಲಿ ಶೇ 100ರಷ್ಟು ಅತಿಕ್ರಮ ಇರುವುದು ಕಂಡು ಬಂದಿದೆ. ಸದ್ಯ ಈ ಕಟ್ಟಡದಲ್ಲಿ ಆಭರಣ ಜ್ಯುವೆಲರ್ಸ್ ಮಳಿಗೆಯನ್ನು ಆರಂಭಿಸಲಾಗಿದೆ’ ಎಂದು ವಿವರಿಸಿದ್ದರು. ಧನುಷ್ ಮತ್ತು ಭರತ್ ಕಾಮತ್ ಸಲ್ಲಿಸಿದ್ದ ಈ ರಿಟ್ ಅರ್ಜಿಯನ್ನು ನ್ಯಾಯಪೀಠ ವಿಲೇವಾರಿ ಮಾಡಿದೆ.

ಚಿಟಿಕೆ ಸುದ್ದಿ

ಸಹ ಕೈದಿಗಳ ಜತೆ ಕೂಗಾಡಿದ ದರ್ಶನ್

ದರ್ಶನ್

ಬೆಂಗಳೂರು: ಜೈಲಿನ ನಿಯಮದ ಪ್ರಕಾರವೇ ಎಲ್ಲಾ ಸೌಲಭ್ಯ ನೀಡಲಾಗಿದೆ ಎಂಬ ಕಾನೂನು ಸೇವಾ ಪ್ರಾಧಿಕಾರದ ವರದಿ ವಿಚಾರ ತಿಳಿದ ನಟ ದರ್ಶನ್, ಕೋಪಗೊಂಡು ಸಹ ಕೈದಿಗಳ ಜತೆ ಕೂಗಾಡಿದ್ದಾರೆ ಎಂದು ಹೇಳಲಾಗಿದೆ.

ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳು ಶನಿವಾರ ಕೋರ್ಟ್‌ಗೆ ವರದಿ ನೀಡಿದ್ದರು. ವಾಯುವಿಹಾರ ಹೊರತು ಪಡಿಸಿ ಜೈಲಿನ ನಿಯಮದ ಪ್ರಕಾರ ಆರೋಪಿಗೆ ಎಲ್ಲಾ ಸೌಲಭ್ಯ ನೀಡಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿತ್ತು. ಈ ವಿಚಾರ ಜೈಲಿನ ಟಿ.ವಿಯಲ್ಲಿ ಪ್ರಸಾರವಾಗಿತ್ತು. ಅದನ್ನು ಗಮನಿಸಿದ ಸಹ ಕೈದಿಗಳು ದರ್ಶನ್‌ಗೆ ಈ ವಿಚಾರ ತಿಳಿಸಿದ್ದಾರೆ.

ಅದರಿಂದ ಕುಪಿತಗೊಂಡ ದರ್ಶನ್, 'ನನಗೆ ಯಾಕೆ ಈ ಶಿಕ್ಷೆ, ಹೀಗೆ ಜೈಲಿನಲ್ಲೇ ಸಾಯಬೇಕೆ?' ಎಂದು ಕೂಗಾಡಿದ್ದಾರೆ. ಜತೆಯಲ್ಲಿದ್ದವರು ಅವರನ್ನು ಸಮಾಧಾನ ಪಡಿಸಿದ್ದಾರೆ ಎನ್ನಲಾಗಿದೆ.

ಇಂದು ಪೊಲೀಸ್ ಸಂಸ್ಮರಣಾ ದಿನಾಚರಣೆ

ಬೆಂಗಳೂರು: ಮೈಸೂರು ರಸ್ತೆಯ ಸಿಎಆರ್ ಕೇಂದ್ರದಲ್ಲಿ ಮಂಗಳವಾರ ಬೆಳಿಗ್ಗೆ 8ಕ್ಕೆ ಪೊಲೀಸ್ ಸಂಸ್ಮರಣಾ ದಿನಾಚರಣೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ತವ್ಯ ನಿರ್ವಹಣೆ ವೇಳೆ ಹುತಾತ್ಮರಾದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಗೌರವ ನಮನ ಸಲ್ಲಿಸಲಿದ್ದಾರೆ.

ಗೃಹ ಸಚಿವ ಜಿ.ಪರಮೇಶ್ವರ ಹಾಗೂ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ ಪ್ರಾಣ ತ್ಯಾಗ ಮಾಡಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸ್ಮರಿಸುವ ಸಲುವಾಗಿ ರಾಷ್ಟ್ರದೆಲ್ಲೆಡೆ ಪ್ರತಿ ವರ್ಷ ಅ.21ರಂದು ಪೊಲೀಸ್ ಸಂಸ್ಮರಣಾ ದಿನ ಆಚರಿಸಲಾಗುತ್ತದೆ.

ಮಾಲ್‌ನಿಂದ ಜಿಗಿದು ಯುವಕ ಆತ್ಮಹತ್ಯೆ

ಕೆ.ಪಿ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲು

ಮುಖ್ಯಾಂಶಗಳು
- ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಸಾಗರ್
- ವಸ್ತು ಖರೀದಿ ನೆಪದಲ್ಲಿ ಜಿ.ಟಿ.ಮಾಲ್ ಪ್ರವೇಶ

ಪ್ರಜಾವಾಣಿ ವಾರ್ತೆ

ಸಾಗರ್

ಬೆಂಗಳೂರು: ಮಾಗಡಿ ರಸ್ತೆಯ ಜಿ.ಟಿ ಮಾಲ್‌ನ ಮೂರನೇ ಮಹಡಿಯಿಂದ ಹಾರಿ ಸಾಗರ್ (34) ಎಂಬ ಯುವಕ ಆತ್ಮಹತ್ಯೆ ಮಾಡಿಕೊಂಡ ಘಟನೆ ಸೋಮವಾರ ಬೆಳಿಗ್ಗೆ ನಡೆದಿದೆ.

ಬೆಳಿಗ್ಗೆ ಮಾಲ್‌ನ ಬಾಗಿಲು ತೆಗೆಯುತ್ತಿದ್ದಂತೆಯೇ ವಸ್ತುಗಳನ್ನು ಖರೀದಿಸುವ ನೆಪದಲ್ಲಿ ಒಳಕ್ಕೆ ಹೋಗಿದ್ದ ಸಾಗರ್ ಅವರು ನೇರವಾಗಿ ಮೂರನೇ ಮಹಡಿಗೆ ತೆರಳಿದರು. ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ಮಾಲ್ ಸಿಬ್ಬಂದಿ ತಕ್ಷಣವೇ ಮಾಹಿತಿ ನೀಡಿದ್ದರು. ಅದನ್ನು ಆಧರಿಸಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ಮಾಲ್ ಪ್ರವೇಶದ್ವಾರ, ಎರಡು ಹಾಗೂ ಮೂರನೇ ಮಹಡಿಯಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಯಿತು. ಅವರೇ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಗರ್ ಅವರ ತಂದೆ ನಿವೃತ್ತ ಬ್ಯಾಂಕ್ ಉದ್ಯೋಗಿ. ತಾಯಿ ಗೃಹಿಣಿ. ಅವಿವಾಹಿತರಾಗಿದ್ದ ಸಾಗರ್ ಅವರು ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದಿ ಅನುತ್ತೀರ್ಣ ಆಗಿದ್ದರು. ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಅವರು 10 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು' ಎಂದಿದ್ದಾರೆ.

ಮೆಟ್ರೊ ಹಳಿಗೆ ಹಾರಿದ್ದ ಯುವಕ: 'ಸಾಗರ್ ಅವರು ಕಳೆದ ವರ್ಷವೂ ಮೆಟ್ರೊ ರೈಲು ನಿಲ್ದಾಣವೊಂದರ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಇದನ್ನು ಕಂಡು ಮೆಟ್ರೊ ಸಿಬ್ಬಂದಿ, ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದರು. ಇದರಿಂದ ಎಚ್ಚೆತ್ತ ಕುಟುಂಬಸ್ಥರು ಒಬ್ಬಂಟಯಾಗಿ ಅವರನ್ನು ಹೊರಗೆ ಓಡಾಡಲು ಬಿಡುತ್ತಿರಲಿಲ್ಲ. ಇತ್ತೀಚೆಗೆ ಆರೋಗ್ಯದಲ್ಲಿ ಚೇತರಿಕೆಯಾಗಿತ್ತು. ಹೀಗಾಗಿ, ಸೋಮವಾರ ಬೆಳಿಗ್ಗೆ ಒಬ್ಬರೇ ಹೊರಗೆ ಬಂದಿದ್ದರು' ಎಂದು ಮೂಲಗಳು ತಿಳಿಸಿವೆ. ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಘಟನೆ ಬಳಿಕ ಮಾಲ್‌ಗೆ ಸಾರ್ವಜನಿಕ ರಿಗೆ ಪ್ರವೇಶ ನಿಷೇಧಿಸಲಾಗಿತ್ತು. ಟಿಕೆಟ್ ಪಡೆದು ಚಿತ್ರ ವೀಕ್ಷಿಸಲು ಬಂದವರಿಗೂ ನಿರ್ಬಂಧ ವಿಧಿಸಲಾಗಿತ್ತು. ಪೊಲೀಸರ ಪ್ರಕ್ರಿಯೆ ಮುಕ್ತಾಯವಾದ ಮೇಲೆ ಪ್ರವೇಶ ಕಲ್ಪಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಕಿರುಕುಳ: ವಿಡಿಯೊ ಮಾಡಿಟ್ಟು ಗೃಹಿಣಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪುಷ್ಪಾ

ದೊಡ್ಡಬಳ್ಳಾಪುರ: ಪತಿಯ ಕುಟುಂಬದವರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ಪಿಕಪ್ ಡ್ಯಾಂಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸೋತೇನಹಳ್ಳಿ ನಿವಾಸಿ ಪುಷ್ಪಾ (28) ಮೃತರು.

ಘಾಟಿ ಸಮೀಪದ ವಿಶ್ವೇಶ್ವರಯ್ಯ ಪಿಕ್ ಅಪ್ ಡ್ಯಾಂನಲ್ಲಿ ಮಹಿಳೆಯ ಮೃತದೇಹ ಭಾನುವಾರ ಪತ್ತೆಯಾಗಿದೆ. ಪತಿ, ಅತ್ತೆ, ಮಾವ, ಮೈದುನ ಹಾಗೂ ಸಂಬಂಧಿಕರ ಕಿರುಕುಳ ಆರೋಪದ ಕುರಿತು ವಿಡಿಯೊ ಮಾಡಿ ಸಂಬಂಧಿಕರಿಗೆ ವಾಟ್ಸ್‌ಆ್ಯಪ್‌ನಲ್ಲಿ ಹಂಚಿಕೆ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋತೇನಹಳ್ಳಿ ಗ್ರಾಮದ ನಿವಾಸಿ ಪುಷ್ಪಾ ಅವರನ್ನು ತಪಸೀಹಳ್ಳಿ ವೇಣು ಜತೆ ಒಂದು ವರ್ಷದ ಹಿಂದೆ ವಿವಾಹ ಮಾಡಿಕೊಡಲಾಗಿತ್ತು. ವರದಕ್ಷಿಣೆ ಹಾಗೂ ನಿವೇಶನಕ್ಕಾಗಿ ಕಿರುಕುಳದಿಂದ ಪುಷ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ತಂದೆ ನಾರಾಯಣಪ್ಪ ಆರೋಪಿಸಿದ್ದಾರೆ. ದೊಡ್ಡಬಳ್ಳಾಪುರ ಮಹಿಳಾ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಚಿಕ್ಕಪೇಟೆ ಮುಖ್ಯ ರಸ್ತೆಯಲ್ಲಿ ವಿಲೇವಾರಿಯಾಗದೆ ಬಿದ್ದಿರುವ ಕಸದ ರಾಶಿ ಸೋಮವಾರ ಕಂಡುಬಂತು ಪ್ರಜಾವಾಣಿ ಚಿತ್ರ: ರಂಜು ಪಿ.

'ಡಿಸೆಂಬರ್ ವೇಳೆಗೆ ಸರ್ಕಾರ ಪತನ'

ಪ್ರಜಾವಾಣಿ ವಾರ್ತೆ

ಹಾಸನ: 'ಕಾಂಗ್ರೆಸ್ ಪಕ್ಷದಲ್ಲಿ ಒಳಜಗಳ ಮುಂದುವರಿದಿದ್ದು, ನವೆಂಬರ್–ಡಿಸೆಂಬರ್ ವೇಳೆಗೆ ಸರ್ಕಾರ ಪತನವಾಗಲಿದೆ' ಎಂದು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರ–ರೊಂದಿಗೆ ಮಾತನಾಡಿದ ಅವರು, 'ವಿರುದ್ಧವಾದ ಹೇಳಿಕೆ ಕೊಡಿಸಿ ಒಬ್ಬ ಮಂತ್ರಿಯನ್ನು ಮನೆಗೆ ಕಳಿಸಿದ್ದಾರೆ. ಇದು ದಾರಿ ತಪ್ಪಿದ ಸರ್ಕಾರ' ಎಂದು ಟೀಕಿಸಿದರು.

ಶಾಲೆಯ ಪ್ರಿನ್ಸಿಪಾಲ್, ಶಿಕ್ಷಕಿ ಕಾರ್ಯದರ್ಶಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗೆ ಪಿವಿಸಿ ಪೈಪ್‌ನಿಂದ ರಕ್ತ ಹೆಪ್ಪುಗಟ್ಟು–ವಂತೆ ಥಳಿಸಿದ್ದ ಆರೋಪದ ಅಡಿ ಸುಂಕದಕಟ್ಟೆಯ ಹೊಯ್ಸಳ ನಗರದ ಪೈಪ್‌ಲೈನ್ ರಸ್ತೆಯ ಸೇಂಟ್ ಮೇರಿಸ್ ಪಬ್ಲಿಕ್ ಶಾಲೆಯ ಕಾರ್ಯದರ್ಶಿ, ಪ್ರಿನ್ಸಿಪಾಲ್ ಹಾಗೂ ಶಿಕ್ಷಕಿಯ ವಿರುದ್ಧ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹೊಯ್ಸಳನಗರದ ಪೋಷಕರೊಬ್ಬರು ನೀಡಿದ ದೂರು ಆಧರಿಸಿ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆಯ ಸೆಕ್ಷನ್ 75 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 118(1), 351 (2), 3(5) ಅಡಿ ಶಾಲೆಯ ಪ್ರಿನ್ಸಿಪಾಲ್ ರಾಕೇಶ್‌ಕುಮಾರ್, ಶಿಕ್ಷಕಿ ಚಂದ್ರಿಕಾ ಹಾಗೂ ಕಾರ್ಯದರ್ಶಿ ವಿಜಯ್‌ಕುಮಾರ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಪುತ್ರನಿಗೆ ಒಂಬತ್ತು ವರ್ಷ. ಮೂರು ವರ್ಷದಿಂದ ಸೇಂಟ್ ಮೇರಿಸ್ ಪಬ್ಲಿಕ್ ಶಾಲೆಯಲ್ಲಿ ಓದುತ್ತಿದ್ದಾನೆ. ಸಕಾಲದಲ್ಲಿ ಶುಲ್ಕವನ್ನೂ ಪಾವತಿಸುತ್ತಿದ್ದೇವೆ. ಅ.14ರ ಸಂಜೆ 4ರಿಂದ 5 ಗಂಟೆಯ ಸಮಯದಲ್ಲಿ ಮಗನಿಗೆ ಪ್ರಿನ್ಸಿಪಾಲ್ ರಾಕೇಶ್‌ಕುಮಾರ್ ಅವರು ಪಿವಿಸಿ ಪೈಪ್‌ನಿಂದ ಮನಸೋ ಇಚ್ಛೆ ರಕ್ತ ಹೆಪ್ಪುಗಟ್ಟುವಂತೆ ಹೊಡೆದಿದ್ದಾರೆ. ಈ ಸಂದರ್ಭದಲ್ಲಿ ಶಿಕ್ಷಕಿ ಚಂದ್ರಿಕಾ ಹಾಗೂ ಕಾರ್ಯದರ್ಶಿ ವಿಜಯಕುಮಾರ್ ಅವರು ಸ್ಥಳದಲ್ಲೇ ಇದ್ದರೂ ತಡೆದಿಲ್ಲ. ಚಿತ್ರಹಿಂಸೆ ನೀಡಿದ್ದನ್ನು ಪ್ರಶ್ನಿಸಿದಾಗ, ನಮ್ಮ ಶಾಲೆಯಲ್ಲಿ ಇದೇ ರೀತಿ ಟ್ರೀಟ್‌ಮೆಂಟ್ ಕೊಡುವುದು. ಜಾಸ್ತಿ ಮಾತನಾಡಿದರೆ ನಿಮಗೂ ಒಂದು ಗತಿ ಕಾಣಿಸುತ್ತೇವೆ. ಬೇಕಿದ್ದರೆ ವರ್ಗಾವಣೆ ಪತ್ರ (ಟಿ.ಸಿ) ತೆಗೆದುಕೊಂಡು ಹೋಗಿ ಎಂಬುದಾಗಿ ಜೀವ ಬೆದರಿಕೆ ಹಾಕಿದ್ದಾರೆ' ಎಂದು ಪೋಷಕರೊಬ್ಬರು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ರೌಡಿಗಳ ಪುಂಡಾಟ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಮೀನ್ ಷರೀಫ್

ಸೈಯದ್ ಅರ್ಬಾಜ್

ಸೈಯದ್ ಖಾದರ್

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡರಾಮಣ್ಣ ಮತ್ತು ಚಿಕ್ಕಣ್ಣ ಬಡಾವಣೆ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ಮಾರಕಾಸ್ತ್ರಗಳನ್ನು ಸಾರ್ವಜನಿಕರತ್ತ ಬೀಸಿ, ಹಲ್ಲೆ ನಡೆಸಿ ಪುಂಡಾಟ ಮೆರೆದಿದ್ದ ಮೂವರು ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಅಮೀನ್ ಷರೀಫ್ (24), ಸೈಯದ್ ಅರ್ಬಾಜ್ (20), ಸೈಯದ್ ಖಾದರ್ (21) ಬಂಧಿತರು.

ಬಂಧಿತರಿಂದ ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಾದ 109, 351(2), 352, 115(2), 118(1) ಹಾಗೂ ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್ 25-1(ಬಿ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಬಡಾವಣೆ ನಿವಾಸಿ ಕಿರಣ್ ಎಂಬುವವರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ದೃಶ್ಯಾವಳಿ ಆಧರಿಸಿ, ಮೂವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಇಬ್ಬರು ತಲೆ ಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಮಾರಕಾಸ್ತ್ರ ಹಿಡಿದು ಪುಂಡಾಟ ನಡೆಸುತ್ತಿರುವ ಬಗ್ಗೆ ಸ್ಥಳೀಯರೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಸ್ಥಳಕ್ಕೆ ಪೊಲೀಸರು ತೆರಳುವಷ್ಟರಲ್ಲಿ ಇಬ್ಬರು ಪರಾರಿ ಆಗಿದ್ದರು. ಉಳಿದ ಮೂವರನ್ನು ಸ್ಥಳೀಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಗೊತ್ತಾಗಿದೆ.

ಹೆಣ್ಣೂರು ಭಾಗದಲ್ಲಿ ಡ್ರಗ್ಸ್ ತೆಗೆದುಕೊಂಡು ಹಾಗೂ ಮದ್ಯಪಾನ ಮಾಡಿ ರೌಡಿಗಳು ರಾತ್ರಿ ವೇಳೆ ಪುಂಡಾಟ ನಡೆಸುತ್ತಿದ್ದಾರೆ. ಕಳೆದ ವರ್ಷ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳಿಗೆ ರೌಡಿಗಳು ಬೆಂಕಿಹಚ್ಚಿ ಪರಾರಿ ಆಗಿದ್ದರು. ಭಾನುವಾರ ರಾತ್ರಿ ಪೊಲೀಸರ ಭಯವಿಲ್ಲದೇ ಮಾರಕಾಸ್ತ್ರ ಹಿಡಿದು ಓಡಾಟ ನಡೆಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

'ಮನೆ ಮನೆಗೆ ಪೊಲೀಸ್ ಎನ್ನುವ ಕಾರ್ಯಕ್ರಮ ಜಾರಿಗೆ ತರಲಾಗಿದೆ. ಆದರೆ, ನಾಗರಿಕರ ಸಮಸ್ಯೆ ಆಲಿಸಲು ಯಾರೂ ಬರುತ್ತಿಲ್ಲ' ಎಂದು ಸ್ಥಳೀಯ ಮುಖಂಡರೊಬ್ಬರು ದೂರಿದರು.

ತಾಯಂದಿರ ಮರಣ ದರ ಇಳಿಸಲು ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಡೆಗಟ್ಟ–ಬಹುದಾದ ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ಆರೋಗ್ಯ ಇಲಾಖೆಯು ವಿಶೇಷ ಅಭಿಯಾನ ಹಮ್ಮಿಕೊಂಡಿದ್ದು, ಈ ಸಂಬಂಧ ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂಸಿಎಚ್) ಬಲವರ್ಧನೆ, ಉಪಕರಣಗಳ ಖರೀದಿ ಸೇರಿ ವಿವಿಧ ಕ್ರಮಗಳಿಗೆ ₹139 ಕೋಟಿ ಅನುದಾನ ಬಳಸಿಕೊಳ್ಳಲು ಅನುಮೋದನೆ ದೊರೆತಿದೆ.

ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣ ಇಳಿಮುಖವಾಗಿವೆ. 2024–25ನೇ ಸಾಲಿನಲ್ಲಿ ರಾಜ್ಯದಲ್ಲಿ 9.31 ಲಕ್ಷ ಹೆರಿಗೆಗಳಾಗಿದ್ದು, 530 ತಾಯಂದಿರ ಮರಣ ಪ್ರಕರಣ ವರದಿಯಾಗಿದೆ. ಈ ಸಾವಿನ ನಿಖರ ಕಾರಣ ತಿಳಿಯಲು ಸಾವಿನ ಲೆಕ್ಕಗಳ ವರದಿ (ಡೆತ್ ಆಡಿಟ್) ಸಿದ್ಧಪಡಿಸಲಾಗುತ್ತಿದೆ ಎಂದು ಇಲಾಖೆ ತಿಳಿಸಿದೆ.

ರಕ್ತಸ್ರಾವ, ಗರ್ಭಪಾತ, ಅಧಿಕ ರಕ್ತದೊತ್ತಡ ಸೇರಿ ವಿವಿಧ ಕಾರಣಗಳಿಂದ ತಾಯಂದಿರ ಮರಣ ವರದಿ ಆಗುತ್ತಿದ್ದು, ಶೇ 70 ರಷ್ಟು ಪ್ರಕರಣಗಳಲ್ಲಿ ಮರಣವನ್ನು ತಡೆಯ–ಬಹುದಾಗಿದೆ. ಪ್ರಸವಪೂರ್ವ ಮತ್ತು ಪ್ರಸವ ನಂತರದ ಆರೈಕೆಯ ಗುಣಮಟ್ಟ ಸುಧಾರಿಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದೆ.

ಗರ್ಭಿಣಿಯರಲ್ಲಿ ಮತ್ತು ಪ್ರಸೂತಿ ವೇಳೆಯಲ್ಲಿನ ತೀವ್ರತರಹದ ರಕ್ತಸ್ರಾವ ತಡೆಗಟ್ಟಲು, ಚಿಕಿತ್ಸೆ ನೀಡಲು ಅಗತ್ಯ ಇರುವ ಉಪಕರಣಗಳ ಖರೀದಿ, ಹಾಸಿಗೆಗಳ ಹೆಚ್ಚಳ, ಆಸ್ಪತ್ರೆಗಳ ಮೇಲ್ದರ್ಜೆ, ಮೇಲ್ವಿಚಾರಣೆ ಸೌಲಭ್ಯ, ವಿಶ್ರಾಂತಿ ಕೊಠಡಿ, ಸಹಾಯವಾಣಿ ಸೇರಿ ವಿವಿಧ ವ್ಯವಸ್ಥೆಗೆ ಅನುದಾನ ಹಂಚಿಕೆ ಮಾಡಲಾಗಿದೆ.

ನಗರದಲ್ಲಿ ಇಂದು

ಪೊಲೀಸ್ ಸಂಸ್ಮರಣ ದಿನಾಚರಣೆ: ಅತಿಥಿಗಳು: ಸಿದ್ದರಾಮಯ್ಯ, ಜಿ. ಪರಮೇಶ್ವರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ನಗರ ಸಶಸ್ತ್ರ ಮೀಸಲು ಪಡೆ, ಕೇಂದ್ರ ಸ್ಥಾನದ ಹುತಾತ್ಮರ ಉದ್ಯಾನ, ಮೈಸೂರು ರಸ್ತೆ, ಬೆಳಿಗ್ಗೆ 8

ಕನ್ನಡ ಸಾಧಕರಿಗೆ ಗೌರವ ಅರ್ಪಣೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅತಿಥಿ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಗೌರವ ಸ್ವೀಕರಿಸುವವರು: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ನಿರಂಜನಾರಾಧ್ಯ ವಿ.ಪಿ., ಎಂ. ನರಸಿಂಹ, ಸಿ.ಕೆ. ರಾಮೇಗೌಡ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕ್ರಮ ಸಂ	ಶ್ರೀಯುತರು	ಹುದ್ದೆ ಮತ್ತು ಮೆಟಲ್ ಸಂಖ್ಯೆ	ಜಿಲ್ಲೆ/ಘಟಕ
1.	ಶ್ರೀ ಮೆಬೂಬು ಗುಡ್ಡಲಿಲ್	ಪಿಎಸ್‌ಐ	ಬೆಂಗಳೂರು ನಗರ
2.	ಶ್ರೀ ವೆಂಕಟಾಚಲಪತಿ ಕೆ.ಎನ್	ಎಎಸ್‌ಐ	ಕೆಜಿಎಫ್
3.	ಶ್ರೀ ಗಿರೀಶ್.ಎಸ್	ಎಆರ್‌ಎಸ್‌ಐ	ಡಿಎಆರ್, ತುಮಕೂರು ಜಿಲ್ಲೆ
4.	ಶ್ರೀ ಬಸವರಾಜ ಎಂ.	ಸಿಹೆಚ್‌ಸಿ-287	ಬೆಂಗಳೂರು ಜಿಲ್ಲೆ
5.	ಶ್ರೀ ನಿಂಗರಾಜ್ ಟಿ. ಎಸ್.	ಎಹೆಚ್‌ಸಿ-90	ಡಿಎಆರ್, ತುಮಕೂರು ಜಿಲ್ಲೆ
6.	ಶ್ರೀ ಪ್ರಕಾಶ್.ಬಿ.ಯು	ಸ್ಪೆ ಆರ್‌ಹೆಚ್‌ಸಿ-36	11 ನೇ ಪಡೆ ಕೆ.ಎಸ್.ಆರ್.ಪಿ, ಹಾಸನ
7.	ಶ್ರೀ ಮಹೇಶ್.ಎನ್.ಆರ್	ಹೆಚ್‌ಸಿ-6713	ಬೆಂಗಳೂರು ನಗರ
8.	ಶ್ರೀ ರಾಮಪ್ಪ ಪೂಜಾರಿ	ಎಪಿಸಿ-104	ಡಿಎಆರ್, ದಾವಣಗೆರೆ ಜಿಲ್ಲೆ

ಸಡಗರವೇ ಜೀವನ

• ರಮ್ಯಾ ಶ್ರೀಹರಿ

ಬದುಕು ಅದೆಷ್ಟು ವೈವಿಧ್ಯಪೂರ್ಣ; ಬದುಕಿನ ಪ್ರತಿ ಘಟ್ಟಕ್ಕೂ ಅದೆಂಥ ವಿಶಿಷ್ಟ ಚೆಲುವು; ಪ್ರತಿಯೊಂದು ಅನುಭವಕ್ಕೂ ಅನಂತ ಆಯಾಮಗಳು. ಎಲ್ಲರೂ 'ಇರುವುದು ಒಂದೇ ಜೀವನ' ಎಂದು ಆಗಾಗ ಹೇಳುತ್ತಲೇ ಇರುತ್ತೇವೆ. ಆದರೆ ಸರಿಯಾಗಿ ದೃಷ್ಟಿಸಿ ನೋಡಿದಾಗ 'ಒಂದೇ' ಜೀವನವೇ ಇರುವುದು – ಎಂಬ ಪ್ರಶ್ನೆ ಹುಟ್ಟುತ್ತದೆ. ಹಾಗೆ 'ಒಂದೇ' ಜೀವನ ಎಂದರೇನೆಂದು ಕೇಳಿಕೊಂಡು ನೋಡಿ; ಆ ಒಂದೇ ಜೀವನದೊಳಗೂ ಅವೆಷ್ಟೆಷ್ಟು ಜೀವನಗಳು, ಒಂದೇ ಮನುಷ್ಯನೊಳಗೂ ನೂರಾರು ವ್ಯಕ್ತಿಗಳು, ಒಂದೇ ಘಟನೆಗೂ ಆಲೋಚನೆಗೂ ಭಾವನೆಗೂ ಸಾವಿರಾರು ದಿಕ್ಕಿನ ನೋಟಗಳು, ಸಾವಿರಾರು ಅರ್ಥಗಳು ಇರುವುದನ್ನು ಕಾಣಬಹುದು.

ನಾವು ಏನೇನೆಲ್ಲಾ ಆಗಬೇಕೆಂದು ಕನಸು ಕಾಣುತ್ತೇವೆ; ಎಲ್ಲೆಲ್ಲಾ ಹೋಗಬೇಕು, ಹೇಗೆಗೆಲ್ಲಾ ಜೀವನವಿರಬೇಕು, ಯಾರೊಂದಿಗೆಲ್ಲಾ ನಕ್ಕು ನಲಿಯಬೇಕು, ಎಷ್ಟೊಂದು ಮಾತಾಡಬೇಕು, ಹೃದಯ ತೆರೆದಿಡಬೇಕು – ಎಂದು ಹೇಗೆಲ್ಲಾ ಒಂದಿಡೀ ದಿನದಲ್ಲಿ ಮನಸ್ಸಿನಲ್ಲಿ ಮಾತಾಡಿಕೊಳ್ಳುತ್ತಿರುತ್ತೇವೆ ನೋಡಿಕೊಳ್ಳಿ, ಎಷ್ಟೊಂದು ಬಗೆಬಗೆಯ ಬದುಕುಗಳ ಆಕಾಂಕ್ಷಿಗಳು ನಾವು ಎನ್ನುವುದು ಗೊತ್ತಾಗುತ್ತದೆ.

ಅಂದರೆ ಬದುಕನ್ನು ಕಾಲ-ದೇಶಗಳಲ್ಲಿ ವಿಸ್ತರಿಸಿಕೊಂಡಿರುವ ವಿದ್ಯಮಾನ, ಘಟನೆಗಳ, ಆಗು-ಹೋಗುಗಳ ಸರಮಾಲೆ ಎಂದುಕೊಂಡಾಗ ಆಗುವ ಅನುಭವಕ್ಕೂ, ಬದುಕೆಂದರೆ ಪ್ರತಿಕ್ಷಣವೂ ವಿವಿಧ ಅರ್ಥಗಳು, ವಿವಿಧ ಪ್ರಚೋದನೆಗಳು, ವಿಧವಿಧ ಬಯಕೆಗಳು, ಗುರಿಗಳು, ಧ್ಯೇಯಗಳು, ಉದ್ದೇಶಗಳು, ನೆನಪುಗಳು ಎಲ್ಲವೂ ಸೇರಿ ಹೆಣೆದ ಅನೇಕ ಬಣ್ಣ, ಚಿತ್ತಾರಗಳಿರುವ ಸುಂದರ, ಸಂಕೀರ್ಣ, ಸತ್ವಭರಿತ ಕಸೂತಿಯ ಹಾಸು ಎಂದು ನೋಡಿದಾಗ ಆಗುವ ಅನುಭವಕ್ಕೂ ಅಗಾಧ ವ್ಯತ್ಯಾಸವಿದೆ.

ಯಾವುದೇ ಅನುಭವವನ್ನು ನಾವು ಆ ಕ್ಷಣಕ್ಕೆ ಗ್ರಹಿಸುವ ರೀತಿಯೇ ಬೇರೆ, ಅದೇ ಅನುಭವ ಮನಸ್ಸಿನ ಅನೇಕ ಪದರಗಳನ್ನು ಹಾದು, ಅನೇಕ ಸಂಸ್ಕಾರಗಳಿಗೆ ಒಳಗಾಗಿ ಬಂದ ಮೇಲೆ ಅದು ತೋರಿಕೊಳ್ಳುವ ರೀತಿಯೇ ಬೇರೆ. ಅಂದರೆ ಮನುಷ್ಯ ಎರಡು ಲೋಕಗಳ ನಿವಾಸಿ: ಒಂದು ಬಾಹ್ಯಲೋಕ ಮತ್ತೊಂದು ಆಂತರ್ಯಲೋಕ. ಈ ಎರಡೂ ಲೋಕಗಳ ನಡುವೆ ಸದಾ ಒಂದಿಲ್ಲೊಂದು 'transaction' – ವ್ಯವಹಾರ – ನಡೆಯುತ್ತಲೇ ಇರುತ್ತದೆ. ಹೊರಗಿರುವುದು ಆಂತರ್ಯಲೋಕದ ರೀತಿ ನೀತಿಗಳಿಗನುಗುಣವಾಗಿ ರೂಪಾಂತರ ಹೊಂದಿ ಒಳಲೋಕದ ಭಾಗವಾಗುವುದು, ಒಳಲೋಕದಲ್ಲಷ್ಟೇ ಇದೆ ಎಂದುಕೊಂಡಿದ್ದು ಸುಳಿವೇ ಕೊಡದೆ ಥಟ್ಟನೆ ಹೊರಲೋಕದಲ್ಲಿ ಪ್ರಕಟಗೊಂಡು ಬದುಕಿನ ದಿಕ್ಕು ದಿಸೆ ಬದಲಾಗುವುದು. ಈ ಒಳಹೊರ ಲೋಕಗಳ ನಡುವಿನ ನಿತ್ಯ ಓಡಾಟವೇ ಜೀವನದ ಸಡಗರ, ಸಂಭ್ರಮ, ಉತ್ಸವ, ಪರ್ವ.

ಹಬ್ಬಗಳು, ಉತ್ಸವಗಳು, ಮದುವೆ ಮುಂತಾದ ಕಾರ್ಯಕ್ರಮಗಳು ಪ್ರತಿಯೊಂದು ಸಡಗರಕ್ಕೂ ಇರುವ ಸಾಮಾನ್ಯ ಅಂಶ ಯಾವುದು ಹೇಳಿ? ಎಲ್ಲ ಸಂಭ್ರಮಗಳಿಗೂ ಮೂಲ ಲವಲವಿಕೆಯ ಓಡಾಟ, ಬಂಧುಮಿತ್ರರ, ನೆರೆಹೊರೆಯ, ಸಮಾನಮನಸ್ಕರ ಭೇಟಿ, ಮಾತುಕತೆ, ನಗು, ಕೇಕೆ, ಹಾಸ್ಯ, ಒಬ್ಬರಿಗೊಬ್ಬರು ಆಸರೆಯಾಗುವುದು, ಮನಸ್ತಾಪಗಳಿಗೆ ಚಲನಶೀಲತೆಯ ಮೂಲಕವೇ ಅಂತ್ಯವನ್ನು ಕಾಣಿಸುವುದು, ಒಳಹೊರಮನೆಗಳ ನಡುವಿನ ಸರಭರ ಓಡಾಟ, ಕಾಲ್ಗೆಜ್ಜೆಯ, ಕೈಬಳೆಯ ಸುಮಧುರ ನಾದ, ರೇಷ್ಮೆ ಸೀರೆಯ ವರ್ಣವೈಭವ, ಬೆಚ್ಚನೆ ಅಪ್ಪುಗೆಯ, ನೇವರಿಸುವಿಕೆಯ ಹಿತಸ್ಪರ್ಶ, ಕಣ್ಣುಕೋರೈಸುವ ದೀಪಗಳ ಬೆಳಕು, ಚಿನ್ನದ ಥಳಕು, ಹಾಡು, ಕುಣಿತ, ಊಟ, ಉಪಚಾರ, ಉಡುಗೊರೆ, ಹರಟೆ - ಏನುಂಟು ಏನಿಲ್ಲ ಬದುಕಿನ ಸಂಭ್ರಮದಲ್ಲಿ?

ಈ ಎಲ್ಲ ಸಡಗರವೂ ನಮ್ಮ ಜೊತೆ ನಮ್ಮವರು ಎನಿಸಿಕೊಂಡವರು ಇದ್ದಾಗಲಷ್ಟೇ ಸಾಧ್ಯ; ಒಬ್ಬರೇ ಇದ್ದಾಗ ಸಡಗರ ಸಾಧ್ಯವಾಗಬೇಕಾದರೆ ನಾವು ಪ್ರೀತಿಸುವವರು ನಮ್ಮ ಮನಸ್ಸಿನ ತುಂಬಾ ತುಂಬಿಕೊಂಡಿರಬೇಕು, ಅವರನ್ನು ಪ್ರತಿಕ್ಷಣವೂ ನಮ್ಮ ಬದುಕಿನಲ್ಲಿ ಆವಾಹಿಸಿಕೊಂಡಿರಬೇಕು. ಒಳ–ಹೊರ ಲೋಕಗಳಲ್ಲಿ ಪ್ರೀತಿಸುವ ಜೀವಗಳ ಸಾನ್ನಿಧ್ಯ ಇಲ್ಲವಾದರೆ, ಆಂತರ್ಯವೂ ಬಾಹ್ಯವೂ ಬರಡಾಗಿ ಸಡಗರ ಮರೀಚಿಕೆಯೇ ಸರಿ. ಪ್ರೀತಿಸುವ ವ್ಯಕ್ತಿಯ ಒಡನಾಟಕ್ಕೂ ಮಿಗಿಲಾದ ಸಡಗರವೇ ಇಲ್ಲ!

ಜೀವನದ ಸಡಗರವನ್ನು ಸಂತೃಪ್ತಿಯಿಂದ ಆಸ್ವಾದಿಸಲು ಅವಕಾಶಮಾಡಿಕೊಡುವ ಆಲೋಚನಾ ಕ್ರಮಗಳು ಇಲ್ಲಿವೆ:

- ಹೊರಲೋಕವನ್ನು ಒಳಗೆಳೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿರುವುದು ಇಂದ್ರಿಯಾನುಭವಗಳು; ಅದರಲ್ಲಿ ಮನವಿಟ್ಟು ತೊಡಗಿಕೊಂಡಾಗ ಎಷ್ಟೊಂದು ಅಸಾಧಾರಣ ವಿಷಯಗಳು ಅನಾವರಣಗೊಳ್ಳುತ್ತದೆಯಲ್ಲವೇ? ಸಂಗೀತ ಆಲಿಸುವಾಗ, ಕಣ್ಬಿಟ್ಟು ಈ ವರ್ಣರಂಜಿತ ಪ್ರಪಂಚ ಕಾಣುವಾಗ ಒಳ–ಹೊರ ಲೋಕಗಳ ನಡುವಿನ ಸಂಭಾವ್ಯ ಸಂಭಾಷಣೆಯನ್ನು ಆಲಿಸುವ, ಅನ್ವೇಷಣೆಯ ಮನೋಭಾವವಿರಲಿ.
- ನಮ್ಮ ದೇಹವೇ ಒಂದು ನಿತ್ಯಕೌತುಕ, ಒಂದೊಂದು ಭಾವಕ್ಕೂ, ಒಂದೊಂದು ಸೂಕ್ಷ್ಮ ಪ್ರಚೋದನೆಗೂ ಈ ದೇಹ ಹೇಗೆ ಮಿಡಿಯುವುದು, ಹೇಗೆ ಸ್ಪಂದಿಸುವುದು, ದೇಹದ ಮೂಲಕವೇ ನಾವು ಪ್ರಪಂಚವನ್ನು ಗ್ರಹಿಸುವ ಬಗೆಯನ್ನು ಕಂಡಾಗ ಈ ದೇಹದ ಕಣಕಣದಲ್ಲೂ ಎಂಥ ಅಗಾಧ ಜೀವಂತಿಕೆಯ, ಜೀವನಪ್ರೀತಿಯ ಕುಣಿದು ಕುಪ್ಪಳಿಸುವ ಓಡಾಟವಿದೆ ಎನ್ನುವುದು ಗೊತ್ತಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಒಳ ಹೊರ ಪ್ರಪಂಚವೂ ಅದಿನ್ನೆಷ್ಟು ಕಲೆಗಾರಿಕೆಯಿಂದ ನೇಯ್ಗೆ ಮಾಡಲಾಗಿದೆಯಲ್ಲವೇ? ಅವರ ಒಳ ಲೋಕಗಳ ಒಳಒಳ ಲೋಕಗಳು ಹೊರಲೋಕದಲ್ಲಿ ಹೇಗೆ ತಮ್ಮ ಇರವನ್ನು ಕಾಣಿಸುತ್ತದೆ ಎನ್ನುವುದನ್ನು ವಿಮರ್ಶಿಸುವಾಗ ಅಂತಃಕರಣ, ಪ್ರೀತಿ, ವಾತ್ಸಲ್ಯ, ಅಭಿಮಾನ, ಕರುಣೆಗಳು ಕೆಲಸಮಾಡಿದರೆ ಬದುಕಿನಲ್ಲಿ ಸಡಗರಕ್ಕೇನು ಕೊರತೆ?
- ಧರ್ಮ, ಧಾರ್ಮಿಕ ಆಚರಣೆಗಳು, ನಂಬಿಕೆಗಳು, ಪೌರಾಣಿಕ ಕಥೆಗಳು, ನಿತ್ಯಜೀವನದಲ್ಲೂ ಹಾಸುಹೊಕ್ಕಾಗಿರುವ ಕಲೆಯ ಸರಳ ತತ್ತ್ವಗಳು - ಈ ಸಾಂಕೇತಿಕ ಪ್ರಪಂಚದ ಜೊತೆಗಿನ ಮನುಷ್ಯನ ನಂಟನ್ನು ಅರಿಯುವ ಪ್ರಯತ್ನದಲ್ಲಿ ನಿಮ್ಮ ದಾರಿ ಯಾವುದು ಕೇಳಿಕೊಂಡಿದ್ದೀರಾ? ಇಲ್ಲವಾದರೆ ಇಂದಿನಿಂದಲೇ ಇವುಗಳ ಬಗ್ಗೆ ಆಲೋಚಿಸಲು ಪ್ರಾರಂಭಿಸಿ, ಆಗ ಜೀವನದಲ್ಲಿ ಸಂಸ್ಕೃತಿಯ ಸಡಗರವನ್ನು ಕಂಡು ಹೃದಯ ಹಾಡದೇ ಇರದು.
- ಬದುಕಿನ ಆತ್ಯಂತಿಕ ಗುರಿ, ಪರಮಾರ್ಥ, ದೇಶ ಕಾಲಾತೀತ, ದೇಹ ಭಾಷಾತೀತ ಅನುಭವಗಳು, ಗೊತ್ತಿರುವ ಎಲ್ಲವನ್ನೂ ಮೀರಿ ಹೋಗಬೇಕೆನ್ನುವ ಮಾನವ ಹಂಬಲ, ಮುಕ್ತಿಗಾಗಿ ನಮ್ಮೊಳಗಿನ ನಿರಂತರ ಮೊರೆ - ಇದು ಹೇಗೆ ನಮ್ಮ ನಿತ್ಯಜೀವನವನ್ನು, ನಮ್ಮ ಬಾಹ್ಯಪ್ರಪಂಚದಲ್ಲಿನ ನಡವಳಿಕೆಯನ್ನು ಪ್ರಭಾವಿಸಿದೆ ಎಂದು ಪ್ರಶ್ನಿಸಿಕೊಳ್ಳುತ್ತಲೇ ಇದ್ದರೆ ಜೀವನದಲ್ಲಿ ಸಡಗರ ಎನ್ನುವುದು ಉಸಿರಾಟದಷ್ಟೇ ಸಹಜವಾಗಿಬಿಡುತ್ತದೆ.

❖

ಜೀವನದ ಸಣ್ಣ ಸಣ್ಣ ಸಡಗರಗಳನ್ನು ಸಂತೃಪ್ತಿಯಿಂದ ಆಸ್ವಾದಿಸಲು ಅವಕಾಶವನ್ನು ಮಾಡಿಕೊಡುವ ಆಲೋಚನಾ ಕ್ರಮಗಳನ್ನು ಅಳವಡಿಸಿಕೊಂಡರೆ ಬದುಕು ಸದಾ ಸಡಗರದಿಂದ ಕೂಡಿರುತ್ತದೆ

ಹಲ್ಲುಜ್ಜಲು ಹಲವು ಹಸಿಕಡ್ಡಿಗಳು!

ಪದೇ ಪದೇ ಕಾಡುವ ಹಲ್ಲುನೋವಿನ ಸಮಸ್ಯೆ ಕಿರಿಯರ, ಹಿರಿಯರ ಅನುದಿನದ ಬವಣೆ. ಬಾಯಿ, ಹಲ್ಲು ಮತ್ತು ವಸಡುಗಳ ಹಲವು ಸಮಸ್ಯೆಗಳನ್ನು ಸರಳವಾದ ಮನೆಮದ್ದಿನಿಂದ ಪರಿಹರಿಸಬಹುದಾಗಿದೆ

• ಡಾ. ಸತ್ಯನಾರಾಯಣ ಭಟ್ ಪಿ.

ದೇಹದ ಹೆಬ್ಬಾಗಿಲು ಬಾಯಿ. ದೈನಂದಿನ ಚಟುವಟಿಕೆಯ ಆರಂಭವಾಗುವುದು ದಂತಧಾವನ, ಅರ್ಥಾತ್ ಹಲ್ಲುಜ್ಜುವುದರ ಮೂಲಕ ತಾನೇ.

ಹಲ್ಲುಜ್ಜಲು ಬಳಸುವ ಹಸಿಕಡ್ಡಿಗಳ ಆಯ್ಕೆ ಋತುವಿಗೆ ಅನುಗುಣವಾಗಿ ಬದಲಾಗ ಬೇಕಾಗುತ್ತದೆ. ಬಹುತೇಕ ಕಫದೋಷವೇ ಬಾಯಿಯ ಬಗೆ ಬಗೆಯ ಕಾಯಿಲೆಗಳಿಗೆ ಮೂಲ. ಆಯಾ ಪ್ರಕೃತಿಗೆ ಅನುಗುಣವಾಗಿ ನಾನಾ ಕಡ್ಡಿಗಳನ್ನು ಬಳಸುವ ಆಯ್ಕೆ ಇದೆ. ಆಲ, ಅತ್ತಿ, ಎಕ್ಕ. ಬೇವು, ಬಿಳಿಮತ್ತಿ, ಕಗ್ಗಲಿ, ರಂಜೆ, ಕಾಚು ಮತ್ತು ಹೊಂಗೆ ಮರದ ಕಿರುಬೆರಳಿನಾಕಾರದ ಕಡ್ಡಿಗಳನ್ನು ಟೂತ್ ಬ್ರಷ್‌ಗಳಂತೆ ಬಳಸಬಹುದು. ತಾಜಾತನದ ಈ ಹಸಿರು ಪರಿಸರಸ್ನೇಹಿ ದಂತ ಕೂರ್ಚ(ಕುಂಚ)ದಿಂದ ಉಜ್ಜುವ ಹಲ್ಲು ಮಿರಮಿರನೆ ಮಿಂಚುವುದಷ್ಟೆ ಅಲ್ಲ, ದಂತಮೂಲ, ಎಂದರೆ ವಸಡಿನ ಭಾಗಕ್ಕೆ ಒಂದಿನಿತೂ ಗಾಯವಾಗದಂತೆ ಎಚ್ಚರದಿಂದ ಹಲ್ಲು ಮಾತ್ರ ಶುಚಿಗೊಳಿಸುವ ಆದೇಶ ಆಯುರ್ವೇದ ಸಂಹಿತೆಗಳ ಸಂದೇಶ; ರೋಗ ಬರದಂತೆ ತಡೆಯುವ ಅದ್ಭುತ ತಡೆಗೋಡೆ. ಮುಂಜಾನೆಯ ಇಂತಹ ದಂತಧಾವನದಿಂದ ಇಡೀ ದಿನದ 'ಗಟ್' (ಕರುಳು) ಆರೋಗ್ಯ ಕಾಪಾಡಲು ಸಾಧ್ಯ.

ಉಂಡ ಅನ್ನವು ಪಯಣಿಸುವ ದೇಹದ ಅತಿ ದೀರ್ಘ ಅವಯವ ಅನ್ನವಹ ಸ್ರೋತಸ್ (ಚಾನೆಲ್). ನಾಲಿಗೆ ಕೇವಲ ಮಾತನಾಡುವ ಅಂಗ ಮಾತ್ರ ಅಲ್ಲ, ಉಂಡ ಆಹಾರದ ರುಚಿಯ ಅರಿವಿಗೆ ನಾಲಗೆಯ ನಾನಾ ಭಾಗದಲ್ಲಿದೆ ಅದ್ಭುತ ವ್ಯವಸ್ಥೆ. ಷಡ್ರಸೋಪೇತ ಆಹಾರದ ಅರಿವು ಆಗುತ್ತದೆಯೇ? ಅದರ ಆರೋಗ್ಯಕ್ಕೆ ಗಮನವಿಡಿ. ಅದರಿಂದಲೂ ದೇಹಾರೋಗ್ಯ ಕಾಪಾಡಲು ಸಾಧ್ಯ. ನಾಲಿಗೆ ಶುಚಿಗೊಳಿಸಲು ಹಲ್ಲುಗಳನ್ನು ಶುಚಿಗೊಳಿಸುವ ಕಡ್ಡಿಗಳನ್ನು ಬಳಸಲಾದೀತು. ಚಿನ್ನ, ಬೆಳ್ಳಿಯ ಟಂಗ್‌ಕ್ಲೀನರ್ ಸಹ ಹಿಂದಿನ ಕಾಲದಲ್ಲಿ ಬಳಕೆಯಲ್ಲಿತ್ತು. 'ಜಿಹ್ವಾ ನಿರ್ಲೇಖನ' ಎಂಬ ದಿನಚರಿಯ ಭಾಗವದು.

ಹಲ್ಲಿನ ರಚನೆಗೆ ಕ್ಯಾಲ್ಸಿಯಂ ಎಂಬ ಪೂರಕವಾದ ಖನಿಜ ಅಂಶ ಬೇಕೇ ಬೇಕು. ಬಿಳಿಮತ್ತಿ, ಕರಿಮತ್ತಿ ಮರದ ತೊಗಟೆಯಲ್ಲಿದೆ ಇಂತಹ ಖನಿಜ. ಹಾಗಾಗಿಯೇ ಮೈಕ್ರೋಗ್ರಾಂ ರೂಪದಲ್ಲಿ ಸಹ ಇಂತಹ ಮರದ ಕಡ್ಡಿಗಳಿಂದ ಮಾಡುವ ದಂತಮಾರ್ಜನದಿಂದ ಹಲ್ಲುಗಳಿಗಿದೆ ಲಾಭ. ವಸಡಿನ ಮೂಲಕ ಮತ್ತಿ ಮರದ ಹಸಿರಸ ಹಲ್ಲಿನ ಬೇರಿಗಿಳಿದು ಕ್ಯಾಲ್ಸಿಯಂ ರೂಪದಲ್ಲಿ ತನ್ನ ಉಪಕಾರಗೈಯುತ್ತದೆ. ತಂಬಾಕುರಹಿತ ತಾಂಬೂಲ ಚರ್ವಣದಿಂದ ಸುಣ್ಣದಂಶದ ಹಿತಮಿತ ಸೇವನೆಯ ವಿಧಾನವೂ ಆಯುರ್ವೇದದ ದಿನಚರಿಯ ಭಾಗ; ಆದರೆ ಅದು ಚಟವಾಗಬಾರದು. ಬಕುಳ ಅಥವಾ ರೆಂಜೆ(ಪಗಡೆ) ಮರದ ದಂತಾರೋಗ್ಯದ ಬಳಕೆಗಳಿಗೆ ಒದಗುತ್ತದೆ ಎನ್ನುತ್ತದೆ, ಆಯುರ್ವೇದ. ಅದರ ತೊಗಟೆಯ ಪುಡಿ ಉತ್ತಮ ದಂತಧಾವನ ಚೂರ್ಣ. ಅತಿಮಧುರ ಎಂಬ ಅಂಗಡಿಯಲ್ಲಿ ಸಿಗುವ ಪುಡಿಯನ್ನು ಖರೀದಿಸಿ. ಸಕ್ಕರೆಗಿಂತ ನೂರ್ಮಡಿ ಸಿಹಿಯಾದ ವನಸ್ಪತಿ ಇದು. ಬಾಯಿಯ ಹುಣ್ಣು, ವಸಡು ಕುರ, ರುಚಿಗೆಟ್ಟ ನಾಲಗೆ, ಅತಿ ಕೆಂಪಾದ ಉರಿಯುವ ನಾಲಗೆಯ ತೊಂದರೆಯೇ? ಈ ಅತಿಮಧುರ ಕಷಾಯದ ಬಾಯಿಮುಕ್ಕುಳಿಸುವಿಕೆಯಂತೂ ಅಪರಿಮಿತ ಗುಣಗಳ ಖನಿ. ಸರಳ ಮನೆಮದ್ದು. ಜ್ಯೇಷ್ಠ(ಹಿರಿಯ) ಮಧು ಎಂಬ ಹಾಲೂಡಿಸುವ ತಾಯಂದಿರ ಮದ್ದಿನ ಪೆಟ್ಟಿಗೆಯ ಸರಕಾಗಿತ್ತು ಈ ಅತಿಮಧುರ. ಜೇನುಗೂಡಿಸಿ ಈ ಪುಡಿ ಹಚ್ಚಿದರೂ ಬಾಯಿ ಹುಣ್ಣು, ವಸಡು ಕುರದ ಬಾಧೆ ಉಪಶಮನ.

ಪದೇ ಪದೇ ಕಾಡುವ ಹಲ್ಲುನೋವಿನ ಸಮಸ್ಯೆ ಕಿರಿಯರ, ಹಿರಿಯರ ಅನುದಿನದ ಬವಣೆ. ಬಳಸಲಾಗುವ ಅತಿ ಸರಳ ಮನೆಮದ್ದು ಹೀಗಿದೆ. ತೆಂಗಿನೆಣ್ಣೆ, ಎಳ್ಳೆಣ್ಣೆ ಅಥವಾ ತುಪ್ಪವನ್ನು ಒಂದು ಚಮಚೆಯಷ್ಟು ಬಾಯಿಗೆ ಹಾಕಿಕೊಳ್ಳಿರಿ. ನಾಕಾರು ನಿಮಿಷ ಚೆನ್ನಾಗಿ ಬಾಯಿಮುಕ್ಕುಳಿಸುವ ಸರಳ ವಿಧಾನ. ಅದಾದ ಅನಂತರ ಬಿಸಿನೀರು ಹಾಕಿ ಬಾಯಿಮುಕ್ಕುಳಿಸುವ ಮನೆಮದ್ದು ಉಪಕಾರಿ ಮಾತ್ರ ಅಲ್ಲ. ಬಾಯಿಯ ಒಳಭಾಗದ ಆರೋಗ್ಯಕ್ಕೆ ಪೂರಕ. ಹೀಗಿವೆ ಹಲ್ಲುನೋವುಗಳಿಗೆ ಪರಿಹಾರ ಕ್ರಮಗಳು.

ಗಂಟಲುನೋವು ಮತ್ತು ಆಗಾಗ ಕಾಡುವ ವಸಡು ರಕ್ತಸ್ರಾವ ಕೂಡ 'ಹೀಟ್' ಎನ್ನುವ ಪಾರಿಭಾಷಿಕ ಪದ ಅನ್ವಯದ ತೊಂದರೆ. ಇದಕ್ಕೆ 'ಯಮಕ ಸ್ನೇಹ' ಎಂಬ ಸರಳ ಚಿಕಿತ್ಸೆ. ತೆಂಗಿನೆಣ್ಣೆ ಹಾಗೂ ತುಪ್ಪವನ್ನು ಮಿಶ್ರಮಾಡಿರಿ. ಸೌಟಿನ ಸಹಾಯದಿಂದ ಚೆನ್ನಾಗಿ ಬಿಸಿಮಾಡಿರಿ. ನೆತ್ತಿಗೆ ಹಚ್ಚಿ ಮಾಲೀಶು ಮಾಡಬೇಕು. ಕೂಡಲೇ ತಲೆಯನ್ನು ತೊಳೆದು ಸ್ನಾನ ಮಾಡಿ ಒಣಗಿಸಿಕೊಳ್ಳಿರಿ. ಕಿವಿ, ಗಂಟಲು, ಮೂಗು ಮತ್ತು ಬಾಯೊಳಗಣ ಅಂಗಗಳಿಗೆ ರಕ್ತಸ್ರಾವ ಹೆಚ್ಚಳ. ಅಲ್ಲಿ ಸೇರಿದ ಅನಗತ್ಯ ಲೋಳೆಯಂತಹ ಕಫದ ನಿರ್ಮೂಲನೆಯಾಗುತ್ತದೆ. ಆಗ ಸಮಸ್ಯೆಗೆ ಉತ್ತಮ ಪರಿಹಾರವಂತೂ ಶತಸ್ಸಿದ್ಧ!

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$a_2 + a_4 = 54$

$a + d + a + 3d = 54$

$2a + 4d = 54$

$a + 2d = 27$ ….. (i)

ಮೊದಲ 11 ಪದಗಳ ಮೊತ್ತ 693

$S_{11} = 693$

$\frac{11}{2}\left[2a + (11-1)d\right] = 693$

$2a + 10d = 693 \frac{2}{11}$

$2a + 10d = 126$

$a + 5d = 63$ ……… (ii)

(i) ರಲ್ಲಿ (ii) ಅನ್ನು ಕಳೆದಾಗ

$a + 2d = 27$

$a + 5d = 63$

$-3d = -36$

$\therefore d = 12$

ಈಗ ಇರುವ ಜಾಗದಲ್ಲಿ 12ನ್ನು ಹಾಕಿದಾಗ

$a + 2(12) = 27$

$\therefore a = 3$

ಸಾಮಾನ್ಯ AP ಯು ಹೀಗಿದೆ

$a,\ a + d,\ a + 2d,\ a + 3, \ldots$

$3,\ 3 + 12,\ 3 + 24,\ 3 + 36, \ldots$

$3,\ 15,\ 27,\ 39, \ldots$

ಆದ್ದರಿಂದ ಸಮಾಂತರ ಶ್ರೇಢಿ = 3, 15, 27, 39, …

$x_n = 132 + a_{54}$

$x_n = 132 + a + 53d$

$x_n = 132 + 3 + 636$

$x_n = 771$

$a + (n-1) = 771$

$3 + (n-1)12 = 771$

$12(n-1) = 768$

$n - 1 = 64$

$n = 65$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ

ಸಮಸ್ಯೆ ಮತ್ತು ಪರಿಹಾರ

1) $\frac{3}{2}, \frac{1}{2}, \frac{1}{2}, -\frac{1}{2}, -\frac{3}{2}$…………… ಈ ಸಮಾಂತರ ಶ್ರೇಢಿಯ ಮೊದಲ ಪದ a ಮತ್ತು ಸಾಮಾನ್ಯ ವ್ಯತ್ಯಾಸ d ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = \frac{3}{2},\ d = \frac{1}{2} - \frac{3}{2} = -1$

2) ಈ ಕೆಳಗಿನವುಗಳಲ್ಲಿ ಯಾವ ಸಂಖ್ಯಾ ಪಟ್ಟಿಗಳು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತವೆ? ಅವುಗಳು ಸಮಾಂತರ ಶ್ರೇಢಿಯನ್ನುಂಟು ಮಾಡಿದರೆ ಅದರ ಮುಂದಿನ ಎರಡು ಪದಗಳನ್ನು ಕಂಡುಹಿಡಿಯಿರಿ.

i) 4, 10, 16, 22 …….. ii) 1, -1, -3, -5 ……..
iii) -2, 2, -2, 2 …….. iv) 1, 1, 1, 2, 2, 2, 3, 3, 3 ……..

ಪರಿಹಾರ: (i) $a_2 - a_1 = 10 - 4 = 6$

$a_3 - a_2 = 16 - 10 = 6$

$a_4 - a_3 = 22 - 16 = 6$

ಅಂದರೆ $a_{k+1} - a_k$ ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಮೇಲಿನ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸ d=6 ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡಿದೆ ಅದರ ಮುಂದಿನ ಎರಡು ಪದಗಳು 22 + 6 = 28 ಮತ್ತು 28+6= 34

ii) $a_2 - a_1 = -1 - 1 = -2$

$a_3 - a_2 = -3 - (-1) = -3 + 1 = -2$

$a_4 - a_3 = -5 - (-3) = -5 + 3 = -2$

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ ಆದ್ದರಿಂದ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸ d = -2 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ. ಅದರ ಮುಂದಿನ ಎರಡು ಪದಗಳು -5 + (-2) = -7 ಮತ್ತು -7 + (-2) = -9

iii) $a_2 - a_1 = 2 - (-2) = 2 + 2 = 4$

$a_3 - a_2 = -2 - 2 = -4$

$\therefore a_2 - a_1 \neq a_3 - a_2$ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುವುದಿಲ್ಲ.

iv) $a_2 - a_1 = 1 - 1 = 0$

$a_3 - a_2 = 1 - 1 = 0$

$a_4 - a_3 = 2 - 1 = 1$

ಇಲ್ಲಿ $a_2 - a_1 = a_3 - a_2 \neq a_4 - a_3$ ಆದ್ದರಿಂದ ಕೊಟ್ಟ ಸಂಖ್ಯಾಪಟ್ಟಿಯು ಸಮಾಂತರ ಶ್ರೇಢಿಯನ್ನು ಉಂಟುಮಾಡುವುದಿಲ್ಲ.

ಅಭ್ಯಾಸ 5.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

i) ಒಂದು ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ.. 15/– ಆಗಿದ್ದು ನಂತರದ ಪ್ರತಿ ಕಿಲೋಮೀಟರ್‌ಗೆ ರೂ.. 8/–ರಂತೆ ಇರುತ್ತದೆ.

ii) ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

iii) ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ. 150/– ನಂತರದ ಪ್ರತಿ ಮೀಟರ್‌ಗೆ ರೂ. 50/–ರಂತೆ ಹೆಚ್ಚಾಗುತ್ತಾ ಹೋಗುತ್ತದೆ.

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ:

(i) ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ. 15/–= a_1

ಟ್ಯಾಕ್ಸಿಯ ಬಾಡಿಗೆ 2kms = Rs15 + Rs8 = Rs 23 = a_2

ಟ್ಯಾಕ್ಸಿಯ ಬಾಡಿಗೆ 3kms = Rs23 + Rs8 = Rs 31 = a_3

ಟ್ಯಾಕ್ಸಿಯ ಬಾಡಿಗೆ 4kms = Rs31 + Rs8 = Rs 39 = a_4

ಹೀಗೆಯೇ ಮುಂದುವರಿಯುತ್ತದೆ

$a_2 - a_1$ = Rs 23 - Rs 15 = Rs 8

$a_3 - a_2$ = Rs 31 - Rs 23 = Rs 8

$a_4 - a_3$ = Rs 39 - Rs 31 = Rs 8

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 8 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

(ಮುಂದುವರಿಯುವುದು)

PHYSICS

Chapter – 2

ELECTROSTATIC POTENTIAL AND CAPACITANCE

39. Write a short note on Van de Graaff Generator.

Soln:- Van de Graaff Generator is an electrostatic high voltage generator which can generate a few million volt potential difference. It is simply known as High Voltage generator. It is designed by Robert J. Van de Graff.

Purpose– It is basically an arrangement for producing a very high potential difference of the order of several million volt say about 20 million volt. (i.e., 20 MV)

Uses – (i) The beam of the positively charged accelerated particles are used to trigger the nuclear reactions.

(ii) It is used to accelerate charged particles like duetrons and protons.

(iii) Accelerated particle beams are used to break atoms for various experiments in physics.

(iv) In medicine, beams of positively charged particles are used to treat cancer.

Principle – The principle of van de Graaff generator is that large amount of charge can be placed on the outer surface of a spherical shell to increase its potential to very high value.

Explanation - Let a small charged conducting shell of radius r be located inside a larger charged conducting shell of radius R. If they are connected together with a conductor, then charge q from the small shell will move to the outer surface of the bigger shell irrespective of its own charge Q.

Potential difference = $V_{(r)} - V_{(R)}$

$$= \frac{q}{4\pi\epsilon_0}\left(\frac{1}{r} - \frac{1}{R}\right)$$

Hence, the potential of the outer shell increases considerably.

Thus, a large amount of charge can be collected on the outer shell.

Construction and working – It consists of a large conducting spherical shell (S) of few meter radius supported on an insulated stand of height of many meter.

A belt made of insulated fabric runs over two pulleys P_1 and P_2. Pulley P_1 and the belt are run by an electric motor.

A spray comb C_1 (made of metallic needles) is connected to high voltage rectifier (H.V.R) which is earthed.

A collecting comb C_2 (made of metallic needles) facing the belt is connected to the spherical shell S.

Let spray comb C_1 be charged to high +ve potential which sprays + ve charge to the belt which in turn becomes positively charged (sharp teeth of the comb has very high charge density which sets up corona discharging action, thus setting up a sort of wind of positive charges). Since belt is moving up, so it carries this positive charge upward.

Opposite charge appears on the teeth of collecting comb C_2 by induction from the belt. As a result of this, positive charge appears on the outer surface of shell S. As the belt is moving continuously, so the charge on the shell S increases continuously.



Consequently, the potential of the shell (S) rises to a very high value. When the charge on the spherical shell is very high, leakage due to ionisation of surrounding air also increases.

To prevent the leakage, the generator is enclosed in an earthed steel tank filled with air (or methane or nitrogen) under pressure.

Now the charged particles at the top of the tube (T) are at very high potential with respect to the lower end of the tube which is earthed. Thus, these particles are accelerated downward and hit the target after emerging from the tube.

The energy required by a charge q is = qV, where V is the potential of the spherical shell S.

40. It is advised to be inside a car or a bus than to stand under a tree during thunder storm. Why?

Ans:- During thunder storm, a strong electric field exists in the atmosphere. A car or a bus can be *(Contd)*

ಅಪರಾಧ: ವಲಸಿಗರ ಕರಾಮತ್ತು

ರಾಜ್ಯದಲ್ಲಿ ಈವರೆಗೆ 525 ವಿದೇಶಿ ಅಕ್ರಮ ವಲಸಿಗರು ಪತ್ತೆ • 310 ಮಂದಿ ಗಡಿಪಾರು

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ ನೆಲಸಿರುವ ವಿದೇಶಿ ಅಕ್ರಮ ವಲಸಿಗರು ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿರುವ ಮಾಹಿತಿ ಸಿಕ್ಕಿದ್ದು, ಅವರ ವಿರುದ್ಧದ ಕಾರ್ಯಾಚರಣೆಯನ್ನು ಪೊಲೀಸರು ತೀವ್ರಗೊಳಿಸಿದ್ದಾರೆ. ಅಕ್ರಮ ವಲಸಿಗರ ಪತ್ತೆಹಚ್ಚಿ ಗಡಿಪಾರು ಮಾಡುವ ಕಾರ್ಯಕ್ಕೆ ಪೊಲೀಸರು ವೇಗ ನೀಡಿದ್ದಾರೆ.

ವಿದ್ಯಾರ್ಥಿ, ಮೆಡಿಕಲ್ ಹಾಗೂ ಪ್ರವಾಸಿ ವೀಸಾದ ಮೇಲೆ ವಿದೇಶಿಗರು ಬಂದು, ವೀಸಾದ ಅವಧಿ ಮುಕ್ತಾಯವಾದ ಮೇಲೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನೆಲೆಯೂರಿ 'ಅಕ್ರಮ ದಂಧೆ'ಯಲ್ಲಿ ತೊಡಗುತ್ತಿದ್ದಾರೆ.

ರಾಜ್ಯದಲ್ಲಿ ಇದುವರೆಗೂ 525 ಮಂದಿ ವಿದೇಶಿ ಅಕ್ರಮ ವಲಸಿಗರನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಆ ಪೈಕಿ 310 ಮಂದಿಯನ್ನು ಗಡಿಪಾರು ಮಾಡಲಾಗಿದೆ. ಉಳಿದವರ ಗಡಿಪಾರಿಗೂ ಪ್ರಕ್ರಿಯೆಗಳೂ ಆರಂಭವಾಗಿವೆ. ಅಕ್ರಮ ವಲಸಿಗರ ವಿರುದ್ಧ ಒಟ್ಟು 65 ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ.

ಈ ವರ್ಷದ ಜನವರಿ 1ರಿಂದ ಅಕ್ಟೋಬರ್ 8ರ ವರೆಗೆ ಬೆಂಗಳೂರಿನಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿದ್ದ 35 ವಿದೇಶಿಯರನ್ನು ಬಂಧಿಸಲಾಗಿದೆ. ವಿದೇಶಿ ಅಕ್ರಮ ವಲಸಿಗರಲ್ಲಿ ಹೆಚ್ಚಿನವರು ಡ್ರಗ್ಸ್ ಪೂರೈಕೆ ದಂಧೆಯಲ್ಲಿ ತೊಡಗಿರುವುದು ಪೊಲೀಸರ ಕಾರ್ಯಾಚರಣೆಯಲ್ಲಿ ಕಂಡುಬಂದಿದೆ.

'ಡ್ರಗ್ಸ್ ಪೂರೈಕೆ, ಕಳ್ಳತನ ಪ್ರಕರಣಗಳನ್ನು ಪತ್ತೆಹಚ್ಚುವ ಕಾರ್ಯಾಚರಣೆ ವೇಳೆ ವಿದೇಶಿ ಆರೋಪಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿ ಬೀಳುತ್ತಿದ್ದಾರೆ. ವಿದೇಶಿ ಪ್ರಜೆಗಳ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಅಕ್ಟೋಬರ್ 9ರಂದು 12 ದೇಶಗಳ ರಾಯಭಾರ ಕಚೇರಿಯ ಅಧಿಕಾರಿಗಳ ಜತೆಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ನೇತೃತ್ವದಲ್ಲಿ ಸಮನ್ವಯ ಸಮಿತಿ ಸಭೆ ನಡೆದಿದೆ. ಜರ್ಮನಿ, ಆಸ್ಟ್ರೇಲಿಯಾ, ನೆದರ್ಲೆಂಡ್, ಇಸ್ರೇಲ್, ಅಮೆರಿಕ ಜಪಾನ್, ಫ್ರಾನ್ಸ್ ದೇಶದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ನೈಜೀರಿಯಾದಿಂದ ಹೆಚ್ಚಿನ ಯುವಕರು ನಗರಕ್ಕೆ ಬರುತ್ತಿದ್ದು, ಅಪರಾಧ ಕೃತ್ಯದಲ್ಲಿ ತೊಡಗುತ್ತಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ಯಾವುದೇ ಜಿಲ್ಲೆಯಲ್ಲಿ ವಿದೇಶಿಯರು ನೆಲಸಿದ್ದರೂ ಕಡ್ಡಾಯವಾಗಿ ಆಯಾ ವ್ಯಾಪ್ತಿಯ ಪೊಲೀಸರಿಗೆ ಮಾಹಿತಿ ಒದಗಿಸಬೇಕು. ಇದರಿಂದ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಹಾಗೂ ವಿದೇಶಿ ಪ್ರಜೆಗಳಿಗೆ ಸೂಕ್ತ ಭದ್ರತೆ ಒದಗಿಸಲು ಅನುಕೂಲ ಆಗಲಿದೆ. ಈ ವಿಚಾರವನ್ನು ರಾಯಭಾರ ಕಚೇರಿ ಅಧಿಕಾರಿಗಳಿಗೂ ಮನವರಿಕೆ ಮಾಡಲಾಗಿದೆ' ಎಂದು ಸಭೆಯಲ್ಲಿದ್ದ ಅಧಿಕಾರಿಯೊಬ್ಬರು ತಿಳಿಸಿದರು.

'ಅಕ್ರಮ ವಲಸಿಗರ ಪತ್ತೆಗೆ ಠಾಣಾ ವ್ಯಾಪ್ತಿಯಲ್ಲಿ ಗುಪ್ತಚರ ಸಿಬ್ಬಂದಿ ನಿಯೋಜಿಸಲಾಗಿದೆ. ವಲಸಿಗರು ನೆಲಸಿರುವ ಸ್ಥಳಗಳ ಮೇಲೆ ಅವರು ನಿಗಾ ವಹಿಸುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ನೋಂದಣಿ ಕಡ್ಡಾಯ: 'ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸಂಸ್ಥೆಗಳು, ಕಂಪನಿಗಳು, ಸ್ವಯಂ ಸೇವಾ ಸಂಸ್ಥೆಗಳು, ಡಯಾಗ್ನಸ್ಟಿಕ್ ಕೇಂದ್ರಗಳು ತಮ್ಮಲ್ಲಿರುವ ವಿದೇಶಿ ಪ್ರಜೆಗಳು, ಯಾವ ಉದ್ದೇಶದಿಂದ ಇದ್ದಾರೆ. ಅವರ ಕೆಲಸಗಳು ಏನು? ಅಧ್ಯಯನ, ಸಂಶೋಧನೆ ನಡೆಸುತ್ತಿದ್ದರೆ ಅಂತಹವರ ಮಾಹಿತಿಯನ್ನು ಪೊಲೀಸರಿಗೆ ಒದಗಿಸುವುದನ್ನು ಕಡ್ಡಾಯ ಮಾಡಲಾಗಿದೆ' ಎಂದು ಗುಪ್ತಚರ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ವಲಸಿಗರ ಬಳಿ ನಕಲಿ ಆಧಾರ್ ಕಾರ್ಡ್

ಅಕ್ರಮ ವಲಸಿಗರು ನಕಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್ ಮಾಡಿಸಿಕೊಂಡಿರುವುದು ಪತ್ತೆಯಾಗಿದೆ. ಆ ರೀತಿ ನಕಲಿ ಕಾರ್ಡ್ ಮಾಡಿಸಿಕೊಂಡಿದ್ದ 12 ಮಂದಿಯ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅತಿಹೆಚ್ಚು ವಿದೇಶಿ ಪ್ರಜೆಗಳು ನೆಲಸಿರುವ ನಗರ ಹಾಗೂ ಜಿಲ್ಲೆ

ಹೆಸರು	ಸಂಖ್ಯೆ
ಬೆಂಗಳೂರು ನಗರ	10,650
ಮೈಸೂರು ನಗರ	541
ಉತ್ತರ ಕನ್ನಡ ಜಿಲ್ಲೆ	496
ಉಡುಪಿ ಜಿಲ್ಲೆ	458
ಬೆಳಗಾವಿ ಜಿಲ್ಲೆ	424
ಮೈಸೂರು ಜಿಲ್ಲೆ	271

ವಿದೇಶದಿಂದ ಬರುವ ಪ್ರಜೆಗಳು, ರಾಯಭಾರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವವರು ನೆಲಸಿರುವ ಪ್ರದೇಶ, ಸಂಪರ್ಕ ಸಂಖ್ಯೆಯನ್ನು ಕಮಾಂಡ್ ಸೆಂಟರ್‌ಗೆ ಒದಗಿಸಲು ಸೂಚಿಸಲಾಗಿದೆ

ಸೀಮಾಂತ್‌ಕುಮಾರ್ ಸಿಂಗ್
ನಗರ ಪೊಲೀಸ್ ಕಮಿಷನರ್

ಅಕ್ರಮ ವಾಸಕ್ಕೆ ಸಂಸ್ಥೆಗಳ ನೆರವು

ಶಿಕ್ಷಣದ ಉದ್ದೇಶಕ್ಕೆ ವೀಸಾ ಪಡೆದು ಕೆಲವು ದೇಶಗಳಿಂದ ವಿದ್ಯಾರ್ಥಿಗಳು ರಾಜ್ಯಕ್ಕೆ ಬಂದಿದ್ದಾರೆ. ಅವರ ವೀಸಾ ಅವಧಿ ಮುಗಿದ ಮೇಲೂ ಇಲ್ಲೇ ತಂಗಲು ಕೆಲವು ಶಿಕ್ಷಣ ಸಂಸ್ಥೆಗಳು ನೆರವು ನೀಡುತ್ತಿರುವುದು ಗೊತ್ತಾಗಿದೆ. ಅಂತಹ ಸಂಸ್ಥೆಗಳ ಆಡಳಿತ ಮಂಡಳಿ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಡಿ.9ರಿಂದ ಸೂಪರ್ ಕಂಪ್ಯೂಟಿಂಗ್ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್) ವತಿಯಿಂದ ಡಿ.9ರಿಂದ 13ರವರಗೆ ಇಲ್ಲಿನ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೂಪರ್ ಕಂಪ್ಯೂಟಿಂಗ್ ಇಂಡಿಯಾ ಸಮಾವೇಶ ನಡೆಯಲಿದೆ.

ಸಮಾವೇಶದ ಪ್ರಯುಕ್ತ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಕಾರ್ಯಕ್ರಮಕ್ಕೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್. ಕೃಷ್ಣನ್ ಚಾಲನೆ ನೀಡಿದರು.

'ಪರಮ ರುದ್ರ ಸೂಪರ್ ಕಂಪ್ಯೂಟರ್‌ಗಳು ಮಹತ್ವದ ವೈಜ್ಞಾನಿಕ ಸಂಶೋಧನೆಗೆ ನೆರವಾಗುತ್ತಿವೆ'ಎಂದರು.

ಸಿ–ಡಾಕ್‌ನ ಮಹಾ ನಿರ್ದೇಶಕ ಮಗೇಶ್ ಎಥಿರಾಜನ್, 'ಸಮಾವೇಶದಲ್ಲಿ 200ಕ್ಕೂ ಅಧಿಕ ಭಾಷಣಕಾರರು, 15ಕ್ಕೂ ಹೆಚ್ಚು ದೇಶಗಳ 500ಕ್ಕೂ ಅಧಿಕ ಸಂಶೋಧಕರು ಭಾಗವಹಿಸುವರು' ಎಂದರು.

ಸಿ–ಡಾಕ್ ಜಂಟಿ ಕಾರ್ಯದರ್ಶಿ ರಾಜೇಶ್ ಸಿಂಗ್, ಕಾರ್ಯ ನಿರ್ವಾಹಕ ನಿರ್ದೇಶಕ ಎಸ್.ಡಿ. ಸುದರ್ಶನ್, ಸಂಶೋಧಕ ಮೊಹ್ಮದ್ ಮಿಸ್ಬಾಹುದ್ದೀನ್ ಉಪಸ್ಥಿತರಿದ್ದರು.

'ಮಕ್ಕಳ ಸೃಜನಶೀಲತೆಗೆ ಮೊಬೈಲ್ ಅಡ್ಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿನ ಸೃಜನಶೀಲತೆಗೆ ಮೊಬೈಲ್ ಅಡ್ಡಿಯಾಗಿದೆ. ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿ, ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು' ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರು ಪೋಷಕರಿಗೆ ಕಿವಿಮಾತು ಹೇಳಿದರು.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಹಾಗೂ ಜವಾಹರ ಬಾಲಭವನ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಕ್ಕಳ ಜಾತ್ರೆಯ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಕ್ಕಳಲ್ಲಿ ಕುತೂಹಲ ಕೆರಳಿಸುವುದು, ಸೂಕ್ತ ಅವಕಾಶ ಕಲ್ಪಿಸುವುದು ಮತ್ತು ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದರಿಂದ ಅವರೊಳಗಿನ ಸೃಜನಶೀಲತೆ ಅರಳುತ್ತದೆ. ಪ್ರತಿ ಮಗುವೂ ಹುಟ್ಟುತ್ತಲೇ ಪ್ರತಿಭೆಗಳ ಕಣಜ ಆಗಿರುತ್ತದೆ. ಆ ಮಗುವಿನ ಮನಸ್ಸಿನ, ಆಲೋಚನೆಯ ಕಿಟಕಿ ತೆರೆದಾಗ ಪ್ರತಿಭೆ ಹೊರಗೆ ಬರುತ್ತದೆ. ಆದ್ದರಿಂದ ಮಕ್ಕಳನ್ನು ಯಾರೂ ಪ್ರತಿಭಾವಂತರನ್ನಾಗಿ ಮಾಡುವ ಅಗತ್ಯವಿಲ್ಲ. ಪ್ರತಿಭೆ ಅರಳಲು ಅಗತ್ಯವಾದ ವಾತಾವರಣ ಕಲ್ಪಿಸಿದರೆ ಸಾಕು' ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎನ್.ಎ. ಹ್ಯಾರಿಸ್, 'ಮೊಬೈಲ್‌ನಿಂದಾಗಿ ಮಕ್ಕಳು ಮನೆಯ ಹೊರಗಡೆ ಆಟವಾಡಲು ಇಷ್ಟಪಡುತ್ತಿಲ್ಲ. ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರತರಬೇಕು. ದೈಹಿಕ ಮತ್ತು ಮಾನಸಿಕ ಸದೃಢತೆ ಕಾಪಾಡಿಕೊಳ್ಳುವುದು ಮುಖ್ಯ' ಎಂದರು.

ಕಲಾತ್ಮಕ ನಿರ್ದೇಶಕ ಅರುಣ್ ಸಾಗರ್, 'ಕ್ರೀಡೆ, ಸಾಹಿತ್ಯ, ಸಂಗೀತ ಸೇರಿ ವಿವಿಧ ಕ್ಷೇತ್ರಗಳಲ್ಲಿ ಮಕ್ಕಳಿಗೆ ಆಸಕ್ತಿ ಇರುತ್ತದೆ. ಪಾಲಕರು ಪ್ರತಿಭೆ ಹಾಗೂ ಆಸಕ್ತಿಯನ್ನು ಗುರುತಿಸಿ, ಪ್ರೋತ್ಸಾಹಿಸಬೇಕು' ಎಂದು ಹೇಳಿದರು.

ಚಿತ್ರಕಲೆ ಸೇರಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಬಳಿಕ ಗಾಯಕ ಮೆಹಬೂಬ್‌ಸಾಬ್ ನದಾಫ್ ಅವರು ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಟ್ಟರು.

ವಿವಿಧ ಸ್ಪರ್ಧೆಯ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಮಹೇಶ್ ಬಾಬು ಎನ್., ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಅರುಣ್ ಸಾಗರ್, ಕೆ.ವಿ. ಪ್ರಭಾಕರ್, ಪ್ರೆಸ್‌ಕ್ಲಬ್ ಕಾರ್ಯಕಾರಿ ಸಮಿತಿ ಸದಸ್ಯ ಶಿವಣ್ಣ, ಬಾಲಭವನದ ಅಧ್ಯಕ್ಷ ಬಿ.ಆರ್. ನಾಯ್ಡು, ಪ್ರೆಸ್‌ಕ್ಲಬ್ ಕಾರ್ಯದರ್ಶಿ ಮಂಜುನಾಥ್ ಜಿ.ವೈ., ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಸದಸ್ಯ ಶರಣಬಸಪ್ಪ ಎ.ಎಚ್. ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೆ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿ, ಎಲ್ಲ ಉದ್ಯೋಗಗಳಲ್ಲಿ ಮೀಸಲಾತಿ ಜಾರಿಗೆ ಒತ್ತಾಯಿಸಿ ಹೋರಾಡಲು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ನೇತೃತ್ವದಲ್ಲಿ ನಡೆದ ಪಕ್ಷಾತೀತ ಸಮಾಲೋಚನಾ ಸಭೆ ನಿರ್ಧರಿಸಿದೆ.

ಶೀಘ್ರದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಕನ್ನಡ ಮತ್ತು ರಾಜ್ಯದ ಹಿತಾಸಕ್ತಿ ಕಾಪಾಡುವ ಹಕ್ಕೊತ್ತಾಯ ಮಂಡಿಸಲು, ನವೆಂಬರ್‌ನಲ್ಲಿ ಹಕ್ಕೊತ್ತಾಯ ಸಮಾವೇಶ ನಡೆಸಲು ಮತ್ತೆ ಸಭೆ ನಡೆಸುವ ನಿರ್ಧಾರ ಮಾಡಲಾಯಿತು.

ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ,. ಕೆ.ಆರ್.ಎಸ್. ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಕನ್ನಡ ಹೋರಾಟಗಾರ ಸಾ.ರಾ. ಗೋವಿಂದ, ಕನ್ನಡ ರಕ್ಷಣಾ ವೇದಿಕೆಯ ಶಿವರಾಮೇಗೌಡ, ಬನವಾಸಿ ಬಳಗದ ಆನಂದ್ ಜಿ. ಅರುಣ್ ಜಾವಗಲ್ ಇತರರು ಭಾಗವಹಿಸಿದ್ದರು.

ಟಿಎಪಿಸಿಎಂಎಸ್ ಕಟ್ಟಡ ಉದ್ಘಾಟನೆ

ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಕಟ್ಟಡವನ್ನು ಶಾಸಕ ಶ್ರೀನಿವಾಸ್ ಉದ್ಘಾಟಿಸಿದರು. ಬಿ.ಎನ್.ನರಸಿಂಹಮೂರ್ತಿ, ಮೋಹನ್‌ಕುಮಾರ್, ಗುರುಪ್ರಕಾಶ್, ಕೇಶವಮೂರ್ತಿ, ಎನ್.ಗಣೇಶ್, ಲೋಲಾಕ್ಷಿ ಗಂಗಾಧರ್ ಇದ್ದಾರೆ.

ನೆಲಮಂಗಲ: ಶಾಸಕರ ಅನುದಾನದಲ್ಲಿ ಟಿಎಪಿಸಿಎಂಎಸ್‌ನ ಕಟ್ಟಡದ ಒಳಾಂಗಣ ವಿನ್ಯಾಸ ಹಾಗೂ ಸಂಪರ್ಕಕ್ಕೆ ಕಾಂಕ್ರೀಟ್ ರಸ್ತೆ ನಿರ್ಮಿಸಕೊಡಲಾಗುವುದು ಎಂದು ಶಾಸಕ ಎನ್.ಶ್ರೀನಿವಾಸ್ ಹೇಳಿದರು.

ನೆಲಮಂಗಲ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎನ್. ನರಸಿಂಹಮೂರ್ತಿ ಮಾತನಾಡಿ, 'ಒಟ್ಟು 3,432 ಚದರ ಅಡಿಯ 3 ಅಂತಸ್ತಿನ ಕಟ್ಟಡ ನಿರ್ಮಿಸಲು ₹1.75 ಕೋಟಿ ವೆಚ್ಚವಾಗಿದ್ದು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ ₹99 ಲಕ್ಷ ಸಾಲ ಪಡೆಯಲಾಗಿದೆ' ಎಂದರು.

ಉಪಾಧ್ಯಕ್ಷ ಮೋಹನ್ ಕುಮಾರ್, ನಿರ್ದೇಶಕ ಗುರು ಪ್ರಕಾಶ್, ಜಗಜ್ಯೋತಿ ಬಸವೇಶ್ವರ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಪಟ್ಟಾಭಿರಾಮಯ್ಯ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ನಾಗರಾಜು, ಮಾಜಿ ಅಧ್ಯಕ್ಷ ಎಂ. ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ವಕೀಲರ ಸಂಘದ ಅಧ್ಯಕ್ಷ ಕೇಶವಮೂರ್ತಿ, ನಗರಸಭೆ ಸದಸ್ಯೆ ಲೋಲಾಕ್ಷಿ ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಇದ್ದರು.

ವ್ಯಕ್ತಿತ್ವ ವಿಕಸನ ಭಾಷಣಕಾರ ಶವವಾಗಿ ಪತ್ತೆ

ಮುಂಬೈ (ಪಿಟಿಐ): ನಾಪತ್ತೆ ಆಗಿದ್ದ ಬೆಂಗಳೂರಿನ ವ್ಯಕ್ತಿತ್ವ ವಿಕಸನ ಭಾಷಣಕಾರ, ಪ್ರೊ. ಷಣ್ಮುಗ ಎಸ್. ಬಾಲಸುಬ್ರಮಣಿಯಂ ಅವರ ಮೃತದೇಹ ಮಹಾರಾಷ್ಟ್ರದ ರಾಯಗಢ ಜಿಲ್ಲೆ ಮಾಥೆರಾನ್ ಗಿರಿಧಾಮದ 1,200 ಅಡಿ ಆಳದ ಕಮರಿಯಲ್ಲಿ ಪತ್ತೆಯಾಗಿದೆ.

ಬೇಲಾಪುರ ನಿವಾಸಿಯಾಗಿದ್ದ ಅವರು ಅ.13ರಿಂದ 17ರವರೆಗೆ ಆನ್‌ಲೈನ್ ಮೂಲಕ ಗಿರಿಧಾಮದ ಹೋಟೆಲ್ ಕೊಠಡಿ ಕಾಯ್ದಿರಿಸಿಕೊಂಡು ತಂಗಿದ್ದರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅ.15ರಂದು ಹೋಟೆಲ್‌ನಿಂದ ಹೊರಹೋಗಿದ್ದ ಷಣ್ಮುಗ ಅವರು ಮರಳಿರಲಿಲ್ಲ. ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಈ ವಿಷಯ ತಿಳಿಸಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಬೆಟ್ಟದಲ್ಲಿ ಶೋಧ ನಡೆಸಿದ್ದರು. ಗಿರಿಧಾಮದ ಆಳದ ಕಮರಿಯಲ್ಲಿ ಭಾನುವಾರ ಶವ ಪತ್ತೆಯಾಯಿತು. ಖಾಸಗಿ ರಕ್ಷಣಾ ತಂಡ ಮೃತದೇಹವನ್ನು ಅಲ್ಲಿಂದ ತಂದಿತು.

ಷಣ್ಮುಗ ಅವರ ಹಿರಿಯ ಸಹೋದರ ಶವದ ಗುರುತು ಖಚಿತಪಡಿಸಿದ್ದಾರೆ.

ಪುಸ್ತಕಗಳ ಜನಾರ್ಪಣೆ ಸಮಾರಂಭದಲ್ಲಿ ಎಲ್. ಸಿದ್ದಲಿಂಗಯ್ಯ ಅಭಿಪ್ರಾಯ

'ದಲಿತ ಸಾಹಿತಿಯೆಂಬ 'ಕ್ರೆಡಿಟ್' ಅಗತ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಎಂಬ 'ಕ್ರೆಡಿಟ್' ಅಗತ್ಯವಿಲ್ಲ. ಸಾಹಿತಿ ಎನ್ನುವುದು ಹೆಮ್ಮೆಯ ವಿಚಾರವಾಗಬೇಕೆ ಹೊರತು, ದಲಿತ ಸಾಹಿತಿ ಎನ್ನುವುದು ಮುಖ್ಯವಾಗಬಾರದು' ಎಂದು ಕವಿ ಎಲ್. ಹನುಮಂತಯ್ಯ ಹೇಳಿದರು.

ಶೂದ್ರ ಪ್ರತಿಷ್ಠಾನ ಮತ್ತು ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಜಂಟಿಯಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಚ್. ಲಕ್ಷ್ಮೀನಾರಾಯಣ ಸ್ವಾಮಿ ಅವರ 'ಒಳಮೀಸಲಾತಿ ಮತ್ತು ಇತರೆ ಲೇಖನಗಳು', 'ತೊಗಲ ಚೀಲದ ಕರ್ಣ' ಹಾಗೂ 'ನೂಲ ಏಣಿಯ ನಡಿಗೆ' ಪುಸ್ತಕಗಳನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

'ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಎಂದು ಗುರುತಿಸಿಕೊಳ್ಳುವುದು ಹೆಮ್ಮೆ ಆಗಬಾರದು. ಆ ಮೀಸಲಾತಿಯನ್ನು ನಾವು ಕೇಳಿದವರಲ್ಲ, ಅಗತ್ಯವೂ ಇಲ್ಲ. ಮೊದಲು ನಾವು ಸಾಹಿತಿ ಅಥವಾ ಕವಿಯಾದರೆ, ಆಮೇಲೆ ಯಾವ ಸಾಹಿತಿ, ಕವಿ ಎನ್ನುವ ಪ್ರಶ್ನೆ ಬರಲಿದೆ. ಕವಿಯೇ ಅಲ್ಲದಿದ್ದರೂ ದಲಿತನಾದ್ದರಿಂದ ಮೀಸಲಾತಿ ನೀಡಿ ಎನ್ನುವುದು ಯೋಗ್ಯವಲ್ಲ' ಎಂದರು.

'ದಲಿತರಲ್ಲದವರೂ ದಲಿತ ಬದುಕಿನ ಚಿತ್ರಣವನ್ನು ಅತ್ಯಂತ ಪರಣಾಮಕಾರಿಯಾಗಿ ಬರೆದಿದ್ದಾರೆ. ಅದು ಕನ್ನಡ ಸಾಹಿತ್ಯದ ಹಿರಿಮೆ. ಕುವೆಂಪು ಅವರ ಕೃತಿಗಳಲ್ಲಿನ ದಲಿತ ಪಾತ್ರಗಳನ್ನು ಅಧ್ಯಯನ ಮಾಡಿದರೆ, ದಲಿತ ಲೇಖಕನಿಗೆ ಸಿಗದಿರುವ ಅನೇಕ ಒಳನೋಟ ಅವರ ಕಾದಂಬರಿಗಳಲ್ಲಿ ಸಿಗುತ್ತವೆ. ನನ್ನ ಪ್ರಕಾರ ಮೊದಲ ದಲಿತ ಬರಹಗಾರ ಕುವೆಂಪು. ಅವರಿಗಿಂತ ಹಿಂದೆ ಹೋದರೆ ಮಾದಾರ ಚನ್ನಯ್ಯ ದಲಿತ ಬರಹಗಾರ. ಅವರನ್ನೂ ಮೀರಿದ ದಲಿತ ಬರಹಗಾರ ಬಸವಣ್ಣ' ಎಂದರು.

'ಒಳಮೀಸಲಾತಿ ಜಾರಿಯಾಗಿದ್ದು, ಮುಂದೇನು ಎಂಬ ಪ್ರಶ್ನೆ ಕಾಡುತ್ತಿದೆ. ಈ ಒಳಮೀಸಲಾತಿಯ ಹೊಂಡದಲ್ಲಿಯೇ ಬಿದ್ದು ಒದ್ದಾಡಬೇಕೆ ಅಥವಾ ಅದರಿಂದ ನೆಗೆದು, ದಡದ ಮೇಲೆ ನಿಂತು ವಿಸ್ತಾರವಾದ ಕಣ್ಣನ್ನು ತೆರೆದುಕೊಳ್ಳಬೇಕೆ ಎಂಬ ಪ್ರಶ್ನೆಯನ್ನು ಯುವಕರ ಮುಂದೆ ಇಡಬೇಕಿದೆ. ಒಳಮೀಸಲಾತಿ ಸಣ್ಣ ಕ್ಷೇತ್ರವಾಗಿದ್ದು, ಇದು ಜಾರಿಯಾದ ಕಾಲಮಾನಕ್ಕೆ ಸರಿಯಾಗಿ ಖಾಸಗಿ ಕ್ಷೇತ್ರ ವಿಸ್ತರಿಸಿಕೊಂಡಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮ ಪ್ರವೇಶ ಮತ್ತು ಅಲ್ಲಿ ನಮ್ಮ ಪಾಲನ್ನು ಪಡೆಯುವುದು ಹೇಗೆ ಎಂಬ ಆಲೋಚನೆ ಮಾಡುವುದೇ ಒಳಮೀಸಲಾತಿಯ ನಿಜವಾದ ಮುನ್ನೋಟ' ಎಂದು ಹೇಳಿದರು.

ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕೃತಿಗಳ ಬಗ್ಗೆ ಕುಮಾರ್ ಇಂದ್ರಬೆಟ್ಟ, ಶಿವಣ್ಣ ಕೆಂಪಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಲ್. ಹನುಮಂತಯ್ಯ ಮತ್ತು ಅಗ್ರಹಾರ ಕೃಷ್ಣಮೂರ್ತಿ ಸಮಾಲೋಚನೆ ನಡೆಸಿದರು.ಕವಿ ಸುಬ್ಬು ಹೊಲೆಯಾರ್, ಎಚ್. ಲಕ್ಷ್ಮೀನಾರಾಯಣಸ್ವಾಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಣ್ಣಿನ ಗಾಯ: ತಗ್ಗದ ಪ್ರಕರಣ

ಹಸಿರು ಪಟಾಕಿ ಬಳಕೆ ಕಡ್ಡಾಯವಾದರೂ ಗಾಯಾಳುಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪರಿಸರ ಸ್ನೇಹಿ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ನೀಡಿದರೂ, ಪಟಾಕಿ ಗಾಯ ಸಂಬಂಧ ನಗರದ ಕಣ್ಣಿನ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈ ಬಾರಿಯೂ ಹಸಿರು ಪಟಾಕಿಗಳ ಬಳಕೆಗೆ ಮಾತ್ರ ಅವಕಾಶ ನೀಡಿ ಸುತ್ತೋಲೆ ಹೊರಡಿಸಿದೆ. ಕೆಲ ವರ್ಷಗಳಿಂದ ಹಸಿರು ಪಟಾಕಿಗಳ ಮಾರಾಟಕ್ಕೆ ಮಾತ್ರ ಅವಕಾಶ ನೀಡಲಾಗುತ್ತಿದೆ. ಕಳೆದ ವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಗರದ ಪ್ರಮುಖ ಕಣ್ಣಿನ ಆಸ್ಪತ್ರೆಗಳಲ್ಲಿ 180ಕ್ಕೂ ಅಧಿಕ ಪಟಾಕಿ ಗಾಯ ಪ್ರಕರಣಗಳು ವರದಿಯಾಗಿದ್ದವು. ಈ ವರ್ಷವೂ ಮುನ್ನೆಚ್ಚರಿಕೆ ಕ್ರಮವಾಗಿ ಈ ಆಸ್ಪತ್ರೆಗಳು ಪ್ರತ್ಯೇಕ ಹಾಸಿಗೆ ಸೇರಿ ವಿವಿಧ ಸಿದ್ಧತೆ ಮಾಡಿಕೊಳ್ಳುತ್ತಿವೆ.

ಪಟಾಕಿ ಗಾಯಗಳಿಗೆ ಸಂಬಂಧಿಸಿದಂತೆ ಹಬ್ಬದ ಅವಧಿಯಲ್ಲಿ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 2020ರಲ್ಲಿ 23, 2021ರಲ್ಲಿ 33, 2022 ಹಾಗೂ 2023ರಲ್ಲಿ ತಲಾ 40 ಪ್ರಕರಣಗಳು ವರದಿಯಾಗಿದ್ದವು. ನಾರಾಯಣ ನೇತ್ರಾಲಯದಲ್ಲಿ ಕ್ರಮವಾಗಿ 24 ಮಂದಿ, 17 ಮಂದಿ, 45 ಮಂದಿ ಹಾಗೂ 58 ಮಂದಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದಿದ್ದರು. ಕಳೆದ ವರ್ಷ ಹಬ್ಬದ ನಾಲ್ಕು ದಿನಗಳ ಅವಧಿಯಲ್ಲಿ ನಾರಾಯಣ ನೇತ್ರಾಲಯದಲ್ಲಿ 73 ಕಣ್ಣಿನ ಗಾಯ ಪ್ರಕರಣಗಳು ವರದಿಯಾಗಿದ್ದವು. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಈ ಸಂಖ್ಯೆ 50ರ ಗಡಿ ದಾಟಿತ್ತು. ಉಳಿದಂತೆ ಶಂಕರ ಕಣ್ಣಿನ ಆಸ್ಪತ್ರೆ, ನೇತ್ರಧಾಮ, ಡಾ. ಅಗರ್‌ವಾಲ್ಸ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳಲ್ಲಿಯೂ ಕಣ್ಣಿನ ಗಾಯ ಪ್ರಕರಣಗಳು ವರದಿಯಾಗಿದ್ದವು.

ಮಕ್ಕಳೇ ಅಧಿಕ: ಪಟಾಕಿ ಸಿಡಿತದಿಂದ ಮಕ್ಕಳೇ ಹೆಚ್ಚಾಗಿ ಗಾಯಗೊಳ್ಳುತ್ತಿದ್ದಾರೆ. ಲಕ್ಷ್ಮಿ ಬಾಂಬ್, ಬಿಜಲಿ ಪಟಾಕಿ ಹಾಗೂ ಹೂ ಕುಂಡ ಸಿಡಿತ ಕಣ್ಣಿಗೆ ಅಪಾಯ ತಂದೊಡ್ಡುತ್ತಿವೆ. ಕಳೆದ ವರ್ಷ ಮಿಂಟೊ ಹಾಗೂ ನಾರಾಯಣ ನೇತ್ರಾಲಯದಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡವರಲ್ಲಿ ಪಟಾಕಿ ಸಿಡಿಸುವವರ ಜತೆಗೆ, ವೀಕ್ಷಿಸುವವರು ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡು ದಾಖಲಾಗಿದ್ದರು. ಮಿಂಟೊದಲ್ಲಿ ಕಳೆದ ವರ್ಷ ಚಿಕಿತ್ಸೆ ಪಡೆದವರಲ್ಲಿ ಅರ್ಧದಷ್ಟು ಮಂದಿ ಪಟಾಕಿ ಸಿಡಿತ ವೀಕ್ಷಿಸುತ್ತಿರುವವರು, ಪಾದಚಾರಿಗಳು ಹಾಗೂ ವಾಹನ ಸವಾರರಾಗಿದ್ದಾರೆ.

‘ಪಟಾಕಿ ಹಚ್ಚುವರಷ್ಟೇ ಅದನ್ನು ವೀಕ್ಷಿಸುವವರೂ ಎಚ್ಚರವಾಗಿರಬೇಕು. ಹಸಿರು ಪಟಾಕಿಗಳಾದರೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ, ಪಟಾಕಿ ಸಿಡಿಸಬೇಕು’ ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ (ಉಸ್ತುವಾರಿ) ಡಾ. ಶಶಿಧರ್ ತಿಳಿಸಿದರು.

> **ಹಸಿರು ಪಟಾಕಿಗಳಲ್ಲಿಯೂ ನಿಗದಿತ ಪ್ರಮಾಣದಲ್ಲಿ ರಾಸಾಯನಿಕಗಳು ಇರುತ್ತವೆ. ಕಣ್ಣು ಸೂಕ್ಷ್ಮ ಅಂಗವಾಗಿರುವುದರಿಂದ ಸಣ್ಣ ಕಿಡಿಯೂ ದೊಡ್ಡ ಹಾನಿ ಮಾಡುತ್ತದೆ. ಸುರಕ್ಷತೆಗೆ ಆದ್ಯತೆ ನೀಡಬೇಕು**
> **ಡಾ. ಶಶಿಧರ್,** ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ (ಉಸ್ತುವಾರಿ)

‘ಕಣ್ಣುಗಳಿಗೆ ಸುರಕ್ಷಿತವಲ್ಲ’

‘ಹಸಿರು ಪಟಾಕಿಗಳು ಪರಿಸರಕ್ಕೆ ಪೂರಕವಾದರೂ, ಕಣ್ಣುಗಳಿಗೆ ಸುರಕ್ಷಿತವಲ್ಲ. ಹಸಿರು ಪಟಾಕಿಗಳಿಂದ ಅಪಾಯವಿಲ್ಲವೆಂಬ ಭಾವನೆಯಿಂದ ಕೆಲವರು ಮುನ್ನೆಚ್ಚರಿಕೆ ವಹಿಸದೆ ಅಪಾಯ ತಂದುಕೊಳ್ಳುತ್ತಿದ್ದಾರೆ. ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ’ ಎಂದು ಡಾ. ಅಗರ್ವಾಲ್ಸ್ ಆಸ್ಪತ್ರೆಯ ನೇತ್ರತಜ್ಞೆ ಡಾ. ನೇಹಾ ವಸ್ತಾ ತಿಳಿಸಿದರು.

‘ಪಟಾಕಿಗಳು ಸ್ಫೋಟಗೊಳ್ಳಲು ಬಳಸುವ ರಾಸಾಯನಿಕಗಳು ಅಪಾಯಕಾರಿಯಾಗಿದ್ದು, ಅನಿರೀಕ್ಷಿತ ಸಿಡಿತಗಳು ಹಾಗೂ ಬೆಂಕಿಯ ಕಿಡಿಗಳು ಕಣ್ಣಿಗೆ ಹಾನಿ ಮಾಡಲಿವೆ. ಆದ್ದರಿಂದ ಪಟಾಕಿ ಸಿಡಿಸಲೇ ಬೇಕು ಎಂದಾದಲ್ಲಿ ಕನ್ನಡಕ ಧರಿಸುವಿಕೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕು’ ಎಂದು ಹೇಳಿದರು.

ಮಕ್ಕಳು ಪ್ರಮಾಣ ಪತ್ರ ಪ್ರದರ್ಶಿಸಿದರು

ಪಟಾಕಿ ಬಗ್ಗೆ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ನೇತ್ರಾಲಯದ ಇಂದಿರಾನಗರದ ಶಾಖೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದೀಪಾವಳಿ ಕಲಾ ಸ್ಪರ್ಧೆಯು ಮಕ್ಕಳಲ್ಲಿ ಪಟಾಕಿ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಿತು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಸ್ಪರ್ಧೆಯ ತೀರ್ಪುಗಾರರೂ ಆಗಿದ್ದ ನಾರಾಯಣ ನೇತ್ರಾಲಯದ ನಿರ್ದೇಶಕಿ ನೈನಾ ಶೆಟ್ಟಿ ಮಕ್ಕಳ ಜತೆಗೆ ಸಂವಾದ ನಡೆಸಿದರು. ಮಕ್ಕಳಿಗೆ ಸುರಕ್ಷತಾ ಕನ್ನಡಕಗಳನ್ನು ವಿತರಿಸಲಾಯಿತು. ನಾರಾಯಣ ನೇತ್ರಾಲಯದ ವೈದ್ಯರಾದ ಡಾ.ಸಂಕೇತ್ ಭಟ್ನಾಗರ್ ಮತ್ತು ಡಾ.ಬಿಂದು ರುದ್ರಮೂರ್ತಿ ಉಪಸ್ಥಿತರಿದ್ದರು.

ಪಟಾಕಿ ಅವಘಡ: ಮಕ್ಕಳು ಸೇರಿ 9 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಳಕಿನ ಹಬ್ಬ’ ದೀಪಾವಳಿ ವೇಳೆ ರಾಜಧಾನಿಯಲ್ಲಿ ಪಟಾಕಿ ಸಿಡಿತದಿಂದ ಅವಘಡಗಳು ಸಂಭವಿಸಿವೆ.

ಪಟಾಕಿ ಸಿಡಿಸುವಾಗ ಗಾಯಗೊಂಡ 5 ಮಂದಿಗೆ ರಾಜಾಜಿನಗರದ ನಾರಾಯಣ ನೇತ್ರಾಲಯದಲ್ಲಿ ಹಾಗೂ ನಾಲ್ವರಿಗೆ ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಮೂರು ವರ್ಷದ ಬಾಲಕನ ಕಣ್ಣಿಗೆ ಗಾಯಗಳಾಗಿದ್ದು, ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ಉಳಿದ ನಾಲ್ವರಿಗೆ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

12 ವರ್ಷ ಹಾಗೂ 14 ವರ್ಷದ ಬಾಲಕರಿಗೆ ಪಟಾಕಿ ಸಿಡಿತದಿಂದ ಕಣ್ಣಿಗೆ ಗಾಯಗಳಾಗಿದ್ದು, ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ. ಆಟಂ ಬಾಂಬ್ ಸಿಡಿತದಿಂದ 48 ವರ್ಷದ ವ್ಯಕ್ತಿಯ ಕಣ್ಣಿಗೆ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗಿದೆ. ಬಿಜಲಿ ಪಟಾಕಿ ಸಿಡಿದು 11 ವರ್ಷದ ಬಾಲಕನ ಕಣ್ಣಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದವು. ಇಬ್ಬರಿಗೂ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

‘ಹೆಚ್ಚಿನ ಮಕ್ಕಳು ಪಟಾಕಿ ಸಿಡಿತದಿಂದ ಕಣ್ಣುಗಳಿಗೆ ಗಾಯ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಪಾಲಕರು ಎಚ್ಚರಿಕೆ ವಹಿಸಬೇಕು. ಪಟಾಕಿ ಸಿಡಿಸುವಾಗ ಸರಳ ರಕ್ಷಣಾತ್ಮಕ ಕನ್ನಡಕಗಳನ್ನು ಧರಿಸಬೇಕು. ಕಣ್ಣುಗಳಿಗೆ ಯಾವುದೇ ರೀತಿಯ ಗಾಯಗಳಾದರೆ ತಡ ಮಾಡದೇ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಳ್ಳಬೇಕು’ ಎಂದು ನಾರಾಯಣ ನೇತ್ರಾಲಯದ ನಿರ್ದೇಶಕ ಡಾ. ನರೇನ್ ಶೆಟ್ಟಿ ಸಲಹೆ ನೀಡಿದ್ದಾರೆ.

ಅಕ್ರಮ ದಾಸ್ತಾನು: ಪಟಾಕಿ ಮಳಿಗೆಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪಟಾಕಿಗಳನ್ನು ದಾಸ್ತಾನು ಮಾಡಿದ್ದ ಮಳಿಗೆಗಳ ಮೇಲೆ ಪೊಲೀಸರು ದಾಳಿ ನಡೆಸಿ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.

ಕಾಟನ್‌ಪೇಟೆ, ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆ ಹಾಗೂ ಹೊಸೂರು ಭಾಗದಲ್ಲಿ ಪೊಲೀಸರು ಸೋಮವಾರ ಮಧ್ಯಾಹ್ನ ಕಾರ್ಯಾಚರಣೆ ನಡೆಸಿದರು. ಈ ವೇಳೆ ಪರವಾನಗಿ ಪಡೆದ ಪ್ರಮಾಣಕ್ಕಿಂತಲೂ ಹೆಚ್ಚಿನ ದಾಸ್ತಾನು ಮಾಡಿಕೊಂಡಿರುವುದು ಕಂಡುಬಂತು. ಹೆಚ್ಚುವರಿ ಪಟಾಕಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು ಎಂದು ಗೊತ್ತಾಗಿದೆ.

ಹಸಿರು ಪಟಾಕಿ ಹೆಸರಿನಲ್ಲಿ ಸಾಂಪ್ರದಾಯಿಕ ಪಟಾಕಿಗಳ ಮಾರಾಟ ಮಾಡುತ್ತಿರುವುದು, ಪರವಾನಗಿ ಪಡೆಯದವರೂ ಪಟಾಕಿ ಮಾರಾಟ ಮಾಡುತ್ತಿರುವುದು ಕಂಡುಬಂತು. ಅಂತಹವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೇಡಿಕೆ ಹೆಚ್ಚಿದೆ ಎನ್ನುವ ಕಾರಣಕ್ಕೆ ಪಟಾಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಂಡಿದ್ದರೆ, ಅಂತಹ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ದೀಪಾವಳಿ ಹಬ್ಬಕ್ಕೂ ಮುನ್ನ ನಡೆದ ಸಭೆಯಲ್ಲಿ ಮಾರಾಟಗಾರರಿಗೆ ಎಚ್ಚರಿಕೆ ನೀಡಿದ್ದರು. ಮಂಗಳವಾರ ಹಾಗೂ ಬುಧವಾರ ಸಹ ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಯೋಗ್ಯಾಸ್ ಘಟಕಕ್ಕೆ ಡಿಸಿಎಂ ಡಿಕೆಶಿ ಭೇಟಿ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ. ಸುಧೀಂದ್ರ ಅವರು ಕೋರಮಂಗಲದ ಮುನಿಸಿಪಲ್ ಸಾಲಿಡ್ ವೇಸ್ಟ್, ಹಸಿರು, ಆಹಾರ ಪದಾರ್ಥಗಳ ಸಂಸ್ಕರಣೆಯಿಂದ ಕಂಪ್ರೆಸ್ಡ್ ಬಯೋಗ್ಯಾಸ್ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿದರು.

‘ಘಟಕದಲ್ಲಿ ತ್ಯಾಜ್ಯವನ್ನು ಸಂಗ್ರಹಿಸಿ, ವಿಂಗಡಿಸಿ, ಶೇಖರಣೆ ಮಾಡಿ ಸಂಸ್ಕರಿಸಲಾಗುತ್ತದೆ. ಘನ, ದ್ರವ, ಆಹಾರ, ಹಸಿರು ತ್ಯಾಜ್ಯಗಳನ್ನು ವಿಂಗಡಿಸಿ, ನಿಗದಿತ ಸ್ಥಳಗಳಲ್ಲಿ ಶೇಖರಣೆ ಮಾಡಲಾಗುತ್ತದೆ. ಘಟಕವನ್ನು ಜಿಬಿಎ ಹಾಗೂ ಕಾರ್ಬನ್ ಮಾಸ್ಟರ್ ಸಹಯೋಗದಲ್ಲಿ ನಿರ್ವಹಣೆ ಮಾಡಲಾಗುತ್ತದೆ’ ಎಂದು ಸುಧೀಂದ್ರ ಅವರು ಉಪ ಮುಖ್ಯಮಂತ್ರಿಗೆ ತಿಳಿಸಿದರು.

‘ಚೀನಾ–ಭಾರತ ಸಹಯೋಗ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚೀನಾ ಹಾಗೂ ಭಾರತ ವ್ಯಾಪಾರ ಇನ್ನಿತರ ಕ್ಷೇತ್ರಗಳಲ್ಲಿ ಸಹಯೋಗವನ್ನು ಹೆಚ್ಚಿಸಿಕೊಳ್ಳಬೇಕು’ ಎಂದು ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ ಸಲಹೆ ನೀಡಿದರು.

ಭಾರತ–ಚೀನಾ ಸ್ನೇಹ ಸಂಘದ (ಐಸಿಎಫ್‌ಎ) ಕರ್ನಾಟಕ ಘಟಕವು ನಗರದ ಚಿತ್ರಕಲಾ ಪರಿಷತ್‌ನಲ್ಲಿ ಭಾನುವಾರ ಆಯೋಜಿಸಿದ್ದ ಚೀನಾದ ಛಾಯಾಚಿತ್ರಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಮುಂಬೈನಲ್ಲಿರುವ ಚೀನಾದ ಕಾನ್ಸುಲ್ ಜನರಲ್ ಕಿನ್ ಜೀ ಮಾತನಾಡಿ, ‘ಭಾರತ ಹಾಗೂ ಚೀನಾ ಕಾಲಕಾಲಕ್ಕೆ ಅಗತ್ಯ ಬದಲಾವಣೆಗಳೊಂದಿಗೆ ಬೆಳವಣಿಗೆ ಕಂಡ ದೇಶಗಳು. ನೆಹರೂ ಕಾಲದಿಂದಲೂ ರಾಜತಾಂತ್ರಿಕ ಸಂಬಂಧಗಳು ಗಟ್ಟಿಯಾಗಿದ್ದು ನಿರಂತರವಾಗಿ ಕಾಪಾಡಿಕೊಳ್ಳುವ ವಿಶ್ವಾಸವಿದೆ’ ಎಂದರು.

ಸಂಘದ ಅಧ್ಯಕ್ಷ ಕೆ. ಶ್ರೀನಿವಾಸಗೌಡ, ಕಾರ್ಯದರ್ಶಿ ಬಿ. ಭಾಸ್ಕರನ್, ವಿಧಾನ ಪರಿಷತ್‌ನ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಮತ್ತಿತರರು ಇದ್ದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಚೀನಾದ ಛಾಯಾಚಿತ್ರಗಳ ಪ್ರದರ್ಶನವನ್ನು ವೀಕ್ಷಿಸಿದ ಕಿನ್ ಜೆಯಿ, ಪಿ.ಜಿ.ಆರ್.ಸಿಂಧ್ಯ ಪ್ರಜಾವಾಣಿ ಚಿತ್ರ

> **ಕರ್ನಾಟಕದಿಂದಲೂ ಉನ್ನತ ಶಿಕ್ಷಣಕ್ಕೆಂದು ಸಹಸ್ರಾರು ವಿದ್ಯಾರ್ಥಿಗಳು ಚೀನಾಕ್ಕೆ ತೆರಳುತ್ತಿದ್ದಾರೆ. ಅಲ್ಲಿಂದಲೂ ಭಾರತಕ್ಕೂ ಬರುತ್ತಾರೆ. ಜ್ಞಾನವೂ ಎರಡೂ ದೇಶಗಳ ಸಂಬಂಧವನ್ನು ಬೆಸೆದಿದೆ.**
> **ಪಿಜಿಆರ್ ಸಿಂಧ್ಯ** ಮಾಜಿ ಸಚಿವ

ಚಿತ್ರಾವಳಿ

ದೀಪಾವಳಿ ಹಬ್ಬದ ಅಂಗವಾಗಿ ಚಿಕ್ಕಪೇಟೆಯ ಮಳಿಗೆಯೊಂದರಲ್ಲಿ ವ್ಯಾಪಾರಿಯೊಬ್ಬರು ತಮ್ಮ ಕುಟುಂಬದ ಸಮೇತ ಸೋಮವಾರ ವಿಶೇಷ ಪೂಜೆ ಸಲ್ಲಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ.

ಸಂಜಯನಗರದಲ್ಲಿ ಕುಟುಂಬವೊಂದರ ಸದಸ್ಯರು ಸೋಮವಾರ ಪಟಾಕಿಯೊಂದಿಗೆ ದೀಪಾವಳಿ ಸಂಭ್ರಮದಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ: ಜನಾರ್ದನ ಬಿ.ಕೆ.

ವಿವಿಧೆಡೆ ಮಳೆ: ಕೆರೆ ಕೋಡಿ, ಬೆಳೆ ಹಾನಿ

ತುಮಕೂರು, ಚಿತ್ರದುರ್ಗ, ಕಲಬುರಗಿ ಜಿಲ್ಲೆಯಲ್ಲಿ ವರ್ಷಧಾರೆ
• ಹಾಸನ ಜಿಲ್ಲೆಯಲ್ಲಿ 30 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ ಹಾಸನ, ತುಮಕೂರು, ಚಿತ್ರದುರ್ಗ, ಕಲ್ಯಾಣ ಕರ್ನಾಟಕದ ಕಲಬುರಗಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ತುಮಕೂರು, ಹಾಸನದಲ್ಲಿ ಕೆರೆಗಳು ಕೋಡಿಬಿದ್ದಿವೆ.

ಹಾಸನ ವರದಿ: ಜಿಲ್ಲೆಯ ವಿವಿಧೆಡೆ ಭಾನುವಾರ ರಾತ್ರಿ ಸುರಿದ ಮಳೆಗೆ ಅಲ್ಲಲ್ಲಿ ಹಾನಿ ಸಂಭವಿಸಿದೆ. ಅರಕಲಗೂಡು ಪಟ್ಟಣದ ಪೇಟೆ ಮಾಚಗೌಡನಹಳ್ಳಿ ಕೆರೆ ಏರಿಯಲ್ಲಿ ಕೊರಕಲು ಉಂಟಾಗಿ ನೀರು ಜಮೀನುಗಳಿಗೆ ನುಗ್ಗಿ ಬೆಳೆ ಹಾನಿಯಾಗಿದೆ. ತಾಲ್ಲೂಕಿನಲ್ಲಿ 30 ಮನೆಗಳಿಗೆ ಹಾನಿಯಾಗಿದೆ.

ನುಗ್ಗೇಹಳ್ಳಿ ಹೋಬಳಿಯಲ್ಲಿ ಜಂಬೂರುಕೆರೆ ಕೋಡಿ ಬಿದ್ದಿದೆ. ಹೋಬಳಿಯ ಅನೇಕ ಕೆರೆಗಳಿಗೆ ಹೆಚ್ಚಿನ ಪ್ರಮಾಣದ ನೀರು ಹರಿದುಬಂದಿದೆ. ಚನ್ನರಾಯಪಟ್ಟಣದಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ.

ಹಿರೀಸಾವೆ ಹೋಬಳಿಯಲ್ಲಿ ಭಾನುವಾರ ರಾತ್ರಿಯಿಡೀ ಜೋರು ಮಳೆಯಾಗಿದೆ. ಬ್ಯಾಡರಹಳ್ಳಿಯಿಂದ ಬಾಳಗಂಚಿ, ಹೊನ್ನಮಾರನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ, ಆಸುಪಾಸಿನ ಜಮೀನು ಜಲಾವೃತವಾಗಿವೆ. ಯಾಳ-ನಹಳ್ಳಿಯಲ್ಲಿ ಮರ ಉರುಳಿ ಮನೆ ಜಖಂಗೊಂಡಿದೆ. ಅರಸೀಕೆರೆ ತಾಲ್ಲೂಕಿನ ಹಲವು ಕೆರೆಗಳು ಕೋಡಿ ಬಿದ್ದಿವೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ, ತಾಲ್ಲೂಕಿನ ಬಾಳೆಲೆ, ನಾಪೋಕ್ಲು, ಹುದಿಕೇರಿಯಲ್ಲಿ ಮಳೆಯಾಗಿದೆ. ಮೈಸೂರು ನಗರವೂ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಸೋಮವಾರ ನಸುಕಿನಿಂದ ಬೆಳಿಗ್ಗೆವರೆಗೆ ಜೋರು ಮಳೆಯಾಯಿತು.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಸಂಕೇನಪುರ ಕೆರೆ ಕೋಡಿ ಹರಿಯಿತು

ಕಲಬುರಗಿಯಲ್ಲಿ ಮತ್ತೆ ಮಳೆ

ಕಲಬುರಗಿ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಒಂದು ವಾರದ ಬಿಡುವಿನ ಬಳಿಕ ಸೋಮವಾರ ಬಿರುಸಿನಿಂದ ಮಳೆಯಾಗಿದೆ. ದಿನವಿಡೀ ಮೋಡ ಕವಿದ ವಾತಾವರಣವಿದ್ದು, ಮಧ್ಯಾಹ್ನ ಅರ್ಧ ಗಂಟೆ ಧಾರಾಕಾರ ಮಳೆ ಸುರಿಯಿತು. ಜಿಲ್ಲೆಯ ಚಿಂಚೋಳಿ, ಕಾಳಗಿ, ಶಹಾಬಾದ್, ಕಮಲಾಪುರ ಸೇರಿದಂತೆ ಹಲವೆಡೆ ಸೋಮವಾರ ಕೆಲಕಾಲ ಉತ್ತಮ ಮಳೆಯಾಗಿದೆ.

ತುಮಕೂರು ಮಾರುಕಟ್ಟೆ ಜಲಾವೃತ

ತುಮಕೂರು: ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಗೆ ಮಾರುಕಟ್ಟೆ ಜಲಾವೃತವಾಗಿದೆ. ದೀಪಾವಳಿ ಹಬ್ಬಕ್ಕೆ ವ್ಯಾಪಾರದ ಭರಾಟೆ ನಿರೀಕ್ಷೆಯಲ್ಲಿದ್ದ ವರ್ತಕರು ಪರದಾಡಿದರು.

ಪಾವಗಡ ತಾಲ್ಲೂಕಿನ ಕೆಲವೆಡೆ ಮನೆಗಳಿಗೆ ನೀರು ನುಗ್ಗಿದೆ. ಹುಳಿಯಾರು ಹೋಬಳಿ ವ್ಯಾಪ್ತಿಯ ತೋಟಗಳಿಗೆ ಮಳೆ ನೀರು ಹರಿದಿದೆ. ಕುಣಿಗಲ್ ಭಾಗದಲ್ಲೂ ಉತ್ತಮ ಮಳೆ ಆಗಿದೆ.

ಹಾಸನ ಜಿಲ್ಲೆ ಹೊನ್ನಗೋಡನಹಳ್ಳಿಯಲ್ಲಿ ಅಡಿಕೆ ತೋಟ ಜಲಾವೃತಗೊಂಡಿತ್ತು

ಶೇಂಗಾ, ಈರುಳ್ಳಿಗೆ ಹಾನಿ

ಚಿತ್ರದುರ್ಗ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಧಾರಾಕಾರ ಮಳೆಯಾಗಿದ್ದು, ಸುರಿದಿದ್ದು ಹಳ್ಳ, ಕೊಳ್ಳ ಕೋಡಿಬಿದ್ದಿವೆ. ಈರುಳ್ಳಿ, ಶೇಂಗಾ, ಟೊಮೆಟೊ ಬೆಳೆಗೆ ಹಾನಿ ಆಗಿದೆ.

ಹಿರಿಯೂರು ತಾಲ್ಲೂಕು ವ್ಯಾಪ್ತಿಯ ಅರಳೀಕೆರೆ, ಶ್ರವಣಗೆರೆ, ಹಲಗಲದ್ದಿ, ಹೊಸಕೆರೆ ವೇಣುಕಲ್ಲು-ಗುಡ್ಡ ಭಾಗದಲ್ಲಿ ಚೆಕ್ ಡ್ಯಾಂ, ಗೋಕಟ್ಟೆಗಳು ತುಂಬಿ ಹರಿಯುತ್ತಿವೆ.

ಚಿಕ್ಕಜಾಜೂರು ಸಮೀಪದ ಚಿಕ್ಕಂದವಾಡಿ, ಅರಸನಘಟ್ಟ, ಹನುಮನಕಟ್ಟೆ ಭಾಗದಲ್ಲಿ ಉತ್ತಮ ಮಳೆಯಾಗಿದ್ದು ಕೆರೆ, ಕಟ್ಟೆಗಳಲ್ಲಿ ನೀರು ಹರಿಯುತ್ತಿದೆ.

ಹಿರಿಯೂರು ತಾಲ್ಲೂಕಿನಲ್ಲಿ ಟೊಮೆಟೊ ಬೆಳೆ ಜಲಾವೃತವಾಗಿತ್ತು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.78	9,857	9,60
ಹಾರಂಗಿ	2,859	2,857.35	1,224	1,000
ಕಬಿನಿ	2,284.00	2,283.46	4,307	1,650
ಹೇಮಾವತಿ	2,922	2,918.95	15,238	3,358
ಲಿಂಗನಮಕ್ಕಿ	1,819	1,815.35	7,389	7,201
ಸೂಪಾ (ಮೀ)	564	558.65	1,535.39	4,730
ಮಾಣಿ	595	593.67	977	534
ತುಂಗಭದ್ರಾ	1,633	1,625.46	5,591	10,613
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2,175	2,174.83	349	185
ಭದ್ರಾ *	186	184.2	3,685	3,384
ಆಲಮಟ್ಟಿ (ಮೀ)	519.6	519.60	7,879	5,020
ನಾರಾಯಣಪುರ (ಮೀ)	492.25	492.14	6,000	9,746

* ನೆಲಮಟ್ಟದಿಂದ

‘ರಸ್ತೆಯಲ್ಲಿ ನಮಾಜ್: ತೊಂದರೆ ಆಗದೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಶುಕ್ರವಾರ ಚಾಮರಾಜಪೇಟೆ ರಸ್ತೆಯಲ್ಲಿ ನಮಾಜ್ ಮಾಡುತ್ತಾರೆ. ಇದರಿಂದ ಟ್ರಾಫಿಕ್ ಸಮಸ್ಯೆ ಆಗುವುದಿಲ್ಲವೇ? ರಂಜಾನ್, ಈದ್ ಮಿಲಾದ್ ವೇಳೆ ರಸ್ತೆ ಬಂದ್ ಮಾಡುತ್ತಾರೆ. ಆಗ ಸರ್ಕಾರದಿಂದ ಅನುಮತಿ ಪಡೆದಿರುತ್ತಾರೆಯೇ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕೆಲವು ಕಡೆ ಮೆರವಣಿಗೆಯಲ್ಲಿ ಕತ್ತಿ ಹಿಡಿದು ಆಚರಣೆ ಮಾಡುತ್ತಾರೆ. ಅದನ್ನು ಶಸ್ತ್ರಾಸ್ತ್ರಗಳು ಎಂದು ಪರಿಗಣಿಸುವುದಿಲ್ಲ. ಆರ್‌ಎಸ್‌ಎಸ್ ಪಥ ಸಂಚಲನದಿಂದ ಎಂದೂ ಯಾರಿಗೂ ಹಾನಿಯಾಗಿಲ್ಲ. ಸರ್ಕಾರಕ್ಕೆ ಆಗಿರುವ ಸಮಸ್ಯೆ ಏನು’ ಎಂದು ಪ್ರಶ್ನಿಸಿದರು.

‘ಆರ್‌ಎಸ್‌ಎಸ್ ಆರಂಭವಾಗಿ 100 ವರ್ಷಗಳ ಬಳಿಕ ಪಥಸಂಚಲನದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿದೆ. ಇಷ್ಟು ವರ್ಷ ಇಲ್ಲದ ಸಮಸ್ಯೆ ಈಗ ಏಕೆ ಉದ್ಭವಿಸಿದೆ’ ಎಂದು ಪ್ರಶ್ನಿಸಿದರು.

‘ಶಾಲಾ ಆವರಣದಲ್ಲಿ ಹೊರಗಿನ ಸಂಘಟನೆಗಳಿಂದ ಕಾರ್ಯಕ್ರಮ ಮಾಡುವುದನ್ನು ನಿಷೇಧಿಸುವ ಬಗ್ಗೆ ಆಗಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಆದೇಶ ಮಾಡಿರುವುದಕ್ಕೆ ಸಾಕ್ಷಿ ಇಲ್ಲ. ಈ ವಿಚಾರ ಅಂದಿನ ಬಿಜೆಪಿ ಸರ್ಕಾರದ ಸಚಿವ ಸಂಪುಟ ಸಭೆಯಲ್ಲೂ ಚರ್ಚೆ ಆಗಿರಲಿಲ್ಲ’ ಎಂದರು.

ಚಿಟಿಕೆ ಸುದ್ದಿ

‘ಬಂಗಾರ ಪ್ರಶಸ್ತಿ’ ಪ್ರಕಟ

ಬೆಂಗಳೂರು: ಎಸ್.ಬಂಗಾರಪ್ಪ ವಿಚಾರ ವೇದಿಕೆ ನೀಡುವ 2025ನೇ ಸಾಲಿನ ‘ಸಾಹಿತ್ಯ ಬಂಗಾರ’ ಪ್ರಶಸ್ತಿಗೆ ಮೈಸೂರಿನ ಕಾಳೇಗೌಡ ನಾಗವಾರ, ‘ಜಾನಪದ ಬಂಗಾರ’ ಪ್ರಶಸ್ತಿಗೆ ಬೆಳಗಾವಿಯ ರಾಧಾ ಬಾಯಿ ಮಾದರ, ‘ರಂಗ ಬಂಗಾರ’ ಪ್ರಶಸ್ತಿಗೆ ಕಲಬುರಗಿಯ ಜೇವರ್ಗಿ ರಾಜಣ್ಣ ಹಾಗೂ ‘ಸೇವಾ ಬಂಗಾರ’ ಪ್ರಶಸ್ತಿಗೆ ಬೆಂಗಳೂರಿನ ಶ್ರೀ ತೋಟದಪ್ಪ ಧರ್ಮಸಂಸ್ಥೆ ಆಯ್ಕೆಯಾಗಿದೆ. ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಎಸ್.ಬಂಗಾರಪ್ಪ ವಿಚಾರ ವೇದಿಕೆ ಹಾಗೂ ಬಂಗಾರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಅಕ್ಟೋಬರ್ 26ರಂದು ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ನಡೆಯುವ ‘ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಜನ್ಮ ದಿನಾಚರಣೆ ಕಾರ್ಯಕ್ರಮ’ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವೇದಿಕೆಯ ಪ್ರಧಾನ ಸಂಚಾಲಕ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

ಕಾಳೇಗೌಡ ನಾಗವಾರ

ರಾಧಾಬಾಯಿ ಮಾದರ

ಜೇವರ್ಗಿ ರಾಜಣ್ಣ

‘ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ’

ಬೆಂಗಳೂರು: ‘ಬಿಹಾರ ಚುನಾವಣೆಗೆ ಕರ್ನಾಟಕದಿಂದ ಹಣ ಹೋಗುತ್ತಿದೆ. ಇದಕ್ಕಾಗಿ ಅಧಿಕಾರಿಗಳಿಗೆ ಕಿರುಕುಳ ಹೆಚ್ಚಾಗಿದೆ ಎನ್ನುವ ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರ ಬಳಿ ದಾಖಲೆಗಳಿದ್ದರೆ ಅದನ್ನು ಬಿಡುಗಡೆ ಮಾಡಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ರಾಘವೇಂದ್ರ ಮಾಡಿರುವ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, ದಾಖಲೆಗಳನ್ನು ಬಿಡುಗಡೆ ಮಾಡಿ ಆರೋಪ ಮಾಡಲಿ. ಹಿಟ್ ಆ್ಯಂಡ್ ರನ್ ಮಾಡುವ ಒಂದಷ್ಟು ನಾಯಕರಿದ್ದಾರೆ. ಅವರಂತೆ ರಾಘವೇಂದ್ರ ಆಗುವುದು ಬೇಡ. ರಾಘವೇಂದ್ರ ಅವರ ಹೆಸರು ಸುಳ್ಳಿಗೆ ಮತ್ತೊಂದು ಉದಾಹರಣೆ ಆಗುವುದು ಬೇಡ’ ಎಂದರು.

ಡಿ.ಕೆ. ಶಿವಕುಮಾರ್

ವಿದ್ಯುತ್ ಸ್ಪರ್ಶ ದಂಪತಿ ಸಾವು

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಕಾಸರಕೋಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಟ್ಟೆ ವಿನಾಯಕ ಕೇರಿಯಲ್ಲಿ ಭಾನುವಾರ ರಾತ್ರಿ ವಿದ್ಯುತ್ ತಂತಿ ಸ್ಪರ್ಶಿಸಿ, ದಂಪತಿ ಮೃತಪಟ್ಟಿದ್ದಾರೆ. ಸಂತೋಷ ಗೌಡ (55), ಸೀತಾ ಗೌಡ (43) ಮೃತರು. ಅವರ ಮಗನಿಗೆ ಪೆಟ್ಟಾಗಿದೆ. ಮನೆ ಬಳಿ ಬಿದ್ದಿದ್ದ ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಳಿದು ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಪಾಯಕಾರಿ ರೀತಿ ವಿದ್ಯುತ್ ತಂತಿ ಬಿದ್ದಿರುವುದನ್ನು ಹೆಸ್ಕಾಂ ಗಮನಕ್ಕೆ ತರಲಾಗಿತ್ತು. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ದಂಪತಿ ಬಲಿಯಾದರು’ ಎಂದು ಮೃತರ ಸಂಬಂಧಿಕರು ಆರೋಪಿಸಿ, ಪ್ರತಿಭಟಿಸಿದರು.

ಮೂಲ ದಾಖಲೆ ನೀಡಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪಡೆದು, ಅನಿವಾರ್ಯ ಕಾರಣಗಳಿಂದ ಮಧ್ಯಂತರದಲ್ಲೇ ಕಾಲೇಜು ತೊರೆಯುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಸೇರಿದಂತೆ ಮೂಲ ದಾಖಲೆಗಳನ್ನು ನೀಡುವಂತೆ ಶುಲ್ಕ ನಿಯಂತ್ರಣ ಸಮಿತಿ ಆದೇಶಿಸಿದೆ.

ದೂರುಗಳ ವಿಚಾರಣೆ ನಡೆಸಿದ ಶುಲ್ಕ ನಿಯಂತ್ರಣ ಸಮಿತಿಯ ಅಧ್ಯಕ್ಷರೂ ಆಗಿರುವ ನ್ಯಾಯಮೂರ್ತಿ ಬಿ. ಶ್ರೀನಿವಾಸ ಗೌಡ ಅವರು, ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ವಾಪಸ್ ನೀಡುವಂತೆ ಸೂಚಿಸಿದ್ದಾರೆ.

ದಾಖಲೆಗಳನ್ನು ಹಿಂದಿರುಗಿಸಲು ಕೆಎಲ್ಇ ಸಂಸ್ಥೆ ₹4 ಲಕ್ಷ ನೀಡುವಂತೆ ಒತ್ತಾಯಿಸುತ್ತಿದೆ ಎಂದು ಸ್ನಾತಕೋತ್ತರ ದಂತ ವೈದ್ಯಕೀಯ (ಎಂಡಿಎಸ್) ವಿದ್ಯಾರ್ಥಿಯೊಬ್ಬರು ದೂರು ನೀಡಿದ್ದರು. ದೂರಿನ ವಿಚಾರಣೆಗೆ ಹಾಜರಾದ ಸಂಸ್ಥೆಯ ಪ್ರತಿನಿಧಿ, ‘ವಿದ್ಯಾರ್ಥಿಗಳು ಮಧ್ಯದಲ್ಲೇ ಕೋರ್ಸ್ ತೊರೆದರೆ ಸೀಟು ಖಾಲಿ ಉಳಿಯುತ್ತದೆ. ಬೇರೊಬ್ಬರಿಗೆ ಆ ಸೀಟು ನೀಡಲು ಅವಕಾಶ ಇಲ್ಲ. ಸಂಸ್ಥೆಗೂ ನಷ್ಟವಾಗುತ್ತದೆ’ ಎಂದು ಉತ್ತರ ನೀಡಿದ್ದರು. ಪರ–ವಿರೋಧ ವಾದ ಆಲಿಸಿದ ಸಮಿತಿ ‘ಆರ್ಥಿಕ ತೊಂದರೆಯಿಂದ ವಿದ್ಯಾರ್ಥಿ ಕೋರ್ಸ್ ತೊರೆದು, ಉದ್ಯೋಗ ಮಾಡುತ್ತಿದ್ದಾರೆ. ಕಾರಣ ₹50 ಸಾವಿರ ಪಡೆದು ಅವರಿಗೆ ಮೂಲ ದಾಖಲೆ ನೀಡುವಂತೆ’ ಆದೇಶ ನೀಡಿದೆ.

ಮತ್ತೆರಡು ಪ್ರಕರಣದಲ್ಲಿ ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿರುದ್ಧವೂ ವಿದ್ಯಾರ್ಥಿಗಳ ದಾಖಲೆಗಳನ್ನು ತಡೆಹಿಡಿದಿರುವ ಕುರಿತು ದೂರುಗಳು ಬಂದಿದ್ದವು. ಈ ಪ್ರಕರಣಗಳಲ್ಲಿ ಆರೋಗ್ಯ ಸಮಸ್ಯೆ, ಸ್ಪರ್ಧಾ ಪರೀಕ್ಷೆಯ ಸಿದ್ಧತೆಯ ಕಾರಣಗಳನ್ನು ನೀಡಿದ್ದರಿಂದ ದಾಖಲೆ ಹಿಂದಿರುಗಿಸಲು ಸಮಿತಿ ಸೂಚಿಸಿದೆ.

ದೇವೀರಮ್ಮ ದರ್ಶನ

ಚಿಕ್ಕಮಗಳೂರಿನ ಮಲ್ಲೇನಹಳ್ಳಿ ಬಿಂಡಿಗ ದೇವೀರಮ್ಮ ದೇವಿಯ ದರ್ಶನ ಪಡೆಯಲು ಸೋಮವಾರ ಸೇರಿದ್ದ ಭಕ್ತ ಸಾಗರ

ಅಪರೂಪದ ಕಾಯಿಲೆ: ಚಾಂದಿನಿ ನಿಧನ

ಸುಳ್ಯ (ದಕ್ಷಿಣ ಕನ್ನಡ): ‘ಹೈಪರ್ ಐಜಿಇ ಸಿಂಡ್ರೋಮ್’ ಎಂಬ ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದ ಸುಳ್ಯದ ಚಾಂದಿನಿ (38) ಮಂಗಳೂರಿನ ಆಸ್ಪತ್ರೆ ಯಲ್ಲಿ ಸೋಮವಾರ ನಿಧನರಾಗಿದ್ದಾರೆ.

ಚಾಂದಿನಿ

ನಾವೂರಿನ ದಿ.ಧನಂಜಯ ಮತ್ತು ಸರೋಜಿನಿ ದಂಪತಿ ಪುತ್ರಿಯಾದ ಚಾಂದಿನಿ ಇಪ್ಪತ್ತಕ್ಕೂ ಅಧಿಕ ಬಾರಿ ಶಸ್ತ್ರಚಿಕಿತ್ಸೆ, ಹತ್ತು ಬಾರಿ ಕೃತಕ ಉಸಿರಾಟ, ಶಾಕ್ ಟ್ರೀಟ್‌ಮೆಂಟ್, ಕಿಮೋಥೆರಪಿ ಚಿಕಿತ್ಸೆಗೆ ಒಳಗಾಗಿದ್ದರು. ಚಿಕಿತ್ಸೆಗಾಗಿ ಲಕ್ಷಗಟ್ಟಲೆ ಹಣ ವ್ಯಯಿಸಿದರೂ ಆರೋಗ್ಯದಲ್ಲಿ ಸುಧಾರಣೆ ಆಗಿರಲಿಲ್ಲ.

ರಾಜ್ಯ ಸರ್ಕಾರ ಉಚಿತ ಚಿಕಿತ್ಸೆಯ ಭರವಸೆ ನೀಡಿದ್ದರೂ ಅದರ ಅನುಷ್ಠಾನದಲ್ಲಿ ಹಲವು ತೊಡಕು ಇದ್ದವು. ಆರ್ಥಿಕ ನೆರವಿನ ದಾರಿ ಕಾಣದಾದಾಗ ದಯಾಮರಣಕ್ಕೆ ಅವರು ಮನವಿ ಮಾಡಿಕೊಂಡಿದ್ದರು.

ಸರ್ಕಾರದ ವಿವಿಧ ಇಲಾಖೆ, ಯೋಜನೆಗಳು ಅಲ್ಲದೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಹಿತ ನೂರಾರು ಮಂದಿ ಚಾಂದಿನಿಗೆ ಧನ ಸಹಾಯ ಮಾಡಿದ್ದರು.

ಅವರಿಗೆ ತಾಯಿ ಸರೋಜಿನಿ, ಪತಿ ಪುರುಷೋತ್ತಮ್, ಪುತ್ರಿ ಚಾನ್ವಿ ಇದ್ದಾರೆ.

ರಾಜ್ಯ ಕಾರಾಗೃಹ ಅಧಿಕಾರಿಗಳಿಗೆ ಹೈಕೋರ್ಟ್ ನಿರ್ದೇಶನ

ಪೆರೋಲ್ ಉಲ್ಲಂಘನೆ: ಜಾಗೃತಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೆರೋಲ್ ಮೇಲೆ ಹೊರಬರುವ ಕೈದಿಗಳು ಅವಧಿ ಪೂರ್ಣಗೊಂಡ ಬಳಿಕ ಷರತ್ತುಗಳನ್ನು ಉಲ್ಲಂಘಿಸಿ ಜೈಲು ಅಧಿಕಾರಿಗಳಗೆ ಶರಣಾಗದೇ ಇದ್ದಲ್ಲಿ ಎದುರಿಸಬಹುದಾದ ಪರಿಣಾಮಗಳು ಮತ್ತು ಅದಕ್ಕೆ ಅನುಭವಿಸಬಹುದಾದ ಶಿಕ್ಷೆಗೆ ಸಂಬಂಧಿಸಿದಂತೆ ಕೈದಿಗಳಲ್ಲಿ ಜಾಗೃತಿ ಮೂಡಿಸಿ’ ಎಂದು ಹೈಕೋರ್ಟ್, ರಾಜ್ಯದ ಕಾರಾಗೃಹ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಪೆರೋಲ್ ಉಲ್ಲಂಘಿಸಿದ ಅಪರಾಧಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಈ ಕುರಿತಂತೆ ಆದೇಶಿಸಿದೆ.

ಮಾರ್ಗಸೂಚಿಗಳು

- ಪೆರೋಲ್ ನೀಡುವ ಸಂದರ್ಭದಲ್ಲಿ ಜೈಲು ಅಧಿಕಾರಿಗಳು, ಕೈದಿಗಳಿಗೆ ಅರ್ಥವಾಗುವ ಭಾಷೆಯಲ್ಲಿ ಷರತ್ತುಗಳನ್ನು ವಿವರಿಸಬೇಕು
- ಪೆರೋಲ್ ಮೇಲೆ ಬಿಡುಗಡೆಯಾಗಿ ಪುನಃ ಶರಣಾಗದೇ ಇದ್ದಲ್ಲಿ ಎದುರಿಸಬೇಕಾದ ಪರಿಣಾಮಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸಿರಬೇಕು
- ಈ ಅಂಶಗಳು ಕೈದಿಗೆ ಅರ್ಥವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಅವರಿಂದ ಲಿಖಿತ ಹೇಳಿಕೆ ದಾಖಲಿಸಿಕೊಳ್ಳಬೇಕು
- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು, ಜೈಲಿನ ಆವರಣದಲ್ಲಿ ನಿಯಮಿತವಾಗಿ ನಡೆಸುವ ಕಾನೂನು ಸಾಕ್ಷರತಾ ಅಧಿವೇಶನಗಳಲ್ಲಿ, ಪೆರೋಲ್‌ಗಾಗಿ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಪರಾಧಿಗೆ ಸಂಭಾವ್ಯ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದನ್ನು ಖಚಿತಪಡಿಸಿಕೊಳ್ಳಬೇಕು
- ಈ ಆದೇಶದ ಪ್ರತಿಯನ್ನು ರಿಜಿಸ್ಟ್ರಾರ್ ಜನರಲ್ ಅವರು ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಕಳಹಿಸಿಕೊಡಬೇಕು

‘ಪೆರೋಲ್ ಷರತ್ತುಗಳನ್ನು ಉಲ್ಲಂಘಿಸಿ ನಿಗದಿತ ಸಮಯದಲ್ಲಿ ಶರಣಾಗದ ಆರೋಪದಡಿ ಅಪರಾಧಿಯನ್ನು ಪುನಃ ವಿಚಾರಣೆಗೆ ಒಳಪಡಿಸಲು ಅವಕಾಶವಿದೆ. ಪೆರೋಲ್ ನಿಯಮಗಳ ಉಲ್ಲಂಘನೆ ಎಂಬುದು, ಅಶಿಸ್ತು ಮತ್ತು ಕಾನೂನುಬದ್ಧ ಬಂಧನವನ್ನು ಉಲ್ಲಂಘಿಸುವ ವಿಶಿಷ್ಟ ಅಪರಾಧವಾಗಿದೆ. ಆದ್ದರಿಂದ, ಅಪರಾಧಿಗಳಿಗೆ ವಿಧಿಸಲಾದ ಶಿಕ್ಷೆ ಮುಗಿದ ಬಳಿಕ ಪೆರೋಲ್ ಉಲ್ಲಂಘಿಸಿದ ಆರೋಪದ ಶಿಕ್ಷೆಯನ್ನೂ ಅನುಭವಿಸ ಬೇಕಾಗುತ್ತದೆ. ಅಂತೆಯೇ, ಮೂಲ ಶಿಕ್ಷೆ ಮತ್ತು ಪೆರೋಲ್ ಉಲ್ಲಂಘನೆಯ ಶಿಕ್ಷೆ ಪ್ರತ್ಯೇಕವಾಗಿ ಇರಲಿದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಪೆರೋಲ್ ಮಂಜೂರಾದ ಬಳಿಕ ಷರತ್ತು ಉಲ್ಲಂಘಿಸಿದ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಕ್ರಮಗಳು ಮತ್ತು ಪೆರೋಲ್ ಮೇಲೆ ಬಿಡುಗಡೆಯಾದ ಕೈದಿಗಳ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತಾದ ಕಿರು ಹೊತ್ತಿಗೆ ಅಥವಾ ಕರಪತ್ರವನ್ನು ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮುದ್ರಿಸಿ ಕೈದಿಗಳು ಮತ್ತು ಅವರ ಕುಟುಂಬದ ಸದಸ್ಯರಿಗೆ ಹಂಚಬೇಕು’ ಎಂದು ನ್ಯಾಯಪೀಠ ಬಂದೀಖಾನೆ ಇಲಾಖೆಗೆ ತಾಕೀತು ಮಾಡಿದೆ.

ಮಹದೇಶ್ವರಬೆಟ್ಟ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿ 3 ಕಿರು ಯೋಜನೆ ಪ್ರಸ್ತಾವ

ಜಲ ವಿದ್ಯುತ್ ಯೋಜನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆ ಮಹದೇಶ್ವರಬೆಟ್ಟ ವನ್ಯಜೀವಿ ವಿಭಾಗದ ವ್ಯಾಪ್ತಿಯ ಕಾವೇರಿ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯದಲ್ಲಿ ಮೂರು ಕಿರು ಜಲವಿದ್ಯುತ್ ಯೋಜನೆ ಆರಂಭಿಸಲು ಸಲ್ಲಿಸಿರುವ ಪ್ರಸ್ತಾವಗಳನ್ನು ತಿರಸ್ಕರಿಸುವಂತೆ ಪರಿಸರ ಕಾರ್ಯಕರ್ತರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಈ ಪ್ರದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ– ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಇದೇ ಕಾರಣಕ್ಕಾಗಿ, ಹುಲಿಗಳನ್ನು ವಿಷವಿಟ್ಟು ಕೊಲ್ಲಲಾಗಿದೆ. ಮತ್ತೆ ಅರಣ್ಯದಲ್ಲಿ ಜಲ ವಿದ್ಯುತ್ ಯೋಜನೆಗಳಿಗೆ ಅವಕಾಶ ಕೊಟ್ಟದ್ದೇ ಆದರೆ, ಮಾನವ– ವನ್ಯಜೀವಿ ಸಂಘರ್ಷ ತಾರಕಕ್ಕೆ ಏರುವುದರಲ್ಲಿ ಸಂದೇಹವಿಲ್ಲ’ ಎಂದು ಪರಿಸರ ಸಂರಕ್ಷಣ ಕಾರ್ಯಕರ್ತ ಗಿರಿಧರ ಕುಲಕರ್ಣಿ ಅವರು ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ಪಚ್ಚೆದೊಡ್ಡಿ ಹುಲಿ ಸಾವಿನ ತನಿಖೆ ಸಮಿತಿಯ ಮುಖ್ಯಸ್ಥೆ ಪಿಸಿಸಿಎಫ್ ಸ್ಮಿತಾ ಬಿಜ್ಜೂರ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಕಾವೇರಿ ನದಿ ತೀರದ ಹುಲಿ ಮತ್ತು ಆನೆ ಸಂಚಾರದ ಮಾರ್ಗಗಳ ಪಕ್ಕದಲ್ಲೇ ಮೂರು ಜಲವಿದ್ಯುತ್ ಕಂಪನಿಗಳ ಸ್ಥಾವರಗಳು ಬರಲಿವೆ. 3 ಪ್ರಸ್ತಾವಗಳ ಪೈಕಿ, ಪಯನಿಯರ್ ಪವರ್ ಕಾರ್ಪೊರೇಷನ್ ಚಾಮರಾಜ ನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಶಿವನಸಮುದ್ರ ಗ್ರಾಮದಲ್ಲಿ 4.863 ಹೆಕ್ಟೇರ್ ಹಾಗೂ ಸತ್ತೇಗಾಲದಲ್ಲಿ ಭರಚುಕ್ಕಿ 2x2.5 ಮೆ.ವಾ ಕಿರು ಜಲವಿದ್ಯುತ್ ಯೋಜನೆ ಅನುಷ್ಠಾನಗೊಳಿಸಲು ಅರಣ್ಯ ಭೂಮಿ ಬಳಕೆಗೆ ಪ್ರಸ್ತಾವನೆ ಸಲ್ಲಿಸಿದೆ. ಬಾಲಾಜಿ ಕಾವೇರಿ ಹೈಡ್ರೊ ಯೋಜನೆ (ಶಿವನಸಮುದ್ರ)– ಮೆಸರ್ಸ್ ಬಾಲಾಜಿ ಕಾವೇರಿ ಪವರ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆ ಈ ಹಿಂದೆ ಪಯನಿಯರ್ ಕಂಪನಿಗೆ ನೀಡಿದ್ದ 4.863 ಹೆಕ್ಟೇರ್ ಭೂಮಿಯನ್ನು ಮರು ಹಂಚಿಕೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಅವರು ಹೇಳಿದ್ದಾರೆ.

ಉದ್ದೇಶಿತ ಮೂರು ಕಿರು ಜಲ ವಿದ್ಯುತ್ ಜಲ ವಿದ್ಯುತ್ ಯೋಜನೆಗಳ ಪ್ರಸ್ತಾವನೆಗೆ ಒಪ್ಪಿಗೆ ನೀಡಿದರೆ ವನ್ಯಜೀವಿ ಆವಾಸಸ್ಥಾನ ಛಿದ್ರಗೊಂಡು, ಮಾನವ–ವನ್ಯಜೀವಿ ಸಂಘರ್ಷ ಇನ್ನಷ್ಟು ಹೆಚ್ಚಲಿದೆ. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ. ಆದ್ದರಿಂದ, ಭವಿಷ್ಯದಲ್ಲಿ ಈ ಭಾಗದಲ್ಲಿ ಕಿರು ಜಲ ವಿದ್ಯುತ್ ಯೋಜನೆಗಳು ಮತ್ತು ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮಕ್ಕೆ ಅರಣ್ಯ ಪರಿವರ್ತನೆ ಮಾಡಲು ಅನುಮತಿ ನೀಡಬಾರದು ಎಂದು ಒತ್ತಾಯಿಸಿದ್ದಾರೆ.

ಹುಲಿಗಳ ಸಾವಿನ ತನಿಖೆ ಕೇವಲ ತಾತ್ಕಾಲಿಕ ಕಾರಣಗಳನ್ನು ಮಾತ್ರವಲ್ಲ, ಪರಿಸರ ಹಾನಿಯ ಮೂಲವನ್ನು ಸಹ ಪರಿಗಣಿಸಬೇಕು. ದೀರ್ಘಕಾಲೀನ ಉಪಶಮನ ಕ್ರಮಗಳನ್ನು ಕೈಗೊಳ್ಳಲು ಶಿಫಾರಸು ಮಾಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

‘ವನ್ಯಜೀವಿಗಳ ಆವಾಸ ಸ್ಥಾನ ನಾಶ’

ಕಿರು ಜಲ ವಿದ್ಯುತ್ ಯೋಜನೆ ಎಂಬ ಹಣೆಪಟ್ಟಿ ಇದ್ದರೂ ಈ ಯೋಜನೆಗಳ ಅನುಷ್ಠಾನದ ವೇಳೆ ನಿರ್ಮಾಣ ಮತ್ತು ಸುರಂಗ ಕೊರೆಯುವ ಚಟುವಟಿಕೆ, ಮರ ಕಡಿಯುವುದು, ಸ್ಫೋಟಿಸುವುದು ಮತ್ತು ನದಿ ಹರಿವಿಗೆ ಅಡ್ಡಿಪಡಿಸುವ ಚಟುವಟಿಕೆಗಳು ನಡೆಯುತ್ತವೆ. ಇವೆಲ್ಲವೂ ವನ್ಯಜೀವಿಗಳ ಆವಾಸ ಸ್ಥಾನಗಳನ್ನು ನಾಶಪಡಿಸುತ್ತವೆ ಎಂದು ಪರಿಸರ ಕಾರ್ಯಕರ್ತ ಗಿರಿಧರ ಕುಲಕರ್ಣಿ ಹೇಳಿದ್ದಾರೆ.

‘ಮರಣದಂಡನೆ ಅರ್ಜಿ: 2 ವಾರದಲ್ಲಿ ವಿವರ ಒದಗಿಸಿ’

ನವದೆಹಲಿ: ಕರ್ನಾಟಕದಲ್ಲಿ ಮರಣ ದಂಡನೆ ಅರ್ಜಿಗಳು ಬಾಕಿ ಇರುವ ಬಗ್ಗೆ ವಿವರಗಳನ್ನು ನೀಡಲು ವಿಫಲವಾಗಿದ್ದಕ್ಕೆ ಹೈಕೋರ್ಟ್ ಅನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತು ಹಾಗೂ ಈ ಸಂಬಂಧ ಎರಡು ವಾರಗಳಲ್ಲಿ ರಿಜಿಸ್ಟ್ರಾರ್ ಜನರಲ್ ವಿವರ ನೀಡಬೇಕು ಎಂದು ನಿರ್ದೇಶನ ನೀಡಿತು.

ಪ್ರಕರಣವೊಂದರ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಪಂಕಜ್ ಮಿತ್ತಲ್ ಅವರ ಪೀಠವು ದೇಶದಾದ್ಯಂತ ಬಾಕಿ ಇರುವ ಮರಣದಂಡನೆ ಅರ್ಜಿಗಳ ಕುರಿತು ವಿವರಗಳನ್ನು ಕೋರಿತು.

ಎಲ್ಲ ಹೈಕೋರ್ಟ್‌ಗಳು, ದುರದೃಷ್ಟ-ವಶಾತ್ ಹೈಕೋರ್ಟ್ ಈ ವಿಷಯದಲ್ಲಿ ನ್ಯಾಯಾಲಯಕ್ಕೆ ಅಗತ್ಯವಾದ ದತ್ತಾಂಶ ಒದಗಿಸಲು ವಿಫಲವಾಗಿದೆ ಎಂದಿದೆ.

‘ಅಗತ್ಯ ಮಾಹಿತಿ ಒದಗಿಸಲು ಏಕೆ ವಿಫಲರಾಗಿದ್ದಾರೆ ಎಂಬುದನ್ನು ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ವಿವರಿಸಬೇಕಾಗಿದೆ. ಈ ನಿಟ್ಟನಲ್ಲಿ ವಿವರಣೆ ನೀಡಲು ರಿಜಿಸ್ಟ್ರಾರ್ ಜನರಲ್‌ಗೆ ಎರಡು ವಾರಗಳ ಕಾಲಾವಕಾಶ ನೀಡಲಾಗಿದೆ’ ಎಂದು ಪೀಠ ಹೇಳಿತು.

ನವೆಂಬರ್‌ಗೆ 800 ಕೆಪಿಎಸ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಜ್ಯದಲ್ಲಿ ₹3,000 ಕೋಟಿ ವೆಚ್ಚದಲ್ಲಿ ಆರಂಭಿಸಲಿರುವ 800 ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಗಳಿಗೆ ಮುಖ್ಯಮಂತ್ರಿ ನವೆಂಬರ್ ಎರಡನೇ ವಾರ ಶಿವಮೊಗ್ಗದಲ್ಲಿ ಚಾಲನೆ ನೀಡಲಿದ್ದಾರೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಎಸ್. ಬಂಗಾರಪ್ಪ ಇಲ್ಲಿ ತಿಳಿಸಿದರು.

‘ಈ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಮನೆಯಿಂದ ಕರೆತರಲು, ಬಿಟ್ಟುಬರಲು ಇಲಾಖೆಯಿಂದಲೇ ಉಚಿತವಾಗಿ ಬಸ್ ವ್ಯವಸ್ಥೆ ಮಾಡಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಈ ಕ್ರಮಕ್ಕೆ ಇಲಾಖೆ ಮುಂದಾಗಿದೆ. ಆಯಾ ಶಾಲೆಯ ಆಡಳಿತ ಮಂಡಳಿಗಳೇ ಬಸ್‌ನ ನಿರ್ವಹಣೆ ಮಾಡಲಿವೆ’ ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪದವಿಪೂರ್ವ ಕಾಲೇಜಿನ 800, ಸರ್ಕಾರಿ ಶಾಲೆಗಳ 13,000 ಹಾಗೂ ಅನುದಾನಿತ ಶಾಲೆಗಳ 6,000 ಶಿಕ್ಷಕರ ನೇಮಕಾತಿಗೆ ಶೀಘ್ರ ಅಧಿಸೂಚನೆ ಹೊರಡಿಸಲಾಗುತ್ತಿದೆ ಎಂದು ಹೇಳಿದರು.

ಡಿ.7ಕ್ಕೆ ಟಿಇಟಿ: ಅದಕ್ಕೆ ಪೂರ್ವಭಾವಿಯಾಗಿ ಡಿ.7ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ನಡೆಯಲಿದೆ. ಅಕ್ಟೋಬರ್ 23ರಂದು ಅಧಿಸೂಚನೆ ಪ್ರಕಟಿಸಲಾಗುತ್ತದೆ. ಪರೀಕ್ಷೆಗೆ ಹಾಜರಾಗುವವರು ನವೆಂಬರ್ 9 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಿಸಿದರು.

ಬಿಜೆಪಿ ಅವಧಿಯಲ್ಲಿ 4,700 ಶಿಕ್ಷಕರ ನೇಮಕವಾಗಿತ್ತು. ನಾವು ಎರಡೂವರೆ ವರ್ಷದಲ್ಲೇ 30 ಸಾವಿರಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿ ಮಾಡಿದ್ದೇವೆ
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ

ಪಡಿತರ ಚೀಟಿ ಅಡಮಾನ: ಸಮೀಕ್ಷೆಗೆ ತೊಡಕು

ಚಾಮರಾಜನಗರ: ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಕೆಲವರು ಪಡಿತರ ಚೀಟಿ ಅಡವಿಟ್ಟು ಉದ್ಯೋಗ ಅರಸಿ ಬೇರೆ ಜಿಲ್ಲೆಗಳಿಗೆ ತೆರಳಿರುವುದು ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ ಅಡ್ಡಿಯಾಗಿದೆ.

ಯಳಂದೂರು ತಾಲ್ಲೂಕಿನ ಕೃಷ್ಣಾಪುರ, ಗಣಗನೂರು, ದಾಸನುಂಡಿ, ಗುಂಬಳ್ಳಿ, ಕೋಮಾರನಪುರ ಸೇರಿ ಹಲವು ಗ್ರಾಮಗಳಲ್ಲಿ ಈ ಸಮಸ್ಯೆ ಕಾಣಿಸಿದೆ. ಜನರು ಬೆಂಗಳೂರು, ಮೈಸೂರು ಜಿಲ್ಲೆಗಳಿಗೆ ತೆರಳಿದ್ದಾರೆ.

ಕೆಲವರು ನ್ಯಾಯಬೆಲೆ ಅಂಗಡಿಗಳಿಗೆ ಹಾಗೂ ಉಳ್ಳವರ ಬಳಿ ಪಡಿತರ ಚೀಟಿಯನ್ನು ಅಡವಿಟ್ಟಿದ್ದು ತಿಂಗಳಿಗೊಮ್ಮೆ ಬಯೊಮೆಟ್ರಿಕ್ ನೀಡಿ ಕೂಲಿಗೆ ಮರಳುತ್ತಿದ್ದಾರೆ. ಆ ಕುಟುಂಬಗಳ ಸದಸ್ಯರನ್ನು ಗುರುತಿಸಿ ಸಮೀಕ್ಷೆಗೆ ಒಳಪಡಿಸುವುದು ಸವಾಲಾಗಿದೆ ಎಂದು ಸಮೀಕ್ಷಕರೊಬ್ಬರು ತಿಳಿಸಿದರು.

ನೂಕುನುಗ್ಗಲು; 11 ಮಂದಿ ಅಸ್ವಸ್ಥ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದ ಸಭಾ ಕಾರ್ಯಕ್ರಮ ಮಧ್ಯಾಹ್ನ 12ಕ್ಕೆ ನಿಗದಿಯಾಗಿತ್ತು. ಇದಕ್ಕೂ ಮುನ್ನ ಫಲಾನುಭವಿಗಳ ನೋಂದಣಿ ಮತ್ತು ರಸಮಂಜರಿ ಇತ್ತು. ಜನರು ಬೆಳಿಗ್ಗೆಯಿಂದಲೇ ಬರತೊಡಗಿದ್ದರು.

ರೈ ಎಸ್ಟೇಟ್ ಆ್ಯಂಡ್ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ವಿಶಾಲ ಮೈದಾನದಲ್ಲಿ ಬೃಹತ್ ಚಪ್ಪರ ಹಾಕಲಾಗಿತ್ತು. ಆದರೆ, ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಕೆಸರು ತುಂಬಿತ್ತು. ಅದರಲ್ಲೇ ಮೇಲೆ ಕುರ್ಚಿಗಳಲ್ಲಿ ಕಷ್ಟಪಟ್ಟು ಕುಳಿತವರಿಗೆ ನೀರಿನ ಬಾಟಲಿ ತೆಗೆದುಕೊಂಡು ಹೋಗಲು ಪೊಲೀಸರು ಅವಕಾಶ ನೀಡಲಿಲ್ಲ.

‘ಮುಖ್ಯಮಂತ್ರಿ ಕಡೆಗೆ ಯಾರೂ ಬಾಟಲಿ ಎಸೆಯಬಾರದು ಎಂಬ ಮುನ್ನೆಚ್ಚರಿಕೆಯ ಸಲುವಾಗಿ ಬಾಟಲಿ ತೆಗೆದುಕೊಂಡು ಹೋಗಲು ಅನುವು ಮಾಡಲಿಲ್ಲ’ ಎಂದು ಭದ್ರತೆಗಾಗಿ ಬಂದಿದ್ದ ಸಬ್ ಇನ್‌ಸ್ಪೆಕ್ಟರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು. ಮುಂದೆ ಕುಳಿತ ಸನ್ಮಾನಿತರು ಮತ್ತು ಪ್ರಮುಖರಿಗೆ ಸಂಘಟಕರು ಕದ್ದುಮುಚ್ಚಿ ನೀರು ತಂದುಕೊಡುತ್ತಿದ್ದರು.

ಮುಖ್ಯಮಂತ್ರಿಕಾಗಿ ಕಾದರು: ಮುಖ್ಯಮಂತ್ರಿ ವೇದಿಕೆಗೆ ಬರುವಾಗ ಮಧ್ಯಾಹ್ನ 1 ಗಂಟೆಯಾಗಿತ್ತು. ಕೇವಲ 15 ನಿಮಿಷಗಳಲ್ಲಿ ಸಭಾ ಕಾರ್ಯಕ್ರಮ ಮುಗಿಸುವುದಾಗಿ ಘೋಷಿಸಿದರೂ ಕಾರ್ಯಕ್ರಮ ಮುಗಿಯುವಾಗ 3 ಗಂಟೆ ಕಳೆದಿತ್ತು. ಸಿದ್ದರಾಮಯ್ಯ ಅವರ ಭಾಷಣದ ನಂತರ ಊಟದ ಹಾಲ್ ಬಳಿ ಹಾಗೂ ಉಡುಗೊರೆ ನೀಡುವಲ್ಲಿ ಜನಸಂದಣಿಯಾಯಿತು. ನಂತರ ನೂಕು ನುಗ್ಗಲು ಉಂಟಾಯಿತು. ಕೆಲವರು ಅಲ್ಲೇ ಸುಸ್ತಾಗಿ ಬಿದ್ದರು.

ವಸಂತಿ ಬಲ್ನಾಡು (53), ಶಬಾ ಮಾಡಾವು (20), ಅಮೀನಾ ಪಾಟ್ರಕೋಡಿ (56), ಯೋಗಿತಾ (20), ನೇತ್ರಾವತಿ ಇರ್ದೆ (37), ಲೀಲಾವತಿ ಕಡಬ (50), ಕುಸುಮಾ (62), ರತ್ನಾವತಿ ಪೆರಿಗೇರಿ (67), ಸ್ನೇಹಪ್ರಭಾ (41), ಜಸೀಲಾ (30), ಅಫೀಲಾ ಪಾಟ್ರಕೋಡಿ (30), ಅವರನ್ನು ಪುತ್ತೂರಿನ ಜನರಲ್ ಆಸ್ಪತ್ರೆಗೆ ದಾಖಲಿಸಲಾಯಿತು. 13 ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದರು ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಭಾಷಣದ ಬಳಿಕವಷ್ಟೇ ಊಟ ಮತ್ತು ಉಡುಗೊರೆ ವಿತರಣೆ ಆರಂಭಿಸಿದ್ದರಿಂದ ಸಮಸ್ಯೆ ಯಾಯಿತು. ಜನರು ಅಪಾರ ಸಂಖ್ಯೆಯಲ್ಲಿ ಒಮ್ಮೆಲೇ ಮುನ್ನುಗ್ಗಿದ ಕಾರಣ ನೂಕು ನುಗ್ಗಲು ಉಂಟಾಯಿತು. ಅನೇಕರು ಊಟ ಮತ್ತು ಉಡುಗೊರೆ ಪಡೆಯದೆ ಹಿಂತಿರುಗಿದರು. ಕೆಲವರು ಮೈದಾನದ ಹೊರಗೆ ದಾರಿಯಲ್ಲಿ ಪ್ರಜ್ಞೆ ತಪ್ಪಿ ಬಿದ್ದರು.

‘ಆಹಾರ ಮತ್ತು ಗಿಫ್ಟ್ ವಿಳಂಬವಾಗಿ ನೀಡಿದ ಕಾರಣ ಹಲವರಿಗೆ ಹೈಪೊಗ್ಲೇಸಮಿಯಾ ಅಥವಾ ನಿರ್ಜಲೀಕರಣ ಉಂಟಾಯಿತು. ಮೂವರು ಮಹಿಳೆಯರಿಗೆ ಐ.ವಿ ಫ್ಲುಯಿಡ್ಸ್ ನೀಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬೌನ್ಸರ್‌ಗಳಿಗೆ ಭದ್ರತೆ ಹೊಣೆ

ಮುಖ್ಯಮಂತ್ರಿ ಭಾಗವಹಿಸಿದ್ದ ಕಾರ್ಯಕ್ರಮಕ್ಕೆ ಭಾರಿ ಪೊಲೀಸ್ ಬಂದೋಬಸ್ತ್ ಇದ್ದರೂ ಮುಂಭಾಗದ ‘ಗ್ರೌಂಡ್ ಜೀರೊ’ ವಲಯದ ಹಿಂದಿನ ಒಂದಷ್ಟು ಭಾಗದ ನಿಯಂತ್ರಣವನ್ನು ಬೌನ್ಸರ್‌ಗಳ ಕೈಗೆ ವಹಿಸಲಾಗಿತ್ತು. ಮಂಗಳೂರಿನ ಏಜೆನ್ಸಿಯೊಂದರಿಂದ ಬಂದಿದ್ದ ಬೌನ್ಸರ್‌ಗಳು, ತಮಗೆ ಮೀಸಲಿರಿಸಿದ್ದ ಜಾಗದ ಕಡೆಗೆ ಪ್ರಮುಖರು ಹೋಗುವಾಗ ಮನಬಂದಂತೆ ತಳ್ಳಿದರು. ಮಹಿಳೆಯರು ಸೇರಿದಂತೆ ಹಲವು ಪತ್ರಕರ್ತರನ್ನೂ ಅವರು ತಡೆದರು. ತಮಗೆ ಮೀಸಲಿರಿಸಿರುವ ಜಾಗಕ್ಕೆ ಹೋಗುವುದಾಗಿ ಹೇಳಿದರೂ ತಳ್ಳಿದರು. ನಂತರ ಸಂಘಟಕರು ಬಂದು ಕರೆದುಕೊಂಡು ಹೋದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಸಂಶಯದ ಸೆರೆಯಿರುವವರೆಗೆ ತಿಳಿವಳಿಕೆಗೆ ಬಿಡುಗಡೆಯಿಲ್ಲ, ಸತ್ಯವು ಸ್ವಾಧೀನವಾಗಲಿ.

-ದ.ರಾ. ಬೇಂದ್ರೆ

ಸಂಪಾದಕೀಯ

‘ಸಂಘ’ಸಂಸ್ಥೆ ಚಟುವಟಿಕೆಗೆ ನಿರ್ಬಂಧ ಅನುಕೂಲಸಿಂಧು ನಿರ್ಧಾರ ಆಗದಿರಲಿ

ಸಾರ್ವಜನಿಕ ಸ್ಥಳಗಳಲ್ಲಿ ಖಾಸಗಿ ಸಂಘಸಂಸ್ಥೆಗಳ ಚಟುವಟಿಕೆಗಳಿಗೆ ಅನುಮತಿ ಪಡೆಯುವುದನ್ನು ಕಡ್ಡಾಯಪಡಿಸಿರುವ ಸರ್ಕಾರದ ನಿರ್ಧಾರ ಹಾದಿಬೀದಿಯ ಚರ್ಚೆ ಹಾಗೂ ರಾಜಕೀಯ ಬಲಪ್ರದರ್ಶನದ ವಿಷಯವಾಗಿರುವುದು ದುರದೃಷ್ಟಕರ. ಸಾರ್ವಜನಿಕ ಸ್ಥಳವನ್ನು ಬಳಸಿಕೊಳ್ಳಲು ಖಾಸಗಿ ಸಂಘಸಂಸ್ಥೆಗಳು ಕಾನೂನು ಪ್ರಾಧಿಕಾರಗಳ ಅನುಮತಿ ಪಡೆಯಬೇಕೆನ್ನುವುದು ಸರಿಯಾದ ನಿಲುವೇ ಆಗಿದೆ. ತಮ್ಮಿಷ್ಟಕ್ಕೆ ತಕ್ಕಂತೆ ಸಾರ್ವಜನಿಕ ಸ್ಥಳಗಳನ್ನು ಬಳಸಿಕೊಳ್ಳುವ ಅಧಿಕಾರ ಯಾರಿಗೂ ಇಲ್ಲ. ಹಾಗಾಗಿ, ಸರ್ಕಾರದ ನಿರ್ಧಾರ ಸರಿಯಾಗಿಯೇ ಇದೆ. ಆದರೆ, ಈ ನಿರ್ಧಾರದ ಹಿಂದೆ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕೆನ್ನುವ ಉದ್ದೇಶ ಸರ್ಕಾರಕ್ಕಿರುವಂತೆ ಕಾಣಿಸುತ್ತದೆ. ಈ ಉದ್ದೇಶವೇ ಸರ್ಕಾರದ ನಿರ್ಧಾರವನ್ನು ಹಾದಿಬೀದಿ ರಾಜಕಾರಣದ ವಿಷಯವನ್ನಾಗಿಸಿದೆ. ಶಾಲಾ-ಕಾಲೇಜು ಸೇರಿದಂತೆ ಸರ್ಕಾರಿ ಸ್ಥಳಗಳನ್ನು ಆರ್‌ಎಸ್‌ಎಸ್ ತನ್ನ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದನ್ನು ನಿರ್ಬಂಧಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯುವುದರೊಂದಿಗೆ ಇದೆಲ್ಲ ಪ್ರಕ್ರಿಯೆ ಆರಂಭಗೊಂಡಿತು. ಪ್ರಿಯಾಂಕ್ ಅವರು ಹೇಳಿರುವುದು ಸರಿಯಾಗಿದೆ ಎಂದು ಸಮರ್ಥಿಸಿಕೊಂಡ ಮುಖ್ಯಮಂತ್ರಿ, ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವ ಕುರಿತು ತಮಿಳುನಾಡು ಸರ್ಕಾರ ಕೈಗೊಂಡ ಕ್ರಮವನ್ನು ಪರಿಶೀಲಿಸಿ ಪರಿಗಣಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿರುವುದಾಗಿ ತಿಳಿಸಿದ್ದರು. ಆರ್‌ಎಸ್‌ಎಸ್ ಒಂದು ಫ್ಯಾಸಿಸ್ಟ್ ಸಂಘಟನೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ ನೀಡಿದ್ದರು. ಇದೆಲ್ಲದರ ಮುಂದುವರಿದ ಭಾಗವಾಗಿ, ವ್ಯಕ್ತಿಗಳು, ಸಂಘ ಸಂಸ್ಥೆಗಳು, ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸುವುದಕ್ಕೂ ಮುನ್ನ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಳ್ಳಲೇಬೇಕು ಎಂದು ಗೃಹ ಇಲಾಖೆ ಆದೇಶ ಹೊರಡಿಸಿದೆ.



ಖಾಸಗಿ ಸಂಘ-ಸಂಸ್ಥೆಗಳ ಕಾರ್ಯಕ್ರಮಗಳಿಗೆ ಅಂಕುಶ ಹಾಕುವ ಸರ್ಕಾರದ ಪ್ರಯತ್ನ ವಿರೋಧಾಭಾಸಗಳಿಂದ ಕೂಡಿದೆ. ಇದನ್ನು ವಿರೋಧಿಸುವ ಪ್ರತಿಪಕ್ಷವೂ ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ.

ಆರ್‌ಎಸ್‌ಎಸ್ ಬಗೆಗಿನ ರಾಜ್ಯ ಸರ್ಕಾರದ ನಿಲುವುಗಳು ಅಸ್ಪಷ್ಟವಾಗಿವೆ. ಆರ್‌ಎಸ್‌ಎಸ್ ಸಮಾಜವನ್ನು ವಿಭಜಿಸುವ ಕೆಲಸ ಮಾಡುತ್ತಿದೆ ಹಾಗೂ ಅದೊಂದು ಫ್ಯಾಸಿಸ್ಟ್ ಸಂಘಟನೆ ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದ್ದಲ್ಲಿ, ಅದರ ವಿರುದ್ಧ ಮಾತನಾಡುವುದರ ಬದಲು ಕ್ರಮ ಕೈಗೊಳ್ಳಬೇಕಾಗಿದೆ. ಸರ್ಕಾರದ ಕ್ರಮ ಬಾಯಿಮಾತಿಗೆ ಸೀಮಿತ ಎನ್ನುವುದಾದರೆ, ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರವೂ ಭಾಗೀದಾರ ಎಂದು ಹೇಳುವುದು ಅನಿವಾರ್ಯ. ಖಾಸಗಿ ಕಾರ್ಯಕ್ರಮಗಳಿಗೆ ಕಡಿವಾಣ ಹಾಕುವ ಸರ್ಕಾರದ ಕ್ರಮವೂ ಪ್ರಾಮಾಣಿಕ ಆಗಿರುವಂತೆ ಕಾಣಿಸುತ್ತಿಲ್ಲ. ಸಂಸ್ಥೆಯೊಂದನ್ನು ಗುರಿಯಾಗಿ ಇರಿಸಿಕೊಂಡಂತೆ ಸರ್ಕಾರ ವರ್ತಿಸುವುದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಪ್ಪಿಕೊಳ್ಳಲಾಗದು. ಸರ್ಕಾರ ಹೇಳುತ್ತಿರುವ ನಿರ್ಬಂಧ ಎಲ್ಲ ಸಂಸ್ಥೆಗಳಿಗೂ, ಎಲ್ಲ ಸಮುದಾಯದ ಚಟುವಟಿಕೆಗಳಿಗೂ ಅನ್ವಯ ಆಗಬೇಕು. ಆದರೆ, ಜಾತ್ರೆ, ರಥೋತ್ಸವ, ಮೆರವಣಿಗೆ, ಸಾಮೂಹಿಕ ಪ್ರಾರ್ಥನೆಯಂತಹ ಯಾವುದಾದರೊಂದು ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಿರುವಾಗ, ಅವುಗಳನ್ನು ಕಾನೂನು ಕಣ್ಗಾವಲಿನ ಚೌಕಟ್ಟಿಗೆ ತರುವುದು ಸುಲಭವಲ್ಲ. 2013ರಲ್ಲಿ ಬಿಜೆಪಿ ಅವಧಿಯಲ್ಲಿ ಹೊರಡಿಸಿದ್ದ ಆದೇಶವನ್ನು ನಾವು ಮತ್ತೆ ಜಾರಿಗೊಳಿಸುತ್ತಿದ್ದೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರೂ, ಹಳೆಯ ಆದೇಶವನ್ನು ನೆನಪಿಸಿಕೊಂಡಿರುವ ಉದ್ದೇಶ ಹಾಗೂ ಮರಳಿ ಜಾರಿಗೊಳಿಸಿರುವ ರೀತಿ ಅನುಮಾನ ಹುಟ್ಟಿಸುವಂತಿದೆ. ಸರ್ಕಾರದ ಆದೇಶವನ್ನು ಉಲ್ಲಂಘಿಸುವುದೇ ಪ್ರತಿಪಕ್ಷದ ಕರ್ತವ್ಯ ಎನ್ನುವಂತೆ ಬಿಜೆಪಿ ನಡೆದುಕೊಳ್ಳುತ್ತಿರುವುದೂ ಅಪೇಕ್ಷಣೀಯವಲ್ಲ. ಸರ್ಕಾರದ ತೀರ್ಮಾನ ಸರಿಯಾದುದಲ್ಲ ಅಥವಾ ದುರುದ್ದೇಶದಿಂದ ಕೂಡಿದೆ ಎನ್ನಿಸಿದಾಗ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದು ಜವಾಬ್ದಾರಿಯುತ ಪ್ರತಿಪಕ್ಷವೊಂದರ ಕರ್ತವ್ಯ. ಕಾನೂನು ಹೋರಾಟವನ್ನು ಬಿಟ್ಟು, ಬೀದಿಗಿಳಿದು ಕಾನೂನು ಉಲ್ಲಂಘಿಸುವುದು ಹೊಣೆಗೇಡಿತನದ ವರ್ತನೆ ಹಾಗೂ ಅಸಾಂವಿಧಾನಿಕ ನಡವಳಿಕೆ.

ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುತ್ತಿರುವುದು ಸರಿಯೋ ತಪ್ಪೋ ಎನ್ನುವ ಚರ್ಚೆಯೂ ಶುರುವಾಗಿದೆ. ಯಾವುದೇ ಸಂಘಟನೆ ಅಥವಾ ಸಮುದಾಯದೊಂದಿಗೆ ಗುರ್ತಿಸಿಕೊಳ್ಳಲು ಸರ್ಕಾರಕ್ಕೇ ಅವಕಾಶ ಇಲ್ಲದಿರುವಾಗ, ಅದರ ನೌಕರರು ಆರ್‌ಎಸ್‌ಎಸ್ ಜೊತೆ ಗುರ್ತಿಸಿಕೊಳ್ಳುವುದು ಸರಿಯೇ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕೆಲವು ಸರ್ಕಾರಿ ನೌಕರರು ಗಣವೇಷ ಧರಿಸಿ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗವಹಿಸಿರುವುದು ಕರ್ನಾಟಕ ನಾಗರಿಕ ಸೇವಾ ನಡವಳಿಕೆ ನಿಯಮಾವಳಿಯ ಸ್ಪಷ್ಟ ಉಲ್ಲಂಘನೆ. ಅಂಥ ನೌಕರರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಸೇವಾ ನಿಯಮಾವಳಿಯನ್ನು ಉಲ್ಲಂಘಿಸುವ ನೌಕರರನ್ನು ಪ್ರತಿಪಕ್ಷಗಳು ಬೆಂಬಲಿಸುವುದೂ ಸರಿಯಲ್ಲ. ಆರ್‌ಎಸ್‌ಎಸ್ ಜೊತೆಗೆ ಅಥವಾ ಬೇರಾವುದೇ ಸಂಘಟನೆಯೊಂದಿಗೆ ಗುರ್ತಿಸಿಕೊಳ್ಳಬಯಸುವ ಸರ್ಕಾರಿ ನೌಕರರು ತಮ್ಮ ಉದ್ಯೋಗದಿಂದ ಹೊರಬರಲಿಕ್ಕೆ ಅವಕಾಶವಿದ್ದೇ ಇದೆ. ವೈಯಕ್ತಿಕ ಒಲವುನಿಲುವುಗಳಿಗೆ ಸರ್ಕಾರಿ ಸೇವೆ-ನೌಕರಿಯಲ್ಲಿ ಅವಕಾಶವಿಲ್ಲ, ಇರಬಾರದು.

ಆರ್ಥಿಕ ಪ್ರಗತಿ, ಯಾವುದು ಸ್ಫೂರ್ತಿ?

ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ನಿರಂತರ ಪ್ರಗತಿಯ ಹಿಂದಿರುವ ಕಾರಣಗಳು, ಪ್ರೇರಣೆಗಳು ಯಾವ ಬಗೆಯವು? ಸೈದ್ಧಾಂತಿಕ ಜ್ಞಾನ ಮತ್ತು ಪ್ರಾಯೋಗಿಕ ಜ್ಞಾನಗಳ ಸಮನ್ವಯ ಇಲ್ಲದಿದ್ದರೆ ಏನಾಗುತ್ತದೆ? ಈ ಪ್ರಶ್ನೆಗಳಿಗೆ ಉತ್ತರದ ರೂಪದಲ್ಲಿ, ಈ ವರ್ಷ ನೊಬೆಲ್ ಬಹುಮಾನ ಪಡೆದ ಮೂವರು ಅರ್ಥಶಾಸ್ತ್ರಜ್ಞರ ಅಧ್ಯಯನವನ್ನು ಗಮನಿಸಬೇಕು.

ಆರ್ಥಿಕ ಪ್ರಗತಿ ಅನ್ನುವುದು ಲಾಗಾಯ್ತಿನಿಂದ ಆಗುತ್ತಿರುವ ಪ್ರಕ್ರಿಯೆ ಏನಲ್ಲ. ಕೇವಲ ಎರಡು ಶತಮಾನಗಳಿಂದೀಚೆಗೆ- ಅಂದರೆ, ಕೈಗಾರಿಕಾ ಕ್ರಾಂತಿಯ ನಂತರ ಆರ್ಥಿಕ ಪ್ರಗತಿ ನಿರಂತರವಾಗಿ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಹಿಂದೆಯೂ ಹಲವು ವೈಜ್ಞಾನಿಕ ಅನ್ವೇಷಣೆಗಳಾಗಿದ್ದವು. ಆದರೂ, ನಿರಂತರ ಆರ್ಥಿಕ ಪ್ರಗತಿ ಆಗಿರಲಿಲ್ಲ. ತಾತ್ಕಾಲಿಕವಾಗಿ ಒಂದಿಷ್ಟು ಪ್ರಗತಿಯಾಗುತ್ತಿತ್ತು. ಅದು ಅಲ್ಲಿಗೇ ನಿಂತು ಹೋಗುತ್ತಿತ್ತು, ಮುಂದುವರಿಯುತ್ತಿರಲಿಲ್ಲ. ಯಾಕೆ ಹೀಗೆ? ಅನ್ನುವ ಪ್ರಶ್ನೆಗೆ ಈ ವರ್ಷ ನೊಬೆಲ್ ಬಹುಮಾನ ಪಡೆದ ಮೂವರು ಅರ್ಥಶಾಸ್ತ್ರಜ್ಞರಾದ ಜೋಯೆಲ್ ಮೊಕಿರ್, ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹಾವಿಟ್ ಉತ್ತರ ಹುಡುಕಲು ಪ್ರಯತ್ನಿಸಿದ್ದಾರೆ.

ಜೋಯೆಲ್ ಮೊಕಿರ್ ಉತ್ತರಕ್ಕಾಗಿ ಚಾರಿತ್ರಿಕ ಮಾಹಿತಿಯನ್ನು ಶೋಧಿಸಿದ್ದಾರೆ. ಅದರಲ್ಲೂ ವಿಶೇಷವಾಗಿ, ಕೈಗಾರಿಕಾ ಕ್ರಾಂತಿಯ ಕಾಲದಲ್ಲಾದ ಅನ್ವೇಷಣೆಗಳನ್ನು ಪರಿಶೀಲಿಸಿದ್ದಾರೆ. ಅವರು ಬದಲಾವಣೆ ಅನ್ನುವುದು ಒಂದು ಸಾಂಸ್ಕೃತಿಕ ಪ್ರಕ್ರಿಯೆ, ವೈಜ್ಞಾನಿಕ ಹುಡುಕಾಟ, ಕುತೂಹಲ ಹಾಗೂ ಚಿಂತನೆಗಳ ಮುಕ್ತ ವಿನಿಮಯದ ಕಡೆಗಿನ ಒಂದು ಸಾಂಸ್ಕೃತಿಕ ಪಲ್ಲಟ ಎನ್ನುತ್ತಾರೆ. ಇಂತಹ ಬೌದ್ಧಿಕ ವಾತಾವರಣವಿದ್ದರೆ ಜ್ಞಾನದ ಕ್ರೋಡೀಕರಣ ಹಾಗೂ ಅದರ ಹರಡುವಿಕೆ ಸಾಧ್ಯವಾಗುತ್ತದೆ. ತಂತ್ರಜ್ಞಾನದ ನಿರಂತರ ಬೆಳವಣಿಗೆಗೆ ಅವಕಾಶ ತೆರೆದುಕೊಳ್ಳುತ್ತದೆ.

18ನೇ ಶತಮಾನದವರೆಗೆ ಆಗುತ್ತಿದ್ದ ಅನ್ವೇಷಣೆಗಳಿಂದ ನಿರಂತರ ಆರ್ಥಿಕ ಪ್ರಗತಿ ಸಾಧ್ಯವಾಗಿರಲಿಲ್ಲ. ಅನ್ವೇಷಣೆಗಳು, ಹೊಸ ಚಿಂತನೆಗಳನ್ನು, ಹೊಸ ತಂತ್ರಜ್ಞಾನಗಳನ್ನು ಬೆಳೆಸಲಿಲ್ಲ. ಉಪಯುಕ್ತ ಜ್ಞಾನ ನಿರಂತರವಾಗಿ ಹರಿದು ಬರುತ್ತಿದ್ದರೆ ಮಾತ್ರ ನಿರಂತರ ಬೆಳವಣಿಗೆ ಸಾಧ್ಯ ಎನ್ನುತ್ತಾರೆ ಮೊಕಿರ್. ‘ಉಪಯುಕ್ತ ಜ್ಞಾನ’ ಅನ್ನುವಾಗ ಮೊಕಿರ್ ಎರಡು ಬಗೆಯ ಜ್ಞಾನವನ್ನು ಗುರುತಿಸುತ್ತಾರೆ. ಒಂದು ಸೈದ್ಧಾಂತಿಕ ಜ್ಞಾನ. ಇದು ಪ್ರಾಕೃತಿಕ ನಿಯಮಗಳಿಗೆ ಒಂದು ವ್ಯವಸ್ಥಿತ ವಿವರಣೆ ಕೊಡುತ್ತದೆ. ಒಂದು ಪ್ರಕ್ರಿಯೆಗೆ ಕಾರಣವನ್ನು ವಿವರಿಸುತ್ತದೆ. ಮತ್ತೊಂದು ಪ್ರಾಯೋಗಿಕ ಜ್ಞಾನ. ಇದು ಸೈದ್ಧಾಂತಿಕ ಜ್ಞಾನವನ್ನು ಬಳಸುವುದಕ್ಕೆ ಬೇಕಾದ ಕ್ರಮವನ್ನು ತಿಳಿಸುತ್ತದೆ. ಅದಕ್ಕೆ ಬೇಕಾದ ಪ್ರಾಯೋಗಿಕ ಕ್ರಮವನ್ನು, ನಕ್ಷೆಯನ್ನು, ವಿವರಗಳನ್ನು ನೀಡುತ್ತದೆ.

ಇವೆರಡೂ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಿದರಷ್ಟೆ ಪ್ರಗತಿ ಸಾಧ್ಯ. ಕೇವಲ ವೈಜ್ಞಾನಿಕ ಚಿಂತನೆಗಳಷ್ಟೇ ಸಾಲುವುದಿಲ್ಲ. ಅದನ್ನು ಬಳಕೆಗೆ ತರಲು ಪ್ರಾಯೋಗಿಕ ಜ್ಞಾನವೂ ಬೇಕು. ಲಿಯೋನಾರ್ಡೊ ಡಾ ವಿಂಚಿ 15ನೇ ಶತಮಾನದಲ್ಲೇ ಹೆಲಿಕಾಪ್ಟರ್ ಚಿತ್ರವನ್ನು ರಚಿಸಿದ್ದ. ಆದರೆ, ಅದನ್ನು ನಿರ್ಮಿಸುವುದಕ್ಕೆ ಬೇಕಾದ ಎಂಜಿನಿಯರ್‌ಗಳು, ತಂತ್ರಜ್ಞಾನಿಗಳು ಆಗ ಇರಲಿಲ್ಲ.

ಕೇವಲ ಪ್ರಾಯೋಗಿಕ ಜ್ಞಾನವೂ ಸಾಲುವುದಿಲ್ಲ. ಕಮ್ಮಾರನಿಗೆ ಕಬ್ಬಿಣವನ್ನು ಕಾಯಿಸಿ ತಟ್ಟುವ ಮೂಲಕ ಹತಾರಗಳನ್ನು ಮಾಡಬಹುದೆನ್ನುವ ಪ್ರಾಯೋಗಿಕ ಜ್ಞಾನ ಪರಂಪರಾಗತವಾಗಿ ಬಂದಿದೆ. ಅದರ ಹಿಂದಿನ ವಿಜ್ಞಾನ ಅವನಿಗೆ ತಿಳಿದಿರುವುದಿಲ್ಲ. ವೈಜ್ಞಾನಿಕ ಹಾಗೂ ಪ್ರಾಯೋಗಿಕ ಜ್ಞಾನ ಪರಸ್ಪರ ವ್ಯವಹರಿಸಿದರೆ ಮಾತ್ರ ನಿರಂತರ ಬೆಳವಣಿಗೆ ಸಾಧ್ಯ. ರಸವಾದಿಗೆ ಸೀಸದಿಂದ ಚಿನ್ನವನ್ನು ತಯಾರಿಸುವುದಕ್ಕೆ ಸಾಧ್ಯವಿಲ್ಲವೆಂಬ ವೈಜ್ಞಾನಿಕ ತಿಳಿವು ಇದ್ದಿದ್ದರೆ ಹಲವು ಶತಮಾನಗಳ ಶ್ರಮ ವ್ಯರ್ಥವಾಗುತ್ತಿರಲಿಲ್ಲ.

ಕೈಗಾರಿಕಾ ಕ್ರಾಂತಿಗೆ ಮೊದಲು ಇವೆರಡು ಜ್ಞಾನಶಾಖೆಗಳು ಪ್ರತ್ಯೇಕವಾಗಿದ್ದವು. ತಾಂತ್ರಿಕ ಅನ್ವೇಷಣೆಗಳು ಪ್ರಾಯೋಗಿಕ ಜ್ಞಾನದ ನೆಲೆಯಲ್ಲಿ ನಡೆಯುತ್ತಿದ್ದವು. ಬಹುತೇಕ ಅನುಭವಜನ್ಯ ಜ್ಞಾನವಾಗಿತ್ತು. ಇನ್ನು ಪಂಡಿತರು ಹಾಗೂ ದಾರ್ಶನಿಕರು ಗಣಿತ ಹಾಗೂ ಭೌತಶಾಸ್ತ್ರದ ಸಿದ್ಧಾಂತಗಳನ್ನು ಬೆಳೆಸಿದರು. ಆದರೆ, ಅವುಗಳನ್ನು ಪ್ರಾಯೋಗಿಕ ಸಮಸ್ಯೆಗಳಿಗೆ ಅನ್ವಯಿಸಲು ಪ್ರಯತ್ನಿಸಲಿಲ್ಲ. ಎರಡು ಜ್ಞಾನ ಶಾಖೆಗಳು ಪ್ರತ್ಯೇಕವಾಗಿಯೇ ಉಳಿದಿದ್ದವು. ಇದು ಅನ್ವೇಷಣೆಗೆ ಅಡ್ಡಿಯಾಯಿತು. ಹದಿನೆಂಟನೆಯ ಶತಮಾನದ ನಂತರ ಇವು ಪರಸ್ಪರ ಪೂರಕವಾಗಿ ಕೆಲಸ ಮಾಡತೊಡಗಿದವು. ನಂತರವಷ್ಟೇ ಆರ್ಥಿಕ ಪ್ರಗತಿ ಸಾಧ್ಯವಾಯಿತು ಎನ್ನುತ್ತಾರೆ ಮೊಕಿರ್.

ವೈಜ್ಞಾನಿಕ ಅನ್ವೇಷಣೆಗಳು ಹಾಗೂ ಅವುಗಳ ಪ್ರಾಯೋಗಿಕ ಬಳಕೆ ಒಂದನ್ನೊಂದು ಬೆಳೆಸುತ್ತವೆ. ವೈಜ್ಞಾನಿಕ ಅನ್ವೇಷಣೆಗಳು ಪ್ರಾಯೋಗಿಕವಾಗಿ ಉಪಯುಕ್ತವಾದರೆ, ಅದು ಇನ್ನಷ್ಟು ವೈಜ್ಞಾನಿಕ ಅನ್ವೇಷಣೆಯನ್ನು ಪ್ರೋತ್ಸಾಹಿಸುತ್ತವೆ. ಹೊಸ ಅನ್ವೇಷಣೆಗಳಿಂದ ಬಳಕೆಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಉತ್ಪನ್ನಗಳು ಹಾಗೂ ಉತ್ಪಾದನಾ ವಿಧಾನಗಳು ಸುಧಾರಿಸುತ್ತವೆ. ಪರಿಣಾಮವಾಗಿ ನಿರಂತರ ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಇದು ಸಾಧ್ಯವಾಗಬೇಕಾದರೆ ಸಮಾಜ ಹೊಸ ಚಿಂತನೆಗಳಿಗೆ, ಬದಲಾವಣೆಗೆ ತೆರೆದುಕೊಳ್ಳಬೇಕು.

ತಾಂತ್ರಿಕ ಬದಲಾವಣೆ ತರುವ ಪ್ರಗತಿಯಲ್ಲಿ ಹಲವರು ವಿಜಯಿಗಳಾಗುತ್ತಾರೆ. ಕೆಲವರು ಸೋಲುತ್ತಾರೆ. ಹೊಸ ಅನ್ವೇಷಣೆಗಳು ಹಳೆಯ ತಂತ್ರಜ್ಞಾನವನ್ನು ಹೊರದಬ್ಬುತ್ತವೆ. ಚಾಲ್ತಿಯಲ್ಲಿರುವ ಉತ್ಪನ್ನಗಳನ್ನು ಹಾಗೂ ಉತ್ಪಾದನಾ ವಿಧಾನಗಳನ್ನು ನಾಶಪಡಿಸುತ್ತವೆ. ಸೋಲುವ, ಅಭದ್ರತೆಯ ಆತಂಕ ಜನರನ್ನು ಕಾಡುತ್ತದೆ. ಸಹಜವಾಗಿಯೇ ಜನ ಹೊಸ ತಂತ್ರಜ್ಞಾನವನ್ನು ವಿರೋಧಿಸುತ್ತಾರೆ. ಪುನರುಜ್ಜೀವನ ಚಳವಳಿಯು ಸಮಾಜವನ್ನು ಬದಲಾವಣೆಗೆ ಹೆಚ್ಚು ಹೆಚ್ಚು ತೆರೆದುಕೊಳ್ಳುವಂತೆ ಮಾಡಿತು. ಬ್ರಿಟಿಷ್ ಪಾರ್ಲಿಮೆಂಟ್ ಇತ್ಯಾದಿ ಸಂಸ್ಥೆಗಳು ಬದಲಾವಣೆಯ ಬೆಂಬಲಕ್ಕೆ ನಿಂತವು. ಈ ಎಲ್ಲಾ ಬೆಳವಣಿಗೆಗಳು, ಬದಲಾವಣೆಗೆ, ಹಾಗೂ ನಿರಂತರ ಪ್ರಗತಿಗಿದ್ದ ಹಲವು ಅಡ್ಡಿಗಳನ್ನು ನಿವಾರಿಸಿದವು. ನಿರಂತರ ಪ್ರಗತಿ ಮೊದಲಿಗೆ ಬ್ರಿಟನ್ನಿನಲ್ಲಿ ಕಾಣಿಸಿಕೊಂಡಿತು. ಕ್ರಮೇಣ ಅದು ಜಾಗತಿಕ ವಿದ್ಯಮಾನವಾಯಿತು. ಜನರ ಜೀವನಮಟ್ಟವೂ ಸುಧಾರಿಸತೊಡಗಿತು.

ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹಾವಿಟ್ ತಾಂತ್ರಿಕ ಬೆಳವಣಿಗೆಯಿಂದ ನಿರಂತರ ಆರ್ಥಿಕ ಪ್ರಗತಿ ಸಾಧ್ಯ ಎಂದು ತೋರಿಸುವುದಕ್ಕೆ ವಿಭಿನ್ನ ದಾರಿ ಹಿಡಿದರು. ಅವರು ಅದಕ್ಕಾಗಿ ಆರ್ಥಿಕ ಮಾದರಿಗಳನ್ನು ರಚಿಸಿದರು. ಅವರು ಶುಂಪಿಟರ್ ಅವರ ಕ್ರಿಯೇಟಿವ್ ಡಿಸ್ಟ್ರಕ್ಷನ್ - ಸೃಜನಶೀಲ ವಿನಾಶದ ಪರಿಕಲ್ಪನೆಯನ್ನು ಬಳಸಿಕೊಂಡರು ಹಾಗೂ ಸುಧಾರಿಸಿದರು. ಉದ್ದಿಮೆಗಳು ಯಾವಾಗಲೂ ಉತ್ತಮ ಗುಣಮಟ್ಟದ ಉತ್ಪನ್ನಗಳು ಹಾಗೂ ಸುಧಾರಿತ ಉತ್ಪಾದನಾ ವಿಧಾನದ ಮೇಲೆ ಹೂಡಿಕೆ ಮಾಡುತ್ತವೆ. ಸಹಜವಾಗಿಯೇ ಕಡಿಮೆ ಗುಣಮಟ್ಟದ ಉತ್ಪನ್ನಗಳು ಹಾಗೂ ತಂತ್ರಜ್ಞಾನ ಮಾರುಕಟ್ಟೆಯಿಂದ ನಿರ್ಗಮಿಸಬೇಕಾಗುತ್ತದೆ. ನೋಕಿಯಾ ಮೊಬೈಲ್ ಒಂದು ಕಾಲದಲ್ಲಿ ಮಾರುಕಟ್ಟೆಯನ್ನು ಆಳುತ್ತಿತ್ತು. ಈಗ ಆ್ಯಪಲ್, ಸ್ಯಾಮ್ಸಂಗ್ ಇವೆಲ್ಲಾ ಮಾರುಕಟ್ಟೆಯನ್ನು ಆಳುತ್ತಿವೆ. ಆರ್ಥಿಕತೆ ಅನ್ನುವುದು ಒಂದು ಏಣಿ ಇದ್ದ ಹಾಗೆ. ಪ್ರತಿ ಅನ್ವೇಷಣೆಯೂ ಆರ್ಥಿಕತೆಯನ್ನು ಒಂದು ಮೆಟ್ಟಿಲು ಮೇಲಕ್ಕೆ ಒಯ್ಯುತ್ತದೆ. ಸೃಜನಶೀಲವಾದದ್ದು ಯಾಕೆಂದರೆ, ಇದು ಹೊಸ ಅನ್ವೇಷಣೆಯಿಂದ ಸಾಧ್ಯವಾಗಿರುವ ಪ್ರಕ್ರಿಯೆ. ವಿನಾಶಕಾರಿಯಾದದ್ದು ಯಾಕೆಂದರೆ, ಹಳೆಯ ಉತ್ಪನ್ನಗಳನ್ನು ಹಾಗೂ ಉತ್ಪಾದನಾ ಪ್ರಕ್ರಿಯೆಯನ್ನು ಇದು ಮಾರುಕಟ್ಟೆಯಿಂದ ಹೊರದಬ್ಬಿದೆ; ಅವುಗಳಿಗಿರುವ ವಾಣಿಜ್ಯ ಮೌಲ್ಯವನ್ನು ಕಳೆದಿದೆ. ಈ ಪ್ರಕ್ರಿಯೆ ನಮ್ಮ ಸಮಾಜವನ್ನು ಮೂಲಭೂತವಾಗಿ ಬದಲಿಸಿದೆ. ಎರಡು ಶತಮಾನಗಳಲ್ಲಿ ಬಹುತೇಕ ಎಲ್ಲವೂ ಬದಲಾಗಿದೆ.

ಹೊಸ ಅನ್ವೇಷಣೆಗಳಾಗುತ್ತಿದ್ದಂತೆ ಹಳೆಯ ತಂತ್ರಜ್ಞಾನ ಹೋಗಿ, ಹೊಸತು ಬರುತ್ತದೆ. ಉತ್ಪಾದಕತೆ ಹೆಚ್ಚುತ್ತದೆ. ಹೆಚ್ಚಿನ ಬೆಳವಣಿಗೆ ಸಾಧ್ಯವಾಗುತ್ತದೆ. ಬೆಳವಣಿಗೆ ವೇಗ ಹೆಚ್ಚಬೇಕಾದರೆ ಅದಕ್ಕೆ ಪೂರಕವಾದ ಶಿಕ್ಷಣ ಇರಬೇಕು. ಅದಕ್ಕೆ ಅನುಕೂಲವಾದ ನೀತಿಗಳನ್ನು ಸರ್ಕಾರ ರೂಪಿಸಬೇಕು. ಆರೋಗ್ಯಕರ ಸ್ಪರ್ಧೆಯಿರಬೇಕು. ಒಟ್ಟಾರೆಯಾಗಿ ಹೇಳುವುದಾದರೆ, ಅನ್ವೇಷಣೆಯ ಸಂಸ್ಕೃತಿ ಇರಬೇಕು. ಇಲ್ಲದೇ ಹೋದರೆ ಪ್ರಗತಿ ನಿಧಾನವಾಗುತ್ತದೆ.

ಕೈಗಾರಿಕೀಕರಣಗೊಂಡ ದೇಶಗಳಲ್ಲಿ ಆರ್ಥಿಕತೆ ಸ್ಥಿರವಾಗಿರುವಂತೆ ಕಾಣುತ್ತದೆ. ಆದರೆ, ಆಳದಲ್ಲಿ ಸ್ಥಿರತೆ ಇರುವುದಿಲ್ಲ. ಪ್ರತಿವರ್ಷ ಹೊಸ ಹೊಸ ಕಂಪನಿಗಳು ಹುಟ್ಟಿಕೊಳ್ಳುತ್ತಿರುತ್ತವೆ. ಎಷ್ಟೋ ಉದ್ದಿಮೆಗಳು ದಿವಾಳಿಯಾಗುತ್ತಿರುತ್ತವೆ. ಒಬ್ಬರು ಇನ್ನೊಬ್ಬರ ಮಾರುಕಟ್ಟೆಯನ್ನು ಕಬಳಿಸುತ್ತಿರುತ್ತಾರೆ. ವ್ಯಾಪಾರದ ಕಳ್ಳತನ ನಡೆಯುತ್ತಲೇ ಇರುತ್ತದೆ. ಈ ಪ್ರಕ್ರಿಯೆಯಲ್ಲಿ ಬರೀ ಕಂಪನಿಗಳು ಮಾತ್ರ ನಷ್ಟ ಅನುಭವಿಸುವುದಿಲ್ಲ. ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಾರೆ; ಅಭದ್ರತೆಯ ಆತಂಕದಲ್ಲಿ ಇರುತ್ತಾರೆ. ಆ ಆತಂಕದಿಂದ ಬದಲಾವಣೆಯನ್ನು ವಿರೋಧಿಸುತ್ತಾರೆ. ಅದಕ್ಕೆ ಪರಿಹಾರವೆಂದರೆ, ಹಾಗೆ ಕೆಲಸ ಕಳೆದುಕೊಂಡವರಿಗೆ ಉದ್ಯೋಗ ಕಂಡುಕೊಳ್ಳಲು ನೆರವಾಗಬೇಕು. ಉದ್ಯೋಗದ ರಕ್ಷಣೆಗಿಂತ ಉದ್ಯೋಗಿಗಳ ರಕ್ಷಣೆಗೆ ಗಮನಕೊಡಬೇಕು. ಇಂತಹ ಕ್ರಮಗಳು ಬದಲಾವಣೆಗೆ ಇರುವ ವಿರೋಧವನ್ನು ತಗ್ಗಿಸುವುದಕ್ಕೂ ನೆರವಾಗುತ್ತವೆ.

ತಂತ್ರಜ್ಞಾನ ಬೆಳೆದಂತೆ ಪ್ರಗತಿ ಖಾತರಿಯೇನಲ್ಲ. ಇತ್ತೀಚಿನ ದಿನಗಳಲ್ಲಿ ಹಲವು ಕಡೆಗಳಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಾಗುತ್ತಿದ್ದರೂ, ಬೆಳವಣಿಗೆ ಕುಸಿಯುತ್ತಿರುವುದನ್ನೂ ನೋಡಬಹುದು. ಕೆಲವೇ ಪ್ರಬಲ ಕಂಪನಿಗಳು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುವುದು, ಶೈಕ್ಷಣಿಕ ಸ್ವಾತಂತ್ರ್ಯಕ್ಕಿರುವ ಅಡ್ಡಿ ಇವೆಲ್ಲ ಪ್ರಗತಿಯನ್ನು ಕುಂಠಿತಗೊಳಿಸುತ್ತಿವೆ. ಪ್ರಗತಿ ಸಾಧ್ಯವಾಗಬೇಕಾದರೆ ಇಂತಹ ಹಲವು ಅಡ್ಡಿಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಗಬೇಕು. ನಿರಂತರ ಪ್ರಗತಿಯಿಂದ ಮನುಕುಲದ ಒಳಿತು ಹೆಚ್ಚುತ್ತದೆ. ಜೊತೆಗೆ ಹಲವು ದುಷ್ಪರಿಣಾಮಗಳೂ ಆಗುತ್ತಿರುತ್ತವೆ. ಉದಾಹರಣೆಗೆ, ಹವಾಮಾನ ಬದಲಾವಣೆ, ಮಾಲಿನ್ಯ, ಅಸಮಾನತೆ, ನೈಸರ್ಗಿಕ ಸಂಪನ್ಮೂಲದ ಅಪಬಳಕೆ, ಮುಂತಾದವು. ಹಾಗಾಗಿ ಅನ್ವೇಷಣೆಯನ್ನು ಪ್ರೋತ್ಸಾಹಿಸುವುದರ ಜೊತೆ ಜೊತೆಗೆ ಇಂತಹ ನೇತ್ಯಾತ್ಮಕ ಪರಿಣಾಮಗಳ ವಿರುದ್ಧವೂ ನೀತಿಗಳನ್ನು ರೂಪಿಸಬೇಕಾಗುತ್ತದೆ.

ಬಂಡವಾಳದ ಕ್ರೋಡೀಕರಣದಿಂದಷ್ಟೇ ಬೆಳವಣಿಗೆ ಆಗಿಬಿಡುವುದಿಲ್ಲ. ಅನ್ವೇಷಣೆ ಅಂದರೆ ಕೇವಲ ಹಣದ ಹೂಡಿಕೆ ಅಲ್ಲ, ಚಿಂತನೆಗಳು ಅರಳುವುದಕ್ಕೆ ಬೇಕಾದ ಪರಿಸರವನ್ನು ನಿರ್ಮಿಸಬೇಕು. ಹೀಗೆ ತಂತ್ರಜ್ಞಾನ ಹಾಗೂ ನಿರಂತರ ಪ್ರಗತಿಯ ಬಗ್ಗೆ ಹಲವು ಒಳನೋಟಗಳನ್ನು ಈ ಮೂವರ ಅಧ್ಯಯನ ನೀಡುತ್ತದೆ.

ವಾಚಕರ ವಾಣಿ

ಸರ್ಕಾರದ ನಿಲುವಿಗೆ ಉಪೇಕ್ಷೆ ಸರಿಯೆ?

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳದಿರುವ ಇನ್ಫೊಸಿಸ್‌ನ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ದಂಪತಿಯ ನಿರ್ಧಾರ ವೈಯಕ್ತಿಕವಾದುದು. ಆದರೆ, ಸಮಾಜದ ಪ್ರತಿಷ್ಠಿತ ಸ್ಥಾನದಲ್ಲಿರುವವರ, ಖ್ಯಾತನಾಮರ ನಡೆ-ನುಡಿ, ನಿಲುವು-ನಿರ್ಧಾರಗಳನ್ನು ಲಕ್ಷಾಂತರ ಜನ ಗಮನಿಸುತ್ತಾ ಅನುಕರಿಸುತ್ತಾರೆ. ಕಾನೂನಾತ್ಮಕವಾಗಿ ಅವರ ನಿರ್ಧಾರ ಪ್ರಶ್ನಾತೀತ. ಆದರೆ, ಸಮಾಜದ ಹಿತದೃಷ್ಟಿಯಿಂದ ಅವರ ನಡೆ ಇತರರಿಗೆ ಮಾದರಿಯಾಗಬೇಕೆಂದು ನಾಗರಿಕ ಸಮಾಜ ಅಪೇಕ್ಷಿಸುವುದು ಸಹಜ. ಪ್ರಜಾಸತ್ತಾತ್ಮಕವಾಗಿ ರಚಿತವಾದ ಸರ್ಕಾರದ ನಿಲುವನ್ನು ಸಾರ್ವಜನಿಕವಾಗಿ ವಿರೋಧಿಸುವುದು, ಧಿಕ್ಕರಿಸುವುದಕ್ಕಿಂತಲೂ ಜವಾಬ್ದಾರಿಯುತ ನಾಗರಿಕರಾಗಿ ಗೌರವಿಸಿದ್ದರೆ, ಅವರ ಘನತೆ ಮತ್ತಷ್ಟು ಹೆಚ್ಚುತ್ತಿತ್ತು.

ಟಿ.ವಿ.ಬಿ. ರಾಜನ್, ಬೆಂಗಳೂರು

ಬೇಲಿಯೇ ಎದ್ದು ಹೊಲ ಮೇಯ್ದರೆ...

ವಿಭಾಗಮಟ್ಟದ ಪಿಯು ವಿದ್ಯಾರ್ಥಿಗಳ ಕಬಡ್ಡಿ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಜಿಲ್ಲಾಧಿಕಾರಿ ಜತೆ ತಂಡವೊಂದರ ಪರವಾಗಿ ಬಾಜಿಕಟ್ಟಿ ₹500 ಕಳೆದುಕೊಂಡಿರುವ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಹೇಳಿದ್ದಾರೆ. ಆಟವನ್ನು ಸವಿಯುವ ಹಾಗೂ ಮಕ್ಕಳಿಗೆ ಪ್ರೋತ್ಸಾಹ ನೀಡುವ ಭರದಲ್ಲಿ ಬಾಜಿಕಟ್ಟಿದ್ದನ್ನು ಗೃಹ ಸಚಿವರಾಗಿ ಬಹಿರಂಗವಾಗಿ ಹೇಳಿದ್ದು ಎಷ್ಟು ಸರಿ? ಜೂಜು ನಿಯಂತ್ರಿಸಬೇಕಾದ ಸಚಿವರೇ ಹೊಣೆಗಾರಿಕೆ ಮರೆತು ಹೀಗೆ ನಡೆದುಕೊಂಡಿರುವುದು ಸರಿಯಲ್ಲ. ಕ್ರಿಕೆಟ್ ಸೇರಿದಂತೆ, ಆನ್‌ಲೈನ್ ಗೇಮ್‌ನ ಬೆಟ್ಟಿಂಗ್ ದಂಧೆ ಬಗ್ಗೆ ಸಚಿವರಿಗೂ ಗೊತ್ತಿದೆ. ಹೀಗಿದ್ದರೂ ಸಾರ್ವಜನಿಕ ಪರಿಣಾಮ ಲೆಕ್ಕಿಸದೆ ಈ ರೀತಿಯ ನಡವಳಿಕೆ ತೋರುವುದು ವಿಷಾದನೀಯ.

ದೊಡ್ಡಿಶೇಖರ್, ಆನೇಕಲ್

ರಸ್ತೆಯ ಗಂಡಾಗುಂಡಿ ಒಂದೆರಡಲ್ಲ...

ರಸ್ತೆಯ ಮೂಲ ಉದ್ದೇಶ ಸಂಚಾರ ಸಾರಿಗೆಯೇ ಹೊರತು ಶಕ್ತಿ ಪ್ರದರ್ಶನವಲ್ಲ ಎಂಬ ಧ್ವನಿ ಬಲಗೊಳ್ಳುತ್ತಿದೆ. ಪ್ರಸ್ತುತ ರಸ್ತೆ ಬರೀ ರಸ್ತೆಯಾಗಿ ಉಳಿದಿಲ್ಲ. ನಾನಾ ಬಗೆಯ ಸಾಮಾಜಿಕ ನೆಮ್ಮದಿ ಕದಡುವ ಅಖಾಡವಾಗಿ, ಕಸ ಎಸೆದು ಪರಿಸರ ಮಾಲಿನ್ಯ ಉಂಟು ಮಾಡುವ ತಿಪ್ಪೆಯಾಗಿ, ಪಟಾಕಿ ಸಿಡಿಸಿ ವಾಯುಮಾಲಿನ್ಯ, ಶಬ್ದಮಾಲಿನ್ಯ ಉಂಟು ಮಾಡುವ ಮಾಲಿನ್ಯಕಾರಕ ತಾಣವಾಗಿ, ಧ್ವನಿವರ್ಧಕ ಹಾಕಿಕೊಂಡು ವ್ಯಾಪಾರಕ್ಕಿಳಿಯುವ ವ್ಯಾಪಾರಿಗಳಿಂದಾಗಿ ವಾಹನಗಳ ಅಪಘಾತಕ್ಕೂ ಕಾರಣವಾಗುವ ಅಪಘಾತ ವಲಯವಾಗಿ ಪರಿವರ್ತನೆ ಹೊಂದಿದೆ. ಆದ್ದರಿಂದ ಸರ್ಕಾರ ರಸ್ತೆ ಸುರಕ್ಷತೆಗೆ ಒತ್ತು ನೀಡಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ಬೇಕು

ಸರ್ಕಾರವು ಸಂಘಟಿತ ವಲಯದ ಮಹಿಳೆಯರಿಗೆ ಮುಟ್ಟಿನ ರಜೆಯ ಹಕ್ಕು ನೀಡುತ್ತಿರುವುದು ಶ್ಲಾಘನೀಯ. ಮುಟ್ಟಿನ ರಜೆಯನ್ನು ಕಾಲೇಜು ವಿದ್ಯಾರ್ಥಿನಿಯರಿಗೂ ವಿಸ್ತರಿಸಿದರೆ ಅನುಕೂಲ. ವಿದ್ಯಾರ್ಥಿನಿಯರು ಋತುಚಕ್ರದ ದಿನಗಳಲ್ಲಿ ಓದಿನತ್ತ ನಿರಾಸಕ್ತಿ ತಾಳುತ್ತಾರೆ. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ರಕ್ತಹೀನತೆಯಿಂದ ಬಳಲುತ್ತಿರುವ ವಿದ್ಯಾರ್ಥಿನಿಯರಂತೂ ಸಾಕಷ್ಟು ಯಾತನೆ ಅನುಭವಿಸುತ್ತಾರೆ. ಈಗಾಗಲೇ, ಕೇರಳ ಸರ್ಕಾರ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ಘೋಷಿಸಿದೆ. ಕರ್ನಾಟಕ ಸರ್ಕಾರವೂ ಈ ಕುರಿತು ಸಕಾರಾತ್ಮಕ ಕ್ರಮ ಕೈಗೊಳ್ಳಬೇಕಿದೆ.

ಲಿಖಿತ, ಅಜ್ಜಂಪುರ

ಜ್ಞಾನ ಅಂಚೆ: ಜಿಎಸ್‌ಟಿ ಕಡಿತಗೊಳಿಸಿ

ಕೇಂದ್ರ ಸರ್ಕಾರ ಇತ್ತೀಚೆಗೆ ಜಿಎಸ್‌ಟಿ ಸ್ಲ್ಯಾಬ್‌ಗಳನ್ನು ಪರಿಷ್ಕರಿಸಿದೆ. ಇದರಿಂದ ಜನಸಾಮಾನ್ಯರಿಗೆ ಅನುಕೂಲವೂ ಆಗಿದೆ. ಕಳೆದ ಮೇ ತಿಂಗಳಿನಲ್ಲಿ ‘ಜ್ಞಾನ ಅಂಚೆ’ ಸೇವೆ ಆರಂಭವಾಗಿತ್ತು. ವಿದ್ಯಾರ್ಥಿಗಳು, ಸ್ಪರ್ಧಾರ್ಥಿಗಳು ಹಾಗೂ ಸಾಹಿತ್ಯಾಸಕ್ತರನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದ ಯೋಜನೆ ಇದು. ಜ್ಞಾನ ಅಂಚೆಯ ಜಿಎಸ್‌ಟಿ ಪ್ರಮಾಣ ಶೇ 18ರಷ್ಟಿತ್ತು. ಅದನ್ನು ಯಥಾವತ್ತಾಗಿ ಮುಂದುವರಿಸಲಾಗಿದೆ. ಇದು ನಿಜಕ್ಕೂ ಬೇಸರದ ಸಂಗತಿ.

ವಾಣಿಜ್ಯ ಉದ್ದೇಶದ ವಸ್ತುಗಳನ್ನು ಕಳುಹಿಸಲು ‘ಇಂಡಿಯಾ ಪೋಸ್ಟ್ ಪಾರ್ಸಲ್ ಸರ್ವೀಸ್’ ಹಾಗೂ ‘ಸ್ಪೀಡ್ ಪೋಸ್ಟ್’ ಸೇವೆಗಳಿವೆ. ಈ ಸೇವೆಗಳಿಗೂ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ವಾಣಿಜ್ಯ ಉದ್ದೇಶದ ವಸ್ತುಗಳು ಹಾಗೂ ಜ್ಞಾನ ಪ್ರಸಾರದ ಪುಸ್ತಕಗಳ ರವಾನೆಗೆ ಒಂದೇ ರೀತಿಯ ತೆರಿಗೆ ವಿಧಿಸುವುದು ಎಷ್ಟರಮಟ್ಟಿಗೆ ಸರಿ?

ಅಶೋಕ ಚಿಕ್ಕಪರಪ್ಪಾ, ಬೆಂಗಳೂರು

ಕಣ್ಮರೆಯಾಗುತ್ತಿವೆ ಸಾಮಾಜಿಕ ಮೌಲ್ಯಗಳು

ಸಾಮಾಜಿಕ ಮಾಧ್ಯಮವು ಸಾಮಾಜಿಕ ವಿಚಾರಗಳನ್ನು ಅರಿತುಕೊಳ್ಳುವುದರಲ್ಲಿ ಹಿಂದೆ ಬಿದ್ದಿದೆ ಎಂದರೆ ಅತಿಶಯೋಕ್ತಿಯಲ್ಲ. ಸಮಾಜದಲ್ಲಿ ಯಾವುದೇ ಘಟನೆಗಳು ಜರುಗಿದರೂ ಸೂರ್ಯೋದಯಕ್ಕೂ ಮುಂಚೆಯೇ ಅದು ಜನಪ್ರಿಯತೆಯ ಪೋಷಾಕು ತೊಟ್ಟು ರಾರಾಜಿಸುತ್ತದೆ. ಜಾಲತಾಣಗಳ ನಿರ್ವಾಹಕರು, ಫಾಲೋವರ್ಸ್ ಮತ್ತು ನೋಡುಗರ ಎಣಿಕೆಯ ಗುಂಗಿನಲ್ಲಿ ತೇಲುತ್ತಾರೆ. ಆದರೆ, ಸಮಾಜದ ಮೇಲೆ ಇದು ಯಾವ ರೀತಿ ಪರಿಣಾಮ ಬೀರುತ್ತದೆ ಎಂಬ ವಿವೇಕ ಅವರಿಗೆ ಇರುವುದಿಲ್ಲ.

ಚಿಕ್ಕಮಕ್ಕಳಿಂದ ಹಿಡಿದು ಇಳಿ ವಯಸ್ಸಿನವರೂ ಸಾಮಾಜಿಕ ಮಾಧ್ಯಮ ನೋಡುತ್ತಾರೆ. ಹಾಗಾಗಿ, ಬಿತ್ತರಿಸುವ ವಿಷಯವು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂತಿರಬೇಕು ಎನ್ನುವ ಸಾಮಾನ್ಯ ಪರಿಜ್ಞಾನವನ್ನು ನಿರ್ವಾಹಕರು ಬೆಳೆಸಿಕೊಳ್ಳಬೇಕು.

ಮಲ್ಲಿಕಾರ್ಜುನ್ ತೇಲಿ, ಜಮಖಂಡಿ

ಜಾಲತಾಣ

ದೀಪಾವಳಿ ಎನ್ನೋಣ

ಎಲ್ಲರಲ್ಲೂ ಒಂದು ಮನವಿ. ಈ ಹಬ್ಬ ದೀಪಾವಳಿ. ಇದನ್ನು ‘ದಿವಾಳಿ’ ಎಂದು ಕರೆಯಬೇಡಿ. ದಿವಾಳಿ ಎಂದರೆ ನಷ್ಟ ಮತ್ತು ಪಾಪರ್ ಆಗುವುದು ಎಂದರ್ಥ. ಆದುದರಿಂದ, ದಯವಿಟ್ಟು ದೀಪಾವಳಿ ಎಂದೇ ಕರೆಯಿರಿ.

ಸತ್ಯಮಂಗಲ ಮಹಾದೇವ, ಕವಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ನೆರೆ ಹಾನಿ ಸಂತ್ರಸ್ತರಿಗೆ ಬಿಡಿಗಾಸು ನೀಡಲು ಸಾಧ್ಯವಾಗದೆ ಸರ್ಕಾರ ಪರದಾಡುತ್ತಿದೆ. ಸಂತ್ರಸ್ತರ ನೋವಿಗೆ ಸ್ಪಂದಿಸದೆ ಅನ್ಯಾಯ ಮಾಡುತ್ತಿದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶನಿವಾರ, 21-10-2000

• 45 ಕೋಟಿ ರೂಪಾಯಿ ಗೆದ್ದ ದೆಹಲಿ ಕನ್ನಡಿಗ

ನವದೆಹಲಿ, ಅ. 20 (ಪಿಟಿಐ)- ಮುಂಬಯಿಯ ಹರ್ಷವರ್ಧನ್ ನವಾಟೆ ಅವರು, ಸ್ಟಾರ್ ಟಿ.ವಿಯ ‘ಕೌನ್ ಬನೇಗಾ ಕರೋಡ್ ಪತಿ’ (ಕೆಬಿಸಿ) ಮೂಲಕ ಕೋಟ್ಯಧೀಶನಾದ ಬೆನ್ನಲ್ಲೇ ಇಲ್ಲಿನ ಮೊಹಮ್ಮದ್ ಕರೀಮ್ ಭಾಷಾ, ನವಾಟೆಗಿಂತ ಹಲವು ಹೆಜ್ಜೆ ಮುಂದೆ ಹೋಗಿ 45 ಕೋಟಿ ರೂಪಾಯಿಗಳಿಗೆ ಒಡೆಯರಾಗಿದ್ದಾರೆ.

ದೆಹಲಿಯಲ್ಲಿ ಸಂಸದೀಯ ವರದಿಗಾರರಾಗಿರುವ, ಮೂಲತಃ ಕರ್ನಾಟಕದ ಬಳ್ಳಾರಿಯವರಾದ ಭಾಷಾ, ಫ್ರೀಲೊಟ್ಟೊ ಡಾಟ್ ಕಾಮ್‌ನ ‘ಸೂಪರ್‌ಬಕ್ಸ್’ ಜಾಕ್‌ಪಾಟ್ ಕಾರ್ಯಕ್ರಮದಲ್ಲಿ ಹತ್ತು ದಶಲಕ್ಷ ಅಮೆರಿಕನ್ ಡಾಲರ್ (ಸುಮಾರು 45 ಕೋಟಿ ರೂಪಾಯಿ) ಗೆದ್ದಿದ್ದಾರೆ.

• ಕಾಶ್ಮೀರ ಉಗ್ರರ ಜತೆ ಚರ್ಚೆಗೆ ಸಿದ್ಧ: ಅಡ್ವಾಣಿ

ನವದೆಹಲಿ, ಅ. 20 (ಯುಎನ್‌ಐ)- ಶಸ್ತ್ರಾಸ್ತ್ರ ಬದಿಗಿಟ್ಟು ಬರುವ ಕಾಶ್ಮೀರ ಕಣಿವೆಯ ಉಗ್ರಗಾಮಿಗಳೊಂದಿಗೆ ಶಾಂತಿ ಮಾತುಕತೆ ನಡೆಸಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಗೃಹ ಸಚಿವ ಎಲ್.ಕೆ. ಅಡ್ವಾಣಿ ಪುನರುಚ್ಚರಿಸಿದರು.

ಗೃಹ ಸಚಿವ ಖಾತೆಯ ಸಂಸತ್ ಸದಸ್ಯರ ಸಲಹಾ ಸಮಿತಿಯಲ್ಲಿ ಅವರು ಮಾತನಾಡಿದರು.

75 ವರ್ಷಗಳ ಹಿಂದೆ

ಶನಿವಾರ, 21-10-1950

• ಇಂದೂರಿನಲ್ಲಿ ಭಾರಿ ಬೆಂಕಿ ಅನಾಹುತ

ಇಂದೂರು, ಅ. 20- ಕಳೆದ ರಾತ್ರಿ ಇಂದೂರಿನ ಮೂರು ಸಾಗುವಾನಿ ಡಿಪೋಗಳಿಗೆ ಬೆಂಕಿ ಬಿದ್ದ ಪರಿಣಾಮವಾಗಿ ಜ್ವಾಲೆ ಗಗನ ಮುಟ್ಟಿ, ಹೊಗೆ ನಗರವನ್ನೆಲ್ಲಾ ಆವರಿಸಿತ್ತು. ಇಂದೂರಿನ ಅಹಲ್ಯಾಪುರ ಪ್ರದೇಶದಲ್ಲಿ ಉಂಟಾದ ಈ ಬೆಂಕಿ ಅನಾಹುತದಿಂದ ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಗಿದೆ.

ಪೊಲೀಸರು ಮತ್ತು ಬೆಂಕಿ ಆರಿಸುವ ಪಡೆಗಳವರ ಸಹಾಯದಿಂದ ಅನೇಕ ಗಂಟೆಗಳ ತರುವಾಯ ಬೆಂಕಿಯನ್ನು ಆರಿಸಿ ಪರಿಸ್ಥಿತಿಯನ್ನು ನಿಯಂತ್ರಿಸಲಾಯಿತು.

ಚುರುಮುರಿ

ರಾಜಕೀಯ ಪ್ರಾಮಾಣಿಕತೆ

• ಲಿಂಗರಾಜು ಡಿ.ಎಸ್.

‘**ಮಾಜಿ** ಶಾಸಕರಿಗೆಲ್ಲಾ ಸರ್ಕಾರ ಲಕ್ಷಗಟ್ಟಲೆ ಸಂಬಳ, ಪಿಂಚಣಿ, ಲವಾಜಮೆ ಖರ್ಚು ಕೊಟ್ಟು ಸಾಕಿಕ್ಯಂಡದಂತೆ’ ತುರೇಮಣೆಗೆ ಹೇಳಿದೆ.

‘ಶಾಸಕರು ಏನೂ ಮಾಡದೇ ಇದ್ದದ್ದಕ್ಕೆ ಪಿಂಚಣಿ ತಲಾ ಎಪ್ಪತ್ತೈದು ಸಾವಿರ. ಕಾಲೇಜಲ್ಲಿ ವತ್ತಾರಿಂದ ಸಂಜೆಗಂಟಾ ದುಡಿಯೋ ಡಬ್ಬಲ್ ಡಿಗ್ರಿ ಲೆಕ್ಚರರಿಗೆ ಬರೀ ಇಪ್ಪತ್ತು ಸಾವಿರವಂತೆ. ಅಂಗನವಾಡಿ, ಆಶಾ ಕಾರ್ಯಕರ್ತೆಯರು ವರ್ಷದಿಂದ ಸಂಬಳ ಜಾಸ್ತಿ ಮಾಡಿ ಅಂತ ಗಂಟಲು ಹರಕತ್ತಾವರೆ. ಸರ್ಕಾರ ಕ್ಯಾರೆ ಅಂದುಲ್ಲ. ಶಾಸಕರ ಕಾಯಿಲೆ ಕಸಾಲೆಗೆ ತಿಂಗಳಾ ಇಪ್ಪತ್ತು ಸಾವಿರ ಕೊಟ್ಟಾರಂತೆ. ನಮ್ಮ ಆರೋಗ್ಯ ಕೆಟ್ಟರೆ ಕೇಳೋರು ಗತಿ ಇಲ್ಲ’ ತುರೇಮಣೆ ಸಿಟ್ಟುಗಂಡರು.

‘ನಿಗಮ, ಮಂಡಲಿಗಳ ಕಾಸುನೂ ಬುಡದಂಗೆ ಗೋರಿಕಂದು ತಿಂದವ್ರೆ’ ಅಂತಂದೆ.

‘ಇಷ್ಟೇ ಅಲ್ಲ ಕಂಡ್ಲಾ, ಹಾಲಿ-ಮಾಜಿಗಳು ವಿಮಾನ ದಾಗೋಗಕ್ಕೆ ತಿಂಗಳಿಗೆ ಎರಡು ಲಕ್ಷ ಕಾಸು. ಪಿಎಗೆ, ರೂಂಬಾಯಿಗೆ ಇಪ್ಪತ್ತೈದು ಸಾವಿರ. ಐದ್ವೈದು ವರ್ಷಕ್ಕೂ ತಪ್ಪದೇ ಸಂಬಳ ಜಾಸ್ತಿ ಮಾಡಿಕ್ಯತ್ತರೆ. ದೇಸ ಹ್ಯಂಗೆ ಉದ್ಧಾರಾತದೆ?’ ಅಂತು ಯಂಟಪ್ಪಣ್ಣ.

‘ಭೇಸ್ ಮಗನೇ. ಒಪ್ಪಿದೆ’ ಅಂತ ಮೂರು ಜನ ದೊಡ್ಡ ಮನುಸ್ರ ಥರಾ ಟೋಪಿ, ಪೇಟ ಇಕ್ಕ್ಯಂದೋರು ಕಾಣಿಸಿಗ್ಯಂದು ಅವರೇ ಪರಿಚಯ ಮಾಡಿಕ್ಯಂದರು.

‘ನೋಡ್ಲಾ ನಾನು ಕೆಂಗಲ್ ಹನುಮಂತಯ್ಯ, ಇವರು ಕೆ.ಸಿ. ರೆಡ್ಡಿ, ಇವರು ಕಡಿದಾಳ್ ಮಂಜಪ್ಪ. ಪ್ರಾಮಾಣಿಕತೆ ಇಲ್ಲದ ಈ ಕಾಲದ ರಾಜಕಾರಣಿಗಳಿಂದ ಯಾವತ್ತೂ ದೇಸ ಉದ್ಧಾರಾಗಕುಲ್ಲ ಕನ್ರೋ. ದಿಟವಾದ ರಾಜಕಾರಣಿಗಳೆಲ್ಲಾ ನಮ್ಮ ಜೊತೆ ಅವ್ರೆ’ ಕೆಂಗಲ್ ನೊಂದ್ಕಂದ್ರು.

‘ದಿಟ ಕನ್ರೀ ಕೆಂಗಲ್. ನ್ಯಾಯ-ನೀತಿಗೋಸ್ಕರ ಸಿಎಂ ಪೋಸ್ಟುನ್ನೇ ಕಿತ್ತು ಉರುಬಿ ಬಂದೋರು ನಾವು. ಜನಕ್ಕೆ ಏನಾದರೂ ಒಳ್ಳೇದು ಮಾಡಬಕು ಅನ್ನೋ ಘನವಾದ ಇಚಾರವೇ ಈಗಿನೋರಿಗಿಲ್ಲ. ಇವರ ಅಡಾವುಡೀಲಿ ನಿಮ್ಮ ಭವಿಷ್ಯ ಮಂಕಾಯ್ತಾ ಅದಲ್ರೋ’ ಅಂದ್ರು ಕಡಿದಾಳ್ ಮಂಜಪ್ಪ.

ನಾವೂ ಸತ್ಯ ಒಪ್ಪಿಕ್ಯಂದು ಸುಮ್ಮಗಾದೊ. ಮೂವರೂ ಮಟಾಮಾಯ ಆದರು.

ಸಂಗತ

ಸರ್ಕಾರದ ಬುಡದಲ್ಲೇ ಇದೆ ಮತೀಯ ಹುತ್ತ!

ಎಲ್ಲ ಧರ್ಮಗಳ ನಾಗರಿಕರ ಬಳಕೆಗಾಗಿ ಇರುವ ಸಾರ್ವಜನಿಕ ಸ್ಥಳಗಳಲ್ಲಿ ಮತೀಯ ಆಚರಣೆಗಳನ್ನು ನಿರ್ಬಂಧಿಸಬೇಕಾದ ತುರ್ತು ಇಂದಿನದು.

• ರಾಘವೇಂದ್ರ ಕೆ. ತೊಗರ್ಸಿ

‘**ಸರ್ಕಾರಿ** ಶಾಲೆ-ಕಾಲೇಜು, ಆಟದ ಮೈದಾನಗಳು ಮತ್ತು ಸರ್ಕಾರಿ ಜಾಗಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳನ್ನು ನಿರ್ಬಂಧಿಸಬೇಕು’ ಎಂದು ಒತ್ತಾಯಿಸಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಅದರ ಬೆನ್ನಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ, ‘ಸರ್ಕಾರಿ ಜಾಗ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನಮಾಜಿಗೆ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಮೊದಲ ಪತ್ರ ಸಾಂಸ್ಕೃತಿಕ ಎನ್ನುವ ಸಂಸ್ಥೆಯ ರಾಜಕೀಯ ಚಟುವಟಿಕೆಗೆ ಸಂಬಂಧಿಸಿದ್ದರೆ, ಎರಡನೇ ಪತ್ರ ಶುದ್ಧ ಧಾರ್ಮಿಕ ಕ್ರಿಯೆಗೆ ಪ್ರತಿಕ್ರಿಯೆಯಾಗಿದೆ. ಈ ಪತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಯೋಚಿಸಿ, ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿರುವ ಎಲ್ಲ ಆಚರಣೆಗಳಿಗೂ ನಿರ್ಬಂಧ ಹಾಕಬೇಕು. ಆ ನಿರ್ಬಂಧ ಎಲ್ಲ ಧರ್ಮಗಳ ಮೆರವಣಿಗೆಗೂ ಅನ್ವಯ ಮಾಡಬೇಕಿದೆ.

ಆರಾಧನೆ ಮತ್ತು ಪ್ರಾರ್ಥನೆ, ವೈಯಕ್ತಿಕ ನೆಲೆಯನ್ನು ದಾಟಿ ಸಮುದಾಯವನ್ನು ಬಳಸಿಕೊಳ್ಳುವ ಮೂಲಕ ರಾಜಕೀಯಗೊಳ್ಳುತ್ತಿವೆ. ಮನೆಗೆ ಸೀಮಿತವಾಗಬೇಕಾದ ಜಾತಿ-ಧರ್ಮಗಳ ಸಂಪ್ರದಾಯ ತನ್ನ ಮಿತಿಯನ್ನು ದಾಟಿ ಸಮಾಜದ ಹಿತವನ್ನು ಬಲಿ ಪಡೆಯುತ್ತಿದೆ. ಹಾದಿಬೀದಿಗಳಲ್ಲಿ ಸ್ಫೋಟಿಸುವ ಪಟಾಕಿ ಮಲಗಿದ್ದವರನ್ನು ಬಡಿದೆಬ್ಬಿಸುತ್ತಿದೆ. ಸಾರ್ವಜನಿಕ ಸ್ಥಳಗಳ ಒತ್ತುವರಿಶೂರರು, ಭೂಗಳ್ಳರು, ಸಮಾಜಘಾತುಕ ಶಕ್ತಿಗಳು ಭಾವನಾತ್ಮಕ ವಿಷಯವನ್ನು ಬಳಸಿಕೊಂಡು ತಮ್ಮ ಸ್ವಾರ್ಥವನ್ನು ನಿರಂತರವಾಗಿ ಸಾಧಿಸುತ್ತಿದ್ದಾರೆ. ಇಂತಹ ಸಮಾಜಘಾತುಕ ಕಾರ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಚಿವ-ಶಾಸಕರ ಪತ್ರಗಳಿಗೆ ವಿಶೇಷ ಮಹತ್ವವಿದೆ.

ಸಾರ್ವಜನಿಕ ಮತ್ತು ಸರ್ಕಾರಿ ಸ್ಥಳಗಳಲ್ಲಿ ಧಾರ್ಮಿಕ ಅಥವಾ ಮತೀಯ ಚಟುವಟಿಕೆಯನ್ನು ನಿರ್ಬಂಧಿಸಿದರೆ ಸಂವಿಧಾನದ ಆಶಯವನ್ನು ಜಾರಿಗೊಳಿಸಿದಂತೆ ಆಗುತ್ತದೆ. ಈ ವಿಷಯದಲ್ಲಿ ಸರ್ಕಾರ ತನ್ನ ಇಚ್ಛಾಶಕ್ತಿಯನ್ನು ತೋರಿಸಬೇಕು ಎನ್ನುವ ಸವಾಲನ್ನು ಒಡ್ಡಿದಂತೆ ಜನಪ್ರತಿನಿಧಿಗಳ ಪತ್ರಗಳು ಕಾಣುತ್ತಿವೆ.

ಸರ್ಕಾರ ತನ್ನ ಬುಡದಲ್ಲೇ ಕಟ್ಟಿರುವ ಮತೀಯ ಹುತ್ತವನ್ನು ಒಡೆಯಬೇಕಿರುವುದು ಸದ್ಯದ ತುರ್ತು. ವಿಧಾನಸೌಧ ಮಾತ್ರವಲ್ಲದೆ, ಬಹುತೇಕ ಸರ್ಕಾರಿ ಕಟ್ಟಡಗಳ ಆಸುಪಾಸು ದೇವಕುಟೀರಗಳು ಹುಟ್ಟಿಕೊಂಡಿವೆ. ಅಷ್ಟೇ ಅಲ್ಲ, ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಮಿನಿ ಮಂದಿರವೊಂದು ಅವತರಿಸಿರುತ್ತದೆ. ಲಿಫ್ಟ್, ಸರ್ಕಾರಿ ಕಾರುಗಳಲ್ಲಿಯೂ ಮೂರ್ತಿಗಳು ಕೂತಿರುತ್ತವೆ. ಅನೇಕ ಸಚಿವರು ಪದಗ್ರಹಣವನ್ನು ಪ್ರಮಾಣ ವಚನಕ್ಕೆ ಮುಗಿಸುವುದಿಲ್ಲ; ತಮ್ಮ ಇಚ್ಛೆಯಂತೆ ಪೂಜೆ, ಹೋಮ ಮಾಡಿಸುತ್ತಾರೆ. ಕೆಲವೊಮ್ಮೆ ಕಚೇರಿಯ ವಾಸ್ತುದೋಷ ಪರಿಹಾರವನ್ನೂ ನಡೆಸುತ್ತಾರೆ. ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ವಾರದ ಒಂದು ದಿನದ ಅರ್ಧ ಭಾಗ ಪೂಜೆಗೆ ಮೀಸಲಾಗಿರುತ್ತದೆ. ಸಂವಿಧಾನದ ಆಶಯವನ್ನು ಮಕ್ಕಳಿಗೆ ತಿಳಿಸಬೇಕಾದ ಶಾಲೆ-ಕಾಲೇಜುಗಳಲ್ಲಿಯೂ ಹಬ್ಬ, ಪೂಜೆ, ಪ್ರಾರ್ಥನೆ, ಆರಾಧನೆ ನಡೆಯುತ್ತಿವೆ. ಇಂತಹ ಆಚರಣೆಗಳಿಗೆ ಸಂಪೂರ್ಣ ನಿರ್ಬಂಧ ಹಾಕಬೇಕಾದ ಅಗತ್ಯವಿದೆ.

ಸಾರ್ವಜನಿಕ ಸ್ಥಳದಲ್ಲಿ ಧಾರ್ಮಿಕ ಚಟುವಟಿಕೆಗೆ ಅವಕಾಶ ಇರಬಾರದು. ಅದನ್ನು ನ್ಯಾಯಾಲಯ ಆಗಾಗ ಮನವರಿಕೆ ಮಾಡುತ್ತಲೇ ಇರುತ್ತದೆ. ಆದರೆ, ನಾಗರಿಕ ಸಮಾಜ ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ಸಮಾಜದ ನಿಷ್ಕ್ರಿಯತೆಯನ್ನು ಬಳಸಿಕೊಂಡು ಕೆಲವು ಕಿಡಿಗೇಡಿಗಳು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಒತ್ತುವರಿ ಮಾಡಿಕೊಳ್ಳುತ್ತಾರೆ. ತಮ್ಮ ಹಿತಾಸಕ್ತಿಗೆ ನಿರ್ಭೀಡೆಯಿಂದ ‘ಧರ್ಮ’, ‘ದೇವರು’ ಬಳಕೆ ಮಾಡಿಕೊಳ್ಳುತ್ತಾರೆ. ಹಾಗಾಗಿಯೇ ಅನೇಕ ರಸ್ತೆಗಳನ್ನು ಮಂದಿರ-ಮಸೀದಿಗಳು ಆಕ್ರಮಿಸಿವೆ. ನಗರ-ಪಟ್ಟಣಗಳ ಹಲವು ಕಡೆ ಪಾದಚಾರಿ ಮಾರ್ಗಗಳನ್ನೂ ಅವು ನುಂಗಿ ನಿಂತಿರುತ್ತವೆ.

ಕೆಲವು ಕಡೆ ಐತಿಹಾಸಿಕ ಮತ್ತು ಪಾರಂಪರಿಕ ಸ್ಮಾರಕಗಳನ್ನು ವಿರೂಪಗೊಳಿಸುವ ಕೆಲಸವೂ ಆಗುತ್ತಿದೆ. ಬೆಂಗಳೂರಿನ ಕೇಂದ್ರ ಭಾಗದಂತೆ ಇರುವ ಮೈಸೂರು ಬ್ಯಾಂಕ್ ಎದುರಿನ ವೃತ್ತದಲ್ಲಿ, ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರ ಸ್ಮಾರಕವೊಂದಿದೆ. ಆ ಸ್ಮಾರಕ ‘ಶಾಮಣ್ಣ ಬಿನ್ ಬೇಟೆ ರಂಗಪ್ಪ, ತಿರುಮಲಯ್ಯ, ಪ್ರಹ್ಲಾದ ಶೆಟ್ಟಿ, ಗುಂಡಪ್ಪ’ ಅವರನ್ನು ಸ್ಮರಿಸುತ್ತದೆ. ಅದರ ಮತ್ತೊಂದು ಮಗ್ಗುಲಲ್ಲಿ ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಕೆತ್ತಲಾಗಿದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ಚಾರಿತ್ರಿಕ ಮಹತ್ವ ಸಾರಬೇಕಾದ ಸ್ಮಾರಕವು ಮಂದಿರದ ನೆರಳಿನಲ್ಲಿ ನಗಣ್ಯ ಎನ್ನುವಂತಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಪ್ರಾಣಾರ್ಪಣೆಯ ಸ್ಮಾರಕದ ದುಃಸ್ಥಿತಿ ನೋಡಿದಾಗ ಬೇಸರ ಅನ್ನಿಸುತ್ತದೆ.

ಧಾರ್ಮಿಕ ಉದ್ದೇಶಗಳಿಗಾಗಿ ಐತಿಹಾಸಿಕ ಸ್ಮಾರಕಗಳನ್ನು ಗಾಸಿಗೊಳಿಸುವ ನಿದರ್ಶನಗಳು ರಾಜ್ಯದ ಉಳಿದೆಡೆಗಳಲ್ಲೂ ಸಿಗಬಹುದು. ರಸ್ತೆ, ಉದ್ಯಾನ, ಶಾಲೆಯ ಆವರಣವನ್ನು ಆಕ್ರಮಿಸಿದ ಅನೇಕ ಮಸೀದಿ, ಮಂದಿರ, ಚರ್ಚ್‌ಗಳೂ ಕಾಣಸಿಗಬಹುದು. ಇಂತಹದನ್ನೆಲ್ಲ ತಪ್ಪಿಸಿ ಸರ್ಕಾರಿ ಆಸ್ತಿ ಮತ್ತು ಸ್ಮಾರಕಗಳ ಸಂರಕ್ಷಣೆಯ ದೃಷ್ಟಿಯಿಂದ ಶಾಸಕರ ಪತ್ರಕ್ಕೆ ಅತ್ಯಂತ ಮಹತ್ವ ಇದೆ. ಅವರ ಒತ್ತಾಯದ ಮತೀಯ ನೋಟವನ್ನು ಮೀರಿ ಸರ್ವಧರ್ಮಗಳಿಗೂ ಅನ್ವಯಿಸಿ ಕೈಗೊಳ್ಳುವ ಕ್ರಮ ಸಮಗ್ರವಾಗಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವೈವಿಧ್ಯಮಯ ಬೆಳಕಿನ ಹಬ್ಬ

ದೀಪಾವಳಿಯನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿಭಿನ್ನವಾಗಿ ಆಚರಿಸುವ ಸಂಪ್ರದಾಯವಿದೆ. ಕೆಲವು ಸಮುದಾಯಗಳು ವಿಶಿಷ್ಟವಾಗಿ ಹಬ್ಬವನ್ನು ಆಚರಿಸುತ್ತವೆ. ವಿವಿಧ ರಾಜ್ಯಗಳಲ್ಲೂ ಭಿನ್ನ ರೀತಿಯ ಸಂಪ್ರದಾಯ ಅನುಸರಿಸುತ್ತಿರುವ ನಿದರ್ಶನಗಳಿವೆ. ಕೆಲವು ದೇಶಗಳಲ್ಲಿ ಬೆಳಕಿನ ಹಬ್ಬಕ್ಕೆ ಭಾರತದಲ್ಲಿ ಇರುವಷ್ಟೇ ಮಹತ್ವ ಇದೆ. ಶತಮಾನಗಳಿಂದ ರೂಢಿಯಲ್ಲಿರುವ ಕೆಲವು ವಿಶಿಷ್ಟ ಆಚರಣೆಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ

ಎಮ್ಮೆಗಳಿಗೆ ಮನ್ನಣೆ

ರಾಜ್ಯದ ವಿವಿಧೆಡೆ ಇರುವ ಗೌಳಿಗ ಸಮುದಾಯದವರು ಸಂಭ್ರಮದಿಂದ ಹಬ್ಬ ಆಚರಿಸುತ್ತಾರೆ. ವಿಜಯನಗರ ಜಿಲ್ಲೆ ಅಲ್ಲದೇ, ಧಾರವಾಡ, ಬೆಳಗಾವಿ, ಹಾವೇರಿ ಮುಂತಾದ ಕಡೆ ಹಬ್ಬವು ರಂಗೇರುತ್ತದೆ. ಪಾಂಡವರು ಅಜ್ಞಾತವಾಸ ಮುಗಿಸಿ ನಾಡಿಗೆ ಮರಳುವ ವೇಳೆ ವಿರಾಟರಾಯನಿಗೆ ಸೇರಿದ್ದ ಗೋವುಗಳನ್ನು ಕೌರವರು ಅಪಹರಿಸಿಕೊಂಡು ಹೋಗಿರುತ್ತಾರೆ. ಇದನ್ನು ತಿಳಿದ ಅರ್ಜುನ, ತಕ್ಷಣ ಗೋವುಗಳನ್ನು ರಕ್ಷಿಸುತ್ತಾನೆ. ಇದು ಬುಡಕಟ್ಟು ಗೌಳೇರರಿಗೆ ಸಂಭ್ರಮಕ್ಕೆ ಕಾರಣವಾಗುತ್ತದೆ. ಗೌಳಿಗರಿಗೆ ದೀಪಾವಳಿಯೇ ಆ ಸಂಭ್ರಮ ಆಚರಿಸುವ ಸಂದರ್ಭ.

ಗೌಳಿಗರ ಬದುಕಿನ ಭಾಗವಾಗಿರುವ ಎಮ್ಮೆಗಳಿಗೆ ಕ್ಷೌರ, ಎಣ್ಣೆ ಮಜ್ಜನ ಮಾಡಿಸಿ, ಸಾಂಪ್ರದಾಯಿಕವಾಗಿ ಕಬ್ಬಿಣದ ಸಲಾಕೆ ಬೆಂಕಿಯಲ್ಲಿ ಕಾಯಿಸಿ ಮುದ್ರೆ ಒತ್ತುತ್ತಾರೆ. ಅವುಗಳನ್ನು ಸಿಂಗರಿಸಿ ಪಟ್ಟಣದ ಗೌಳೇರ ಬೀದಿಯಲ್ಲಿ ಬೆದರಿಸುವ ಆಟ ಆಡಿಸುತ್ತಾರೆ.

ಬೆಳಗಾವಿಯಲ್ಲೂ ಇಂತಹದೇ ಆಚರಣೆ ರೂಢಿಯಲ್ಲಿದೆ. ಗೌಳಿ ಗಲ್ಲಿಗೆ ಬಂದರಂತೂ ಹೊಸ ಪ್ರಪಂಚವೇ ತೆರೆದುಕೊಳ್ಳುತ್ತದೆ. ಇಲ್ಲಿನ ಜನರ ದೀಪಾವಳಿ ತಾವು ಸಾಕಿದ ಪ್ರಾಣಿಗಳ ಸಮೇತ ನಡೆಯುತ್ತದೆ. ಎಮ್ಮೆಗಳನ್ನು ಸಿಂಗರಿಸಿ, ಸಾಲಾಗಿ ಓಡಿಸಿ ಸಂಭ್ರಮಿಸುವುದು ಒಂದೆಡೆಯಾದರೆ, ಜಿದ್ದಿಗೆ ಬಿದ್ದು ಓಡಿಸುವ ಸ್ಪರ್ಧೆ ಇನ್ನೊಂದು.

ತುಳುನಾಡಿನ 'ತುಡರ ಪರ್ಬ'

ತುಳುನಾಡಿನಲ್ಲಿ ದೀಪಾವಳಿ ಎಂದರೆ ಸ್ನಾನದ ಹಬ್ಬ (ಮೀಪಿನ ಪರ್ಬ), 'ಕುಲೆ ಪರ್ಬ', ಭೂಮಿ ಪೂಜೆ, ಗೋಪೂಜೆ, ಬಲೀಂದ್ರ ಪೂಜೆ ಇವೆಲ್ಲವೂ ಸಮ್ಮಿಳಿತಗೊಂಡಿವೆ. ಪುರಾಣದ ಬಲಿಚಕ್ರವರ್ತಿ, ನರಕ ಚತುರ್ದಶಿಯ ನರಕಾಸುರ ವಧೆ ತುಳುವರ ಕಲ್ಪನೆಯಲ್ಲಿ ಇಲ್ಲ. ಬಲೀಂದ್ರ ತುಳುವರ ರಾಜ. ನೆಲೆ ಕಳೆದುಕೊಂಡ ಬಲೀಂದ್ರನಿಗೆ ಮೌಖಿಕ ಪರಂಪರೆಯ ಪಾಡ್ದನಗಳ ಮೂಲಕ ನೆಲೆ ಕಲ್ಪಿಸಿದವರು ತುಳುನಾಡಿನ ಮೂಲ ನಿವಾಸಿಗಳಾದ ಕೃಷಿ ಕಾರ್ಮಿಕರು ಎಂಬ ಕಲ್ಪನೆಯಿದೆ. ಹೀಗಾಗಿ, ಬಲೀಂದ್ರನ ಬಗ್ಗೆ ಇಲ್ಲಿನವರಿಗೆ ಅಪಾರ ಗೌರವ.

ಬಲೀಂದ್ರನ ಪ್ರತಿನಿಧಿಯಾಗಿ ಗದ್ದೆ ಬದಿಯಲ್ಲಿ ಸ್ಥಾಪಿಸುವ ಹಾಲೆಮರದ ಕಂಬದ (ಬೊಳ್ಪು ಕಂಬ) ಮೇಲೆ ಹಣತೆ ಬೆಳಗಿ, ಬಲೀಂದ್ರನನ್ನು ಸ್ವಾಗತಿಸುವ 'ಬಲೀಂದ್ರ ಲೆಪ್ಪುನು' ಎಂಬ ಆಚರಣೆಯ ಸೊಗಡು ಗ್ರಾಮೀಣ ಪ್ರದೇಶಗಳಲ್ಲಿದೆ. ಕಳೆದ ಪರ್ಬದಿಂದ ಈ ಪರ್ಬದ ನಡುವಿನ ಅವಧಿಯಲ್ಲಿ ಗತಿಸಿದ ಕುಟುಂಬದ ಸದಸ್ಯರನ್ನು ನೆನಪಿಸುವ 'ಕುಲೆ ಪರ್ಬ' ಆಚರಣೆ ತುಳುನಾಡಿನ ದೀಪಾವಳಿಯ ವಿಶೇಷ.

ಅಂಟಿಗೆ–ಪಂಟಿಗೆ

ಅಂಟಿಗೆ–ಪಂಟಿಗೆ ಎಂದರೆ ದೀಪಾವಳಿ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆ ಬುಡಕಟ್ಟು ಜನರು ಆಚರಿಸುವ ಸಂಪ್ರದಾಯ. ಇದು, ವಿಶಿಷ್ಟ ಗಾಯನ ಮತ್ತು ನೃತ್ಯದ ಮೂಲಕ ಮನೆ ಮನೆಯಿಂದ ಜ್ಯೋತಿ ಪಡೆಯುವ ಆಚರಣೆ. ಎರಡು ವಾರಗಳವರೆಗೆ ಈ ಕಲೆಯನ್ನು ಆಯ್ದ ಮನೆಗಳಿಗೆ ಮಾತ್ರ ತೆರಳಿ ಪ್ರದರ್ಶನ ಮಾಡಲಾಗುತ್ತದೆ. ಜಿಲ್ಲೆಯ ಶೃಂಗೇರಿ, ಕೊಪ್ಪ, ಕಳಸ ಮತ್ತು ನರಸಿಂಹರಾಜಪುರ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಈ ಕಲೆ ಜೀವಂತವಾಗಿದೆ.

ತಾಂಡಾಗಳಲ್ಲಿ ವಿಶೇಷ ಆಚರಣೆ: ಕಡೂರು ತಾಲ್ಲೂಕಿನ ಲಂಬಾಣಿ ತಾಂಡಾಗಳಲ್ಲಿ ಅಮಾವಾಸ್ಯೆ ದಿನ ಹಿರಿಯರ ಪೂಜೆ ನೆರವೇರಿಸುವುದು ವಿಶೇಷ. ಅಕ್ಕಿ ಹಿಟ್ಟು, ಬೆಲ್ಲ, ತುಪ್ಪ ಹಾಕಿ ಗಟ್ಟಿಯಾಗಿ ಪಾಯಸವನ್ನು ಕೆಂಡದ ಮೇಲೆ ತಯಾರಿಸಿ ಹಿರಿಯರ ಹೆಸರಿನಲ್ಲಿ ಆಹುತಿ ನೀಡಿ ಹಬ್ಬ ಆಚರಿಸಲಾಗುತ್ತದೆ. ಸಂಜೆ ಮನೆಗಳ ಮುಂದೆ ದೀಪ ಬೆಳಗಿಸಿ ತಮ್ಮ ಸಮುದಾಯದ ಹಾಡುಗಳನ್ನು ಹೇಳುತ್ತಾ ದೀಪದ ಸುತ್ತ ನರ್ತಿಸುವುದು ಸಂಪ್ರದಾಯ.

ದೀವಟಿಗೆ ಉತ್ಸವ

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದಲ್ಲಿ ಪಂಜುಗಳನ್ನು ಹಿಡಿದು ಪಾಲ್ಗೊಳ್ಳುವ 'ದೀವಟಿಗೆ ಉತ್ಸವ' ಉತ್ಸವ ನಡೆಯುತ್ತದೆ. ಬಲಿಪಾಡ್ಯಮಿಯ ಮುನ್ನಾದಿನ ಬೆಟ್ಟದಪುರ ಗ್ರಾಮದ ಮಧ್ಯಭಾಗದಲ್ಲಿರುವ ಸಿಡಿಲು (ಶಿಡ್ಲು) ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ನಂತರ 3,108 ಮೆಟ್ಟಿಲುಗಳಿರುವ ಬೆಟ್ಟವನ್ನು ರಾತ್ರಿಯೇ ಹತ್ತುತ್ತಾರೆ. ಬಲಿಪಾಡ್ಯಮಿಯಂದು ಮುಂಜಾನೆ ಉತ್ಸವಮೂರ್ತಿಗಳನ್ನು ಕೆಳಕ್ಕೆ ತರಲಾಗುತ್ತದೆ.

ಬೆಟ್ಟದಪುರದಿಂದ ಆರಂಭಗೊಳ್ಳುವ 'ದೀವಟಿಗೆ ಉತ್ಸವ (ಪಂಜಿನ ಮೆರವಣಿಗೆ) ಬೆಟ್ಟದತುಂಗ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕುಡಕೂರು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕುತ್ತದೆ. ಸಾವಿರಾರು ಮಂದಿ ದೀವಟಿಗೆ ಹಿಡಿದು ಪಾಲ್ಗೊಳ್ಳುತ್ತಾರೆ.

ಕಿರು ದೀಪಾವಳಿ

ಮಧ್ಯ ಕರ್ನಾಟಕದ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಜಗಳೂರು, ಹೊನ್ನಾಳಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ನಾಡೆಲ್ಲ ದೀಪಾವಳಿ ಆಚರಿಸಿದ ನಂತರ ಬರುವ ಮೊದಲ ಶುಕ್ರವಾರ ಅಥವಾ ಮುಂದಿನ ಹುಣ್ಣಿಮೆಯ ದಿನದಂದು ದೀಪಾವಳಿ ಆಚರಿಸುವುದು ಪದ್ಧತಿ. ಕೆಲವೆಡೆ ಅದಕ್ಕೆ ಕಿರು ದೀಪಾವಳಿ ಎಂದೂ ಕರೆಯಲಾಗುತ್ತದೆ.

ಕುರಿಗಳ ಮದುವೆ

ನೀರು ತುಂಬುವ ದಿನದಂದು ನಸುಕಿನಲ್ಲಿ ಕುರಿಗಾಹಿಗಳು ಹೆಣ್ಣು, ಗಂಡು ಕುರಿಗಳನ್ನು ತಂದು, ಮೈ ತೊಳೆದು, ಅರಿಸಿನ–ಕುಂಕುಮ ಹಚ್ಚಿ, ಹೂವಿನ ಹಾರ ಹಾಕಿ ಪೂಜೆ ಮಾಡಿ ಅವುಗಳಿಗೆ ಮದುವೆ ಮಾಡುವ ವಿಶಿಷ್ಟ ಸಂಪ್ರದಾಯ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದಗಲ್, ಬನ್ನಿಗೋಳ, ನಾಗಲಾಪುರ, ನಾಗರಾಳ, ಆನೆಹೊಸೂರು ಗ್ರಾಮಗಳಲ್ಲಿದೆ. ಕುರಿಗಳು ಹೆಚ್ಚು ಮರಿಗಳಿಗೆ ಜನ್ಮನೀಡಿದರೆ ಪ್ರಾಣಿ ಸಂಪತ್ತು ವೃದ್ಧಿಯಾಗುತ್ತದೆ. ಇದನ್ನೇ ಶ್ರೀಲಕ್ಷ್ಮಿಯ ಆಶೀರ್ವಾದ ಎಂದು ನಂಬುತ್ತಾರೆ.

ಲಂಬಾಣಿ ಸಮುದಾಯದ 'ದವಾಳಿ'

ವಿಜಯನಗರ ಜಿಲ್ಲೆಯ ಲಂಬಾಣಿ ತಾಂಡಾಗಳಲ್ಲಿ 'ದವಾಳಿ' ಹೆಸರಿನಲ್ಲಿ ದೀಪಾವಳಿಯನ್ನು ಸುಗ್ಗಿಯ ಹಬ್ಬವಾಗಿ ಆಚರಿಸಲಾಗುತ್ತದೆ. ತಾಂಡಾದ ಎಲ್ಲ ಮನೆತನದ ಯುವತಿಯರು ಅಮಾವಾಸ್ಯೆ ದಿನ ರಾತ್ರಿ ಮನೆ ಮನೆಗೆ ತೆರಳಿ ಹರಳೆಣ್ಣೆಯ ದೀಪದ ಆರತಿ ಬೆಳಗುತ್ತಾ, 'ವರ್ಷದಾಡ್ ಕೋಡ್ ಧವಾಳಿ ಬಾಯ್ತೋನೊ ಮೇರಾ, ಬಿಯಾತೋನೊ ಮೇರಾ' (ಕತ್ತಲೆ ತೊರೆದು ಬೆಳಕು ಆವರಿಸಲಿ, ಎಲ್ಲರಿಗೂ ಒಳ್ಳೆಯದಾಗಲಿ) ಎಂದು ಶುಭ ಕೋರುತ್ತಾರೆ. ಮರು ದಿನ ಎಲ್ಲ ಮಹಿಳೆಯರು ಕಾಡಿಗೆ ತೆರಳಿ ವಲ್ಲೇಣಾರ ಫೂಲ್ (ವಲ್ಲೇಣ ಹೂವು), ಗರಿಕೆ ಆಯ್ದು ಬುಟ್ಟಿಯಲ್ಲಿ ತರುತ್ತಾರೆ. ಕೆಲವರು ಬೆಳಗಾಗುತ್ತಲೇ ಮನೆಯ ಹಿರಿಯರ ಹಬ್ಬವನ್ನು ಆಚರಿಸಲು ಸಾಮೂಹಿಕವಾಗಿ ನದಿಯ ದಂಡೆಗೆ ತೆರಳುತ್ತಾರೆ. ಅಲ್ಲಿ ವಿವಾಹ ನಿಶ್ಚಿತಾರ್ಥವಾಗಿರುವ ಎಲ್ಲ ಯುವತಿಯರು ಪರಸ್ಪರ ಅಪ್ಪಿಕೊಂಡು ಅಳುತ್ತಾರೆ. ಮುಂದಿನ ಹಬ್ಬಕ್ಕೆ ನಾವಿರುವುದಿಲ್ಲ ಎಂದು ತಮ್ಮ ಸ್ನೇಹವನ್ನು ಮೆಲುಕು ಹಾಕುತ್ತಾರೆ.

ಮಲೆನಾಡಲ್ಲಿ ಹೋರಿ ಹಬ್ಬ

ದೀಪದ ಹಾಡು ಎಂದೇ ಕರೆಯಲ್ಪಡುವ 'ಅಂಟಿಕೆ- ಪಂಟಿಕೆ' ಕಲಾಪ್ರಕಾರ ಹಾಗೂ ಹೋರಿ ಬೆದರಿಸುವ ಆಟ ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷ. ಬಲೀಂದ್ರನು ಭೂಮಿಯಲ್ಲಿ ಅವತರಿಸಿ ಪ್ರತಿವರ್ಷವೂ ದೀಪಾವಳಿ ವೇಳೆ ಕೆಲಕಾಲ ಭೂಮಿಗೆ ಬರುತ್ತಾನೆ. ಈ ಅವಧಿಯಲ್ಲಿ ಆತನ ಸ್ತುತಿಸಿ, ಆರಾಧಿಸಿದರೆ ಅವರವರ ಅಭೀಷ್ಟೆ ಈಡೇರುತ್ತವೆ ಎಂಬ ನಂಬಿಕೆಯಿಂದ ಬಲಿಪಾಡ್ಯಮಿಯಂದು ಅಂಟಿಕೆ-ಪಂಟಿಕೆ ಕಲಾ ಪ್ರದರ್ಶನ ನಡೆಯುತ್ತದೆ.

ಅಂದು ರಾತ್ರಿ ಊರಿನವರೆಲ್ಲ ಒಟ್ಟಿಗೆ ಸೇರಿ ತುಳಸಿ ಮತ್ತು ಬಲೀಂದ್ರನಿಗೆ ಪೂಜೆ ಸಲ್ಲಿಸುತ್ತಾರೆ. ಅಂಟಿಕೆ- ಪಂಟಿಕೆಯ ಕಲಾಸಂಪ್ರದಾಯದಲ್ಲಿ ಕೈದೀಪ ಬಹಳ ಪವಿತ್ರವಾದದ್ದು. ಅದನ್ನು ಹೊತ್ತಿಸಿ ಊರೂರು ಸುತ್ತುವಾಗ ಮಧ್ಯೆ ಆರಬಾರದು, ಆರಿದರೆ ಅಪಶಕುನ ಎಂಬ ನಂಬಿಕೆ ಇದೆ. ಒಂದು ತಂಡ ಮತ್ತೊಂದು ತಂಡಕ್ಕೆ ಎದುರಾಗಬಾರದು ಎಂಬ ಪ್ರತೀತಿ ಇದೆ. ಬಲೀಂದ್ರನನ್ನು ಸ್ಮರಿಸಿ ಅವನು ಭೂಮಿಯಲ್ಲಿ ಅವತರಿಸಿದಾಗ ನಡೆದ ಪವಾಡಗಳನ್ನು ಕುರಿತಂತೆ ಹಾಡುತ್ತಾರೆ.

ಅರೆಮಲೆನಾಡು ಭಾಗದ ಶಿವಮೊಗ್ಗ, ಶಿಕಾರಿಪುರ ಹಾಗೂ ಸೊರಬ ತಾಲ್ಲೂಕುಗಳಲ್ಲಿ ಹೋರಿ ಬೆದರಿಸುವ ಹಬ್ಬ ಬಹು ಜನಪ್ರಿಯ. ದೀಪಾವಳಿ ಆರಂಭದ ದಿನದಿಂದ ಕಾರ್ತಿಕ ಮಾಸದವರೆಗೆ ಬೇರೆ ಬೇರೆ ಗ್ರಾಮಗಳಲ್ಲಿ ಸ್ಪರ್ಧೆ ಆಯೋಜಿಸಲಾಗುತ್ತದೆ.

ಬುಧವಾರ ಬಂದರಷ್ಟೆ ಆಚರಣೆ

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಬಲಿ ಪಾಡ್ಯಮಿ ಬುಧವಾರ ಬಂದರಷ್ಟೇ ಹಬ್ಬ ಆಚರಿಸಲಾಗುತ್ತದೆ. ವೀರನಪುರ, ಮಾಡ್ರಹಳ್ಳಿ, ಬನ್ನಿತಾಳಪುರ, ಇಂಗಲವಾಡಿ, ನೆನೆಕಟ್ಟೆ ಮತ್ತು ಮಳವಳ್ಳಿಯಲ್ಲಿ ಈ ವಿಶಿಷ್ಟ ಆಚರಣೆ ಚಾಲ್ತಿಯಲ್ಲಿದೆ. ಬುಧವಾರ ಬಿಟ್ಟು ಉಳಿದ ದಿನಗಳಲ್ಲಿ ಹಬ್ಬ ಆಚರಿಸಿದರೆ ಜಾನುವಾರುಗಳಿಗೆ ತೊಂದರೆ ಆಗುತ್ತದೆ ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ.

ಸಗಣಿ ಕಾಳಗ

ಮಂಡ್ಯ ಜಿಲ್ಲೆ ಕಿಕ್ಕೇರಿ ಹೋಬಳಿಯ ಸಾಸಲು ಗ್ರಾಮದಲ್ಲಿ ದೀಪಾವಳಿಯಂದು ಸಗಣಿ ಕಾಳಗ ನಡೆಯುವುದು ವಿಶೇಷ. ಮಾಣಿಕಶೆಟ್ಟಿ (ಕತ್ತೆ) ಮೇಲೆ ಬಾಲವಟುವನ್ನು ಕೂರಿಸಿ ಮಾಡುವ ಧಾರ್ಮಿಕ ಆಚರಣೆಯ ಮೆರವಣಿಗೆಯನ್ನು ಮಾಣಿಕಶೆಟ್ಟಿ ಹಬ್ಬ ಎಂಬ ಹೆಸರಿನಲ್ಲಿ ಆಚರಿಸುವುದು ವಿಶಿಷ್ಟವಾಗಿದೆ. ಮಕ್ಕಳು ಹಾಗೂ ಯುವಕರು ಸಗಣಿ ಕಾಳಗದಲ್ಲಿ ಪಾಲ್ಗೊಳ್ಳುತ್ತಾರೆ.

ಉಡುಪಿಯಲ್ಲಿ ಮುಳ್ಳಮುಟ್ಟೆ

ಉಡುಪಿ ಜಿಲ್ಲೆಯ ಕಾಪು, ಪಡುಬಿದ್ರಿ ಮೊದಲಾದೆಡೆ ಮುಳ್ಳಮುಟ್ಟೆ ಎಂಬ ವಿಶಿಷ್ಟವಾದ ಆಚರಣೆ ನಡೆಯುತ್ತದೆ. ಊರಿನ ಮುಳ್ಳುಕಂಟಿ, ಕಸ ಮೊದಲಾದವುಗಳನ್ನು ಕಡಿದು ಎತ್ತರದ ಪ್ರದೇಶದಲ್ಲಿ ರಾಶಿ ಹಾಕಲಾಗುತ್ತದೆ. ದೀಪಾವಳಿಯಂದು ಮುಂಜಾನೆ ಡೋಲು, ವಾದ್ಯಗಳೊಂದಿಗೆ ಊರಿನ ಜನರು ಸಾಮೂಹಿಕವಾಗಿ ಈ ಮುಳ್ಳಮುಟ್ಟೆಗೆ ಬೆಂಕಿ ಹಚ್ಚುತ್ತಾರೆ. ಮುಳ್ಳಮುಟ್ಟೆಗೆ ಬೆಂಕಿ ನೀಡುವುದಕ್ಕೂ ಮೊದಲು ರಾತ್ರಿ ಜಾಗರಣೆ ನಡೆಸಬೇಕಾದ ಕಾರಣ ವಿವಿಧ ಮನೋರಂಜನೆ ಕಾರ್ಯಕ್ರಮಗಳನ್ನೂ ಊರಿನ ಜನರಿಗಾಗಿ ಹಮ್ಮಿಕೊಳ್ಳಲಾಗುತ್ತದೆ. ಕೆಲವೆಡೆ ಬಂಟ ದೈವದ ಕೋಲವೂ ನಡೆಯುತ್ತದೆ.

ಬಂಗಾಳದಲ್ಲಿ ಕಾಳಿ ಆರಾಧನೆ

ದೀಪಾವಳಿ ಸಮಯದಲ್ಲಿ ದೇಶದ ಎಲ್ಲ ಕಡೆಗಳಲ್ಲೂ ಲಕ್ಷ್ಮಿಗೆ ಪೂಜೆ ಸಲ್ಲಿಸಿದರೆ, ಪಶ್ಚಿಮ ಬಂಗಾಳದಲ್ಲಿ ಮಹಾ ಕಾಳಿಯನ್ನು ಆರಾಧಿಸಲಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಪೆಂಡಾಲ್ ಹಾಕಿ ದುಷ್ಟಶಕ್ತಿಯನ್ನು ಸಂಹರಿಸುವ ಕಾಳಿಯ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗುತ್ತದೆ.

ಒಡಿಶಾದಲ್ಲಿ ಪೂರ್ವಜರ ಸ್ಮರಣೆ

ಒಡಿಶಾದಲ್ಲಿ ದೀಪಾವಳಿ ಸಮಯದಲ್ಲಿ ವಿಶಿಷ್ಟವಾದ ಆಚರಣೆಯೊಂದು ಚಾಲ್ತಿಯಲ್ಲಿದೆ. ಇದಕ್ಕೆ ಕೌಂರಿಯಾ ಕಾಠೀ ಮತ್ತು ಬಡಾಬದುವಾ ಡಕಾ ಎಂದು ಕರೆಯಲಾಗಿದೆ. ಗತಿಸಿದ ಪೂರ್ವಜರನ್ನು ಸ್ಮರಿಸಿ ಅವರನ್ನು ಗೌರವಿಸುವ ಆಚರಣೆ ಇದು. ರಾತ್ರಿಯಾಗುತ್ತಿದ್ದಂತೆಯೇ ಮನೆಯಿಂದ ಹೊರಗೆ ಬರುವ ಜನರು, 'ಕೌಂರಿಯಾ ಕಾಠೀ' ಎಂದು ಕರೆಯಲಾಗುವ ಸೆಣಬಿನ ಕೋಲನ್ನು ಎಣ್ಣೆಯಲ್ಲಿ ಅದ್ದಿ, ತುದಿಗೆ ಬೆಂಕಿ ಹಚ್ಚಿ ಅದನ್ನು ಮೇಲಕ್ಕೆ ಎತ್ತಿ ಹಿಡಿದು, 'ಬಡಾ ಬದುವಾ ಹೋ, ಅಂಧಾರಾ ರೇ ಆಸಾ, ಅಲುವಾ ರೇ ಜಾ' (ಪೂರ್ವಜರೇ, ಕತ್ತಲಲ್ಲಿ ಬಂದು, ದೀಪ ಬೆಳಗಿರುವ ಹಾದಿಯಲ್ಲಿ ಹಿಂದಿರುಗಿ) ಎಂದು ಕೂಗುತ್ತಾರೆ.

ಗೋವಾದಲ್ಲಿ ನರಕಾಸುರನ ವಧೆ

ಗೋವಾದಲ್ಲಿ ಆಚರಿಸಲಾಗುವ ದೀಪಾವಳಿ ಇಡೀ ರಾಷ್ಟ್ರದ ಗಮನಸೆಳೆಯುತ್ತದೆ. ದೇಶದ ಹಲವೆಡೆ ದಸರಾ ಸಮಯದಲ್ಲಿ ರಾವಣನ ಪ್ರತಿಕೃತಿಯನ್ನು ದಹಿಸುವ ರೂಢಿ ಇರುವಂತೆ, ಪಣಜಿ ಸೇರಿದಂತೆ ಗೋವಾದ ವಿವಿಧ ಕಡೆಗಳಲ್ಲಿ ನರಕಾಸುರನ ಬೃಹತ್ ಪ್ರತಿಕೃತಿಯನ್ನು ದಹಿಸುವ ಪದ್ಧತಿ ಇದೆ. ನರಕಾಸುರ ವಧೆಯನ್ನು ಇದು ಬಿಂಬಿಸುತ್ತದೆ. ದಹನಕ್ಕೂ ಮುನ್ನ ನರಕಾಸುರನ ಪ್ರತಿಕೃತಿಯ ಮೆರವಣಿಗೆಯನ್ನು ಭರ್ಜರಿಯಾಗಿ ನಡೆಸಲಾಗುತ್ತದೆ. ನರಕ ಚತುರ್ದಶಿಯಂದು ಈ ಆಚರಣೆ ನಡೆಯುತ್ತದೆ.

ವಿದೇಶಗಳಲ್ಲೂ ಸಂಭ್ರಮ

ಅಮೆರಿಕ ಸೇರಿದಂತೆ ಜಗತ್ತಿನಾದ್ಯಂತ ವಿವಿಧ ದೇಶಗಳಲ್ಲಿ ನೆಲಸಿರುವ ಭಾರತೀಯರು ದೀಪಾವಳಿಯನ್ನು ಆಚರಿಸುತ್ತಾರೆ. ಆದರೆ, ಕೆಲವು ದೇಶಗಳಲ್ಲಿ ಭಾರತದಲ್ಲಿ ಆಚರಿಸುವ ಮಾದರಿಯಲ್ಲೇ ರಾಷ್ಟ್ರೀಯ ಹಬ್ಬದ ರೀತಿಯಲ್ಲಿ ಬೆಳಕಿನ ಹಬ್ಬವನ್ನು ಆಚರಿಸುವ ಸಂಪ್ರದಾಯವಿದೆ. ಕೆಲವು ದೇಶಗಳಲ್ಲಿ ಸರ್ಕಾರಿ ರಜೆ ನೀಡುವ ಪದ್ಧತಿಯೂ ಇದೆ.

- **ನೇಪಾಳ:** ನೆರೆಯ ನೇಪಾಳದಲ್ಲಿ 'ತಿಹಾರ್' ಎಂಬ ಹೆಸರಿನಲ್ಲಿ ಐದು ದಿನ ಹಬ್ಬವನ್ನು ಆಚರಿಸಲಾಗುತ್ತದೆ. ಪ್ರತಿ ದಿನವೂ ಭಿನ್ನ ಆಚರಣೆಗಳಿರುತ್ತವೆ. ಗೋವು, ಲಕ್ಷ್ಮಿ ಮಾತ್ರವಲ್ಲದೇ ಕಾಗೆ, ಶ್ವಾನಗಳನ್ನು ಪೂಜಿಸುವ ಪದ್ಧತಿಯೂ ಇಲ್ಲಿದೆ
- **ಶ್ರೀಲಂಕಾ:** ಲಂಕಾದ ತಮಿಳು ಸಮುದಾಯ ಅದ್ದೂರಿಯಾಗಿ ದೀಪಾವಳಿಯನ್ನು ಆಚರಿಸುತ್ತದೆ. ಸರ್ಕಾರ ರಜೆಯನ್ನೂ ಘೋಷಿಸುತ್ತದೆ. ಹಬ್ಬದ ಆಚರಣೆಯಲ್ಲಿ ಭಾರತದ ಸಂಪ್ರದಾಯವನ್ನೇ ಲಂಕನ್ನರೂ ಅನುಸರಿಸುತ್ತಾರೆ
- **ಮಲೇಷ್ಯಾ:** ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿರುವ ಮಲೇಷ್ಯಾದಾದ್ಯಂತ ದೀಪಾವಳಿಗೆ ಸರ್ಕಾರಿ ರಜೆ ನೀಡಲಾಗುತ್ತದೆ. ಭಾರತೀಯರ ಬಾಹುಳ್ಯ ಇರುವ ಪ್ರದೇಶಗಳಲ್ಲಿ ಹಬ್ಬದ ಆಚರಣೆ ಜೋರಾಗಿರುತ್ತದೆ
- **ಸಿಂಗಪುರ:** ಪುಟ್ಟ ಶ್ರೀಮಂತ ರಾಷ್ಟ್ರ ಸಿಂಗಪುರದಲ್ಲಿ ಆಚರಿಸಲಾಗುವ ಪ್ರಮುಖ ಹಬ್ಬ ಇದು. ದೀಪಾಲಂಕಾರಗಳಿಂದ ಕಂಗೊಳಿಸುವ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಪ್ರಮುಖ ನಗರಗಳ ರಸ್ತೆಗಳು, ಕಟ್ಟಡಗಳು ಕೂಡ ಅಲಂಕಾರಿಕ ದೀಪಗಳಿಂದ ಮಿನುಗುತ್ತವೆ. ಇಲ್ಲೂ ದೀಪಾವಳಿಗೆ ಸರ್ಕಾರಿ ರಜೆ ಇದೆ
- **ಫಿಜಿ:** ದ್ವೀಪಗಳ ಸಮೂಹ ಫಿಜಿಯಲ್ಲಿ ಅದ್ದೂರಿಯಾಗಿ ದೀಪಾವಳಿ ಆಚರಿಸಲಾಗುತ್ತದೆ. ಇಲ್ಲೂ ಸರ್ಕಾರ ರಜೆ ಘೋಷಿಸುತ್ತದೆ. ಆಚರಣೆಯು ಭಾರತದಲ್ಲಿನ ಆಚರಣೆಯನ್ನೇ ಹೋಲುತ್ತದೆ
- **ಮಾರಿಷಸ್:** ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಮಾರಿಷಸ್‌ನಲ್ಲಿ ದೀಪಾವಳಿಗೆ ತುಂಬಾ ಮಹತ್ವ ಇದೆ. ಅದ್ದೂರಿತನಕ್ಕೆ ಈ ಹಬ್ಬ ಹೆಸರುವಾಸಿ
- **ಮ್ಯಾನ್ಮಾರ್:** ಪುಟ್ಟ ರಾಷ್ಟ್ರ ಮ್ಯಾನ್ಮಾರ್‌ನಲ್ಲಿ ಸರ್ಕಾರಿ ಶಾಲೆಗಳು, ಕಚೇರಿಗಳಿಗೆ ರಜೆ ಇರುತ್ತದೆ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಖ್ಯಾತ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರು ಅಭಿಮಾನಿಯೊಬ್ಬರು ಹಿಡಿದಿರುವ ಪಾಕಿಸ್ತಾನ ಧ್ವಜದ ಮೇಲೆ ಹಸ್ತಾಕ್ಷರ ಹಾಕುತ್ತಿರುವ ಫೋಟೊವನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆಸ್ಟ್ರೇಲಿಯಾದ ಪರ್ತ್‌ನಲ್ಲಿ ಅವರು ಹಸ್ತಾಕ್ಷರ ನೀಡಿದ್ದಾಗಿ ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.

ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಅಕ್ಟೋಬರ್ 16ರಂದು ಎನ್‌ಡಿಟಿವಿಯಲ್ಲಿ ಪ್ರಕಟವಾದ ಲೇಖನವೊಂದು ಸಿಕ್ಕಿತು. ಅದರಲ್ಲಿ ಕೊಹ್ಲಿ ಅವರು ಹಸ್ತಾಕ್ಷರ ಹಾಕುವ ಮೂಲ ಫೋಟೊ ಇದೆ. ಆದರೆ, ಅದರಲ್ಲಿ ಆರ್‌ಸಿಬಿ ಜೆರ್ಸಿಯ ಮೇಲೆ ಹಸ್ತಾಕ್ಷರ ಹಾಕುತ್ತಾರೆಯೇ ವಿನಾ ಪಾಕಿಸ್ತಾನದ ಧ್ವಜದ ಮೇಲಲ್ಲ. ಆ ಲೇಖನದ ಪ್ರಕಾರ, ಕರಾಚಿಯಿಂದ ಬಂದಿದ್ದ ಅಭಿಮಾನಿ ಸಾಹಿಲ್ ಎನ್ನುವವರಿಗೆ ಕೊಹ್ಲಿ ಹಸ್ತಾಕ್ಷರ ನೀಡಿದ್ದಾರೆ. 'ರೆವ್‌ಸ್ಪೋರ್ಟ್ಸ್‌ಗ್ಲೋಬಲ್' ಮಾಧ್ಯಮದಲ್ಲಿ ಬಂದ ಮಾಹಿತಿಯನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕೊಹ್ಲಿ ಅವರು ಜೆರ್ಸಿಗೆ ಹಸ್ತಾಕ್ಷರ ಹಾಕುತ್ತಿರುವ ವಿಡಿಯೊ ತುಣಕನ್ನೂ ರೆವ್‌ಸ್ಪೋರ್ಟ್ಸ್‌ಗ್ಲೋಬಲ್‌ನ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. ಅನುಮಾನ ಬಂದು ಫೋಟೊವನ್ನು ಸೈಟ್‌ಎಂಜಿನ್ ಮತ್ತು ಅನ್‌ಡಿಟೆಕ್ಟೆಬಲ್ ಎಐ ಟೂಲ್‌ಗಳ ಮೂಲಕ ಪರಿಶೀಲಿಸಿದಾಗ ಅದು ಡಿಜಿಟಲ್ ತಂತ್ರಜ್ಞಾನದಲ್ಲಿ ತಿರುಚಿ, ಎಐ ಬಳಸಿ ತಯಾರಿಸಿದ ಫೋಟೊ ಎಂಬುದಕ್ಕೆ ಸುಳಿವುಗಳು ಸಿಕ್ಕವು. ಹಾಗಾಗಿ, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿರುವುದು ಮೂಲಫೋಟೊವಲ್ಲ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಖುಷಿಯಾಗುವುದು ಎಂದರೆ...

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಅಗ್ನಿರಾಜ ಮತ್ತು ವೀರಮತಿ ದಂಪತಿಗೆ ಆರು ಜನ ಹೆಣ್ಣುಮಕ್ಕಳು. ಅವರು ಬೆಳೆದಂತೆ ತಾರುಣ್ಯವೂ ಬೆಳೆದು ಹೆತ್ತವರಿಗೆ ತಮ್ಮ ಜವಾಬ್ದಾರಿಯನ್ನು ನೆನಪಿಸುವಂತಾಯ್ತು. ಒಂದು ದಿನ ಬೆಳಿಗ್ಗೆ ಯುವತಿಯರೆಲ್ಲರೂ ಒಟ್ಟಾಗಿ ಮಂದಿರಕ್ಕೆ ಹೊರಟು ತಂದೆ ತಾಯಿಯ ಆಶೀರ್ವಾದ ಪಡೆಯಲು ಬಂದರು. ಒಬ್ಬರಾದ ಮೇಲೊಬ್ಬರಂತೆ ಸಾಲಾಗಿ ಬಂದು ಮೊದಲು ತಾಯಿಗೂ ನಂತರ ತಂದೆಗೂ ಕಾಲಿಗೆರಗಿ ಮಂದಿರದತ್ತ ತೆರಳಿದರು. ಅಗ್ನಿರಾಜ ಮಕ್ಕಳನ್ನೆಲ್ಲ ಮನತುಂಬಿ ಹರಸಿ ಕಳಿಸುವಾಗ ತನ್ನ ಕಿರಿಯ ಮಗಳಾದ ಕೃತ್ತಿಕೆಯನ್ನು ವಿಶೇಷವಾಗಿ ಗಮನಿಸಿದ. ಅವನ ಮನಸ್ಸಿನಲ್ಲಿ ನಿರ್ಧಾರವೊಂದು ಮೊಳೆತು ತಡಮಾಡದೆ ಸಾಮಂತರು, ಮಾಂಡಲಿಕರು, ಮಂತ್ರಿ ಪರಿವಾರ ಮತ್ತು ಋಷಿಮುನಿಗಳನ್ನೆಲ್ಲಾ ಕರೆಸಿದ. ತನ್ನ ಆಳ್ವಿಕೆಗೆ ಒಳಪಟ್ಟ ರಾಜ್ಯದ ಯಾವುದೇ ಶ್ರೇಷ್ಠ ವಸ್ತು ಯಾರಿಗೆ ಸೇರತಕ್ಕದ್ದು ಎಂದು ಪ್ರಶ್ನಿಸಿದ. ಋಷಿಗಳನ್ನು ಹೊರತುಪಡಿಸಿ ಉಳಿದ ಎಲ್ಲರೂ ಒಕ್ಕೊರಲಿನಿಂದ ರಾಜನಾದವನಿಗೇ ಸೇರಬೇಕು ಎಂದರು. ವಸ್ತು ಯಾವುದು ಎಂದು ಸ್ಪಷ್ಟಪಡಿಸಿದರೆ ಹೇಳಬಹುದು ಎಂದು ಋಷಿಗಳು ತಿಳಿಸಿದರು. ತಕ್ಷಣ ರಾಜನಿಗೆ ಕೋಪ ಬಂತು. 'ಈ ಋಷಿಗಳು ಎಂದೂ ಮಾತುಕತೆಗೆ ಒಡಂಬಡುವವರಲ್ಲ, ಇವರು ಅಧಿಕಪ್ರಸಂಗಿಗಳು, ಇವರನ್ನು ರಾಜ್ಯದಿಂದ ಹೊರಗೆ ಓಡಿಸಿ' ಎಂದು ಆದೇಶಿಸಿದ. ತನ್ನ ಕೊನೆಯ ಮಗಳ ಸೌಂದರ್ಯಕ್ಕೆ ಮನಸೋತು ಅವಳನ್ನು ತಾನೇ ಮದುವೆಯಾದ ರಾಜನ ಈ ಕತೆ ವಡ್ಡಾರಾಧನೆ ಕೃತಿಯಲ್ಲಿದೆ.

ತಂದೆಯಾದವನು ಮಗಳನ್ನು ಮದುವೆಯಾಗಲು ತಳೆದ ಅನೈತಿಕ ನಿರ್ಧಾರ ಸರ್ವಾಧಿಕಾರಿಯ ಮನೋಧರ್ಮದ್ದು ಮಾತ್ರವಲ್ಲ, ಗಂಡುದರ್ಪದ್ದು ಕೂಡ. ಈ ಕತೆಯ ಆಶಯ ಬೇರೆಯೇ ಇದೆ. ಆದರೆ ನ್ಯಾಯ ನೀತಿ ಧರ್ಮದ ಸಮಾಜವನ್ನು ಕಾಪಾಡುವ ವಿಷಯದಲ್ಲಿ ರಾಜಿ ಒಲ್ಲದ ಋಷಿ ನಿಷ್ಠೆಯನ್ನು ಇಲ್ಲಿ ಕಾಣಬಹುದು. ಅಲ್ಲದೆ ಆಳುವವರ ನೀತಿಬಾಹಿರವೂ ಜನವಿರೋಧಿಯೂ ಆದ ನಿರ್ಧಾರಗಳನ್ನು ಪ್ರಶ್ನಿಸುವವರು ದೇಶಭ್ರಷ್ಟರಾಗುವ ವಿಚಿತ್ರವನ್ನೂ ನೋಡಬಹುದು. ಹೌದು, ಋಷಿ ಪರಂಪರೆಗೆ ಇಂಥ ಲೋಕ ನಿಷ್ಠುರ ಹೊಸದೇನೂ ಅಲ್ಲ. ಸರ್ವಾಧಿಕಾರ ಕೂಡ ಜನದ್ರೋಹದ ಪರಂಪರೆಯನ್ನೇ ಹೊಂದಿದೆ. ನ್ಯಾಯವಿದೂರವಾಗುತ್ತಿರುವ ಸಮಾಜದಲ್ಲಿ ಋಷಿನಿಷ್ಠೆ ಕುಸಿಯುತ್ತಿದೆ. ಆಳುವ ಕೆಲವರ ನಿರಂಕುಶ ಮನಃಸ್ಥಿತಿ ಜಾಗತಿಕವಾಗಿ ಸದ್ಯ ಗೆಲುವು ಪಡೆಯುತ್ತಿರುವಂತೆ ಕಾಣುತ್ತಿದೆ.

ಋಷಿಸದೃಶರಾಗಿ ಬದುಕಿದ ಹಲವರು ಸಾಮಾಜಿಕ ಬದಲಾವಣೆಯ ನಿರಂತರ ಮಾದರಿಗಳನ್ನು ಬಿಟ್ಟು ಹೋಗಿದ್ದಾರೆ. ಅಧ್ಯಾಪಕರು ತರಗತಿಗಳಲ್ಲಿ, ಪತ್ರಕರ್ತರು ಮಾಧ್ಯಮಗಳಲ್ಲಿ, ವಿಜ್ಞಾನಿಗಳು ಪ್ರಯೋಗಗಳಲ್ಲಿ, ದಾರ್ಶನಿಕರು ನಡೆನುಡಿಗಳಲ್ಲಿ ಸತ್ಯಪರ ಕ್ರಿಯಾಶೀಲತೆಯನ್ನು ಪ್ರತಿಷ್ಠಾಪಿಸುವ ಬದ್ಧತೆಯನ್ನು ಪ್ರದರ್ಶಿಸಬೇಕಾಗಿದೆ. ಇದು ಋಷಿನಿಷ್ಠೆ ವಿಸ್ತರಣೆಯಾಗುವುದಕ್ಕೆ ಅಗತ್ಯವಾದ ಕಾಲ. ಎಲ್ಲರ ಎಲ್ಲ ಬಗೆಯ ಅಹಂಕಾರಗಳ ಕುರಿತಾದ ಅಸಹನೆಯೇ ಆದ್ಯತೆಯಾಗಬೇಕಾದ ಹೊತ್ತಿದು. ಅಂದರೆ ಅನೈತಿಕವಾದುದರ ವಿರುದ್ಧ ಹುಟ್ಟಬೇಕಾದ ಪ್ರತಿರೋಧ. ಎಲ್ಲರೊಳಗೊಂದಾಗುವ ಸಾಮಾಜಿಕ ಮಮತೆಯ ಬೆಳಸನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಋಷಿ ಮೌಲ್ಯಗಳ ಭಾಗವಾಗಿದೆ. ಖುಷಿಯಾಗುವುದೆಂದರೆ ಸಾಮಾಜಿಕ ಅನಿಷ್ಟಗಳು ಮತ್ತು ಅನೈತಿಕತೆಯ ವಿರುದ್ಧದ ಪ್ರಾತಿನಿಧಿಕ ಪ್ರಜ್ಞೆ. ಸದಾ ಸತ್ಯಪರ ದನಿಯ ಅನಾವರಣ. ಲೌಕಿಕ ಸುಖಭೋಗಗಳಿಂದ ದೂರವಿರುವುದು ಎಂಬುದು ಋಷಿಯ ಋತಪ್ರಜ್ಞೆಗೆ ಪೂರಕ ಅಷ್ಟೇ.

ತಿದ್ದುಪಡಿ: 'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯ 'ನುಡಿ ಬೆಳಗು' ಅಂಕಣದಲ್ಲಿ ಪ್ರಕಟವಾಗಿರುವ ಲೇಖನ ದೀಪಾ ಹಿರೇಗುತ್ತಿ ಅವರದ್ದು. ದಾದಾಪೀರ್ ನವಿಲೇಹಾಳ್ ಅವರ ಹೆಸರಿನಲ್ಲಿ ತಪ್ಪಾಗಿ ಪ್ರಕಟವಾಗಿದೆ.

ಗುಂಡಣ್ಣ

ಪದಬಂಧ 6200

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅವಸರದಲ್ಲೇ ಪ್ರಕಟಿಸಿದ ಉತ್ಕಟೇಚ್ಛೆ! (3)
5.ಗಡಿಯ ಕೊನೆಯಲ್ಲಿ ಹೂಡಿದ ವಂಚನೆ (5)
7.ಯಾವ ಚಿಂತೆಯೂ ಇಲ್ಲದ ಭಾವ (3)
9.ಕರದೊಳಗೆ ಉದ್ಯೋಗಸ್ಥದ್ದಾನಲ್ಲಾ! (5)
13.ತಲೆಕೂದಲ ಬುಡದಲ್ಲಿ ಉಂಟಾಗುವ ಹೊಟ್ಟು (3)
15.ಹೆಸರಿಡುವ ಶಾಸ್ತ್ರ (5)
16.ನರನ ಜಿಹ್ವೆ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಆಭರಣಿಯಲ್ಲಿರುವ ನಗ (4)
2.ಕೋರೆಗಳನ್ನುಳ್ಳದ್ದು (3)
3.ಏಳು ಲೋಕಗಳಲ್ಲಿ ಇದೊಂದು (3)
4.ಮಣ್ಣಿನ ಪಾತ್ರೆ ಇಲ್ಲಿದೆ (2)
6.ನಮಸ್ಕಾರ ಎನ್ನುತ್ತಲೇ ತೋರಿದ ತಾತ್ಸಾರ! (4)
8.ರಾಯರಿಂದ ಬಂದಿರುವ ನಿರೂಪ (3)
9.ಕನ್ನಡಿಗರ ಹೆಮ್ಮೆಯ ನಾಡು (4)
10.ಎಣ್ಣೆ ತೆಗೆದು ಮಾರಿ ಜೀವಿಸುವವನು (3)
11.ಮನದೊಳಗಿರುವ ಕುಲ (4)
12.ನಾದಿನಿ ಹಾಕಿದ ತಳಪಾಯ (3)
13.ಹಣ ಕೊಟ್ಟು ಖರೀದಿಸಿದ ಸೊಡರು (3)
14.ರಕ್ತವನ್ನು ಹೀಗೂ ಹೇಳುವರು (3)



6199ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಹಚುಂಬಕ 3.ಕುಂಬಾರ
5.ರಮು 8.ಆರ್ಯಭಟ
10.ಕರುಳು 11.ಕಂದರ
12.ರಾಣಿವಾಸ 15.ಯಮ
17.ಸಮಸ್ಯೆ 18.ರತ್ನಖಚಿತ

ಮೇಲಿಂದ ಕೆಳಕ್ಕೆ:
1.ಲೋಲಕ 2.ಕರ
4.ರಕ್ತಸಂಚಾರ 6.ಮುಕುಟ
7.ಧೈರ್ಯ 8.ಆಳು
9.ಭರಣಿ 10.ಕನಕದಾಸ
11.ಕಂಸ 12.ರಾಧೇಯ
13.ವಾಲಿ 14.ಪರಾತ
16.ಮರ

ಸುಡೊಕು 6584

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9				5		6	
2	7		4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8		7		3	2		4

6583 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಅಕ್ಟೋಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಅಶ್ವಯುಜ ಕೃಷ್ಣ ಅಮಾವಾಸ್ಯೆ ಗಂ. 17-55 **ನಕ್ಷತ್ರ:** ಚಿತ್ರಾ ಗಂ. 22-59 **ಯೋಗ:** ವಿಷ್ಕಂಭ ಗಂ. 27-16 **ಕರಣ:** ನಾಗ ಗಂ. 17-55 ತುಲಾ ಮಾಸದ 04 ನೇ ದಿನ. **ಮಳೆ ನಕ್ಷತ್ರ:** ಚಿತ್ತಾ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 03-00 04-30, **ಸೂರ್ಯೋದಯ:** 06-26 **ಸೂರ್ಯಾಸ್ತ:** 06-05, ಮುಸ್ಲಿಂ ದಿನಾಂಕ : 28 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ:** 7, 12

ಮೇಷ: ಮಾಡುತ್ತಿರುವ ಯೋಗಾಭ್ಯಾಸ ಹಾಗೂ ವೈದ್ಯರ ಸಲಹೆಯಿಂದ ಆರೋಗ್ಯವು ಸುಧಾರಿಸುವುದು. ಆತ್ಮವಿಶ್ವಾಸದಿಂದಾಗಿ ಕೆಲಸಕಾರ್ಯಗಳಲ್ಲಿ ಅತಿ ಯಶಸ್ಸು ಹೊಂದುವಿರಿ.

ವೃಷಭ: ಹರಿತ ಮಾತುಗಳು ಕೆಲವರ ತೇಜೋವಧೆಯನ್ನು ಮಾಡಬಹುದು. ಅದಕ್ಕೆ ಅವಕಾಶವನ್ನು ಕೊಡದಿರಿ. ಅಡುಗೆಯಲ್ಲಿ ಉಂಟಾದ ವ್ಯತ್ಯಾಸದಿಂದ ಅಸಮಾಧಾನ ಉಂಟಾಗಬಹುದು.

ಮಿಥುನ: ರಾಜಕೀಯ ಪ್ರತಿಸ್ಪರ್ಧಿಗಳು ಗಲಾಟೆಯನ್ನು ಉಂಟುಮಾಡಬಹುದು. ಹಿಂದಿಕ್ಕುವ ಪ್ರಯತ್ನವನ್ನು ಮಾಡಲಿದ್ದಾರೆ. ಒಳ್ಳೆಯ ನಡತೆಗಳು ತಾಯಿಯ ಪ್ರತಿಬಿಂಬದಂತೆ ಕಾಣಲಿವೆ.

ಕರ್ಕಾಟಕ: ಸುಖಕರ ಜೀವನವನ್ನು ನಡೆಸುತ್ತಿರುವಾಗ ಸಣ್ಣ ಪುಟ್ಟ ಕಷ್ಟಗಳು ಬಂದದ್ದೇ ಹೆಚ್ಚಾಗಿ ಕಾಣಬಹುದು. ಹಿಂಸೆಯುಂಟಾಗುತ್ತದೆ ಎನ್ನಿಸುವ ವಿಚಾರದಿಂದ ಆದಷ್ಟು ದೂರ ಇರುವಂಥ ಪ್ರಯತ್ನವನ್ನು ಮಾಡಿ.

ಸಿಂಹ: ವಿಶೇಷ ಆಹಾರವನ್ನು ತಿನ್ನುವ ಅವಕಾಶವಿದ್ದರೂ ಆರೋಗ್ಯದ ದೃಷ್ಟಿಯಿಂದ ಹಿಂದೆ ಸರಿಯುವಿರಿ. ವ್ಯಾಪಾರ ವ್ಯವಹಾರಗಳಿಂದ ಸಣ್ಣ ಬಿಡುವು ತೆಗೆದುಕೊಳ್ಳುವಿರಿ. ನಿತ್ಯದ ಔಷಧಿಯನ್ನು ಮರೆಯಬೇಡಿ.

ಕನ್ಯಾ: ಅನುಪಸ್ಥಿತಿಯನ್ನು ಕುಟುಂಬದವರು ದುಃಖದಿಂದ ಅನುಭವಿಸುವರು. ಸಣ್ಣಪುಟ್ಟ ವಿಷಯಗಳಿಗೂ ಬಹಳವಾಗಿ ನೊಂದುಕೊಳ್ಳುವಿರಿ. ವಾಹನವನ್ನು ಚಲಾಯಿಸುವಾಗ ಜಾಗ್ರತೆ ವಹಿಸಿ.

ತುಲಾ: ಹಲವು ದಿನಗಳ ತಿರುಗಾಟದಿಂದ ದೇಹಾಯಾಸ ಹೊಂದುವಿರಿ. ವಾರ್ಷಿಕವಾಗಿ ನಡೆಯಬೇಕಾದ ಮನೆಯ ಸಂಪ್ರದಾಯ ನಡೆಸುವ ಜವಾಬ್ದಾರಿ ತೆಗೆದುಕೊಳ್ಳುವಿರಿ. ಕೃಶವಾದ ಶರೀರವನ್ನು ಪುಷ್ಟಿಗೊಳಿಸುವ ಕಡೆ ಗಮನಿಸಿ.

ವೃಶ್ಚಿಕ: ಸಾರ್ವಜನಿಕರ ಸ್ವತ್ತನ್ನು ಹಾಳುಗೆಡುವಿದ ಪರಿಣಾಮವಾಗಿ ದಂಡ ಕಟ್ಟುವಿರಿ. ಈಶ್ವರನ ಉಪಾಸನೆ ಮಾಡುವುದು ಉತ್ತಮ. ತಿಂಗಳ ಸಂಬಳ ಈಗಾಗಲೇ ಖಾಲಿಯಾದ ಪರಿಸ್ಥಿತಿ ಬರುವುದು.

ಧನು: ಮನೆಯಲ್ಲಿರುವ ಸಣ್ಣಮಕ್ಕಳ ಆರೋಗ್ಯದಲ್ಲಿನ ವ್ಯತ್ಯಾಸ ಆತಂಕಕ್ಕೆ ಕಾರಣವಾಗುವುದು. ಹಣಕಾಸಿನ ಜವಾಬ್ದಾರಿಯನ್ನು ಮಕ್ಕಳಿಗೆ ವಹಿಸುವ ಕೆಲಸ ಮಾಡುವಿರಿ. ಧ್ಯಾನ ಯೋಗದಲ್ಲಿ ಆಸಕ್ತಿ ಬರುವುದು.

ಮಕರ: ಶಕ್ತಿಗಿಂತ ಯುಕ್ತಿಯೇ ಮೇಲು ಎಂಬುದನ್ನು ತೋರಿಸುವಿರಿ. ಮನೆಯನ್ನು ಸ್ವಚ್ಛಗೊಳಿಸುವ ಕಾರ್ಯವು ಸವಾಲಾಗುವುದು. ಮಾಡಿದ ಎಲ್ಲಾ ಕೆಲಸಗಳನ್ನು ಮತ್ತೊಮ್ಮೆ ಇಂಚು ಇಂಚಾಗಿ ಪರಿಶೀಲನೆ ಮಾಡುವುದು ಸೂಕ್ತ.

ಕುಂಭ: ಸಾಲಗಾರರು ಸಾಲ ಚುಕ್ತ ಮಾಡಲು ಹೆಣಗಾಡುವಿರಿ. ಚಿತ್ರಕಲಾಕಾರರಿಗೆ ವಿಶೇಷ ಅವಕಾಶ ಸಿಗುತ್ತದೆ. ನವದಂಪತಿ ಪ್ರಯಾಣ ಮಾಡುವುದಿದ್ದಲ್ಲಿ ಬಹಳ ಮುಂಜಾಗ್ರತೆ ವಹಿಸಬೇಕು.

ಮೀನ: ಶುಭಸಮಾರಂಭಕ್ಕೆ ಬಂಧು-ಮಿತ್ರರ ದೊರೆಯಲಿದೆ. ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. ಮನೆಯವರೆಲ್ಲರೂ ಕೆಲಸ ಕಾರ್ಯಗಳಲ್ಲಿ ನಿಮ್ಮಿಚ್ಛೆಯಂತೆ ನಡೆದುಕೊಳ್ಳುವರು.

ಚಿಟಿಕೆ ಸುದ್ದಿ

‘₹50 ಸಾವಿರ ಕೋಟಿ ವಿದೇಶಿ ಹೂಡಿಕೆ’

ನವದೆಹಲಿ (ಪಿಟಿಐ): ದೇಶದ ಹಣಕಾಸು ಮತ್ತು ಬ್ಯಾಂಕಿಂಗ್ ವಲಯಗಳಲ್ಲಿ ₹50 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡುವ ಯೋಜನೆಯನ್ನು ವಿದೇಶಿ ಹೂಡಿಕೆದಾರರು ಕಳೆದ ಕೆಲವು ತಿಂಗಳುಗಳಲ್ಲಿ ಪ್ರಕಟಿಸಿದ್ದಾರೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಎದುರಾಗುತ್ತಿದ್ದರೂ ಭಾರತವು ಹೂಡಿಕೆಯ ಓಯಸಿಸ್‌ನಂತೆ ಕಾಣುತ್ತಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಇಂದು ಭಾರತವು ಆದ್ಯತೆಯ ಹೂಡಿಕೆ ತಾಣವಾಗಿ ಮುಂದೆ ಬರುತ್ತಿದೆ ಎಂದು ಹೇಳಿದ್ದಾರೆ.

ಅಸ್ಥಿರತೆಯ ಕಾಲಘಟ್ಟದಲ್ಲಿಯೂ ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ಹರಿವು ಚೆನ್ನಾಗಿಯೇ ಇದೆ. ಎಫ್‌ಡಿಐನಲ್ಲಿನ ಹೆಚ್ಚಳವು ದೇಶದ ಅರ್ಥ ವ್ಯವಸ್ಥೆಯು ಹೂಡಿಕೆದಾರರಿಗೆ ಹೆಚ್ಚೆಚ್ಚು ಆಕರ್ಷಕವಾಗಿ ಕಾಣುತ್ತಿದೆ ಎಂಬುದನ್ನು ಹೇಳುತ್ತಿದೆ ಎಂದು ಕೂಡ ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 20-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1405 (1410)
ಪಾಮ್ ವಾರದ ಡೆಲಿವರಿ	1288 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1425)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,29,500 (1,27,600)
ಬೆಳ್ಳಿ ಕೆ.ಜಿಗೆ	1,64,000 (1,64,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,709
ಇಂದಿನ ಅಂತ್ಯ:	25,843
ದಿನದ ಕನಿಷ್ಠ:	25,926
	133

ಮೊಟ್ಟೆ ಧಾರಣೆ (ಎನ್‌ಇಸಿಸಿ)	ಬೆಂಗಳೂರು	
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹583

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1475 (1485)
ಪಾಮೋಲಿನ್	₹1290 (1295)

ಷೇರುಪೇಟೆಯಲ್ಲಿ ತೇಜಿ ವಹಿವಾಟು

ಸತತ ನಾಲ್ಕು ದಿನಗಳಿಂದ ಏರುಹಾದಿಯಲ್ಲಿ ಇರುವ ಸೂಚ್ಯಂಕಗಳು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ನಾಲ್ಕು ದಿನಗಳಿಂದ ತೇಜಿ ವಹಿವಾಟು ನಡೆಯುತ್ತಿದೆ. ಷೇರುಪೇಟೆಯ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸೋಮವಾರ ಕೂಡ ಏರಿಕೆ ದಾಖಲಿಸಿವೆ.

ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಖರೀದಿ ಜೋರಾಗಿದ್ದುದು, ವಿದೇಶಿ ಹೂಡಿಕೆದಾರರು ಷೇರುಗಳ ಖರೀದಿಗೆ ಮುಂದಾಗಿದ್ದುದು ಸೋಮವಾರದ ಏರಿಕೆಗೆ ಕಾರಣವಾದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಚುರುಕಿನ ವಹಿವಾಟು ಕೂಡ ಏರಿಕೆಗೆ ನೆರವಾಗಿ ಒದಗಿಬಂತು.

ಸೆನ್ಸೆಕ್ಸ್ 411 ಅಂಶ ಏರಿಕೆ ಕಂಡು 84,363 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ನಿಫ್ಟಿ 133 ಅಂಶ ಏರಿಕೆ ಕಂಡು 25,843 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರುಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಶೇಕಡ 3.52ರಷ್ಟು ಏರಿಕೆ ಕಂಡಿದೆ. ಕಂಪನಿಯು ಶುಕ್ರವಾರ ತನ್ನ ಹಣಕಾಸಿನ ಫಲಿತಾಂಶ ಪ್ರಕಟಿಸಿದ್ದು, ಲಾಭದ ಪ್ರಮಾಣವು ಶೇ 9.6ರಷ್ಟು ಹೆಚ್ಚಾಗಿದೆ ಎಂದು ತಿಳಿಸಿತ್ತು. ಕಂಪನಿಯ ರಿಟೇಲ್ ಹಾಗೂ ದೂರಸಂಪರ್ಕ ವಹಿವಾಟುಗಳಲ್ಲಿ ಉತ್ತಮ ಬೆಳವಣಿಗೆ ಕಂಡುಬಂದಿದೆ ಎಂಬುದನ್ನು ಹಣಕಾಸಿನ ಫಲಿತಾಂಶವು ಹೇಳಿದೆ.

‘ಎರಡನೆಯ ತ್ರೈಮಾಸಿಕದಲ್ಲಿ ಕಂಪನಿಗಳ ಹಣಕಾಸು ಫಲಿತಾಂಶವು ನಿರೀಕ್ಷೆಗಿಂತ ಹೆಚ್ಚು ಉತ್ತಮವಾಗಿರುವುದು ಹಾಗೂ ಹಬ್ಬದ ಉತ್ಸಾಹವು ಏರಿಕೆಗೆ ಕಾರಣ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಇಂದು ಮುಹೂರ್ತ ವಹಿವಾಟು

ಮುಂಬೈ ಷೇರುಪೇಟೆ (ಬಿಎಸ್‌ಇ) ಮತ್ತು ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಮಂಗಳವಾರ ಮಧ್ಯಾಹ್ನ 1.45ರಿಂದ 2.45ರವರೆಗೆ ದೀಪಾವಳಿ ಹಬ್ಬದ ಪ್ರಯುಕ್ತ ಮುಹೂರ್ತ ವಹಿವಾಟು ನಡೆಯಲಿದೆ.

ಮುಹೂರ್ತ ವಹಿವಾಟು ಹೊರತುಪಡಿಸಿದರೆ ಮಂಗಳವಾರ ಎಂದಿನ ವಹಿವಾಟು ಇರುವುದಿಲ್ಲ. ಬುಧವಾರ ಬಲಿಪಾಡ್ಯಮಿ ಅಂಗವಾಗಿ ಮಾರುಕಟ್ಟೆಗೆ ರಜೆ ಇರಲಿದೆ.

ಶುಭಪ್ರದವಾಗಿರುವ ಮುಹೂರ್ತ ವಹಿವಾಟಿನಲ್ಲಿ ತೊಡಗುವುದರಿಂದ ಸಮೃದ್ಧಿ ಮತ್ತು ಹಣಕಾಸಿನ ಬೆಳವಣಿಗೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ಹಲವರಲ್ಲಿ ಇದೆ.

ಸುದ್ದಿ 2 ನಿಮಿಷ

ಬೆಂಗಳೂರಿನಲ್ಲಿ ಮನೆಗಳ ಮಾರಾಟ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈನಲ್ಲಿ ಮನೆಗಳ ಮಾರಾಟವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 47ರಷ್ಟು ಏರಿಕೆಯಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಪ್ರಾಪ್‌ಟೈಗರ್ ಸೋಮವಾರ ಹೇಳಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಈ ಮೂರು ನಗರಗಳಲ್ಲಿ 26,284 ಮನೆಗಳು ಮಾರಾಟವಾಗಿದ್ದವು. ಈ ಬಾರಿ 38,644 ಮನೆಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಹೈದರಾಬಾದ್‌ನಲ್ಲಿ ಮನೆಗಳ ಮಾರಾಟ ಶೇ 53ರಷ್ಟು ಹೆಚ್ಚಳವಾಗಿದ್ದು, 17,658 ಮನೆಗಳು ಮಾರಾಟವಾಗಿವೆ. ಬೆಂಗಳೂರಿನಲ್ಲಿ ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 11,160 ಮನೆಗಳು ಮಾರಾಟವಾಗಿದ್ದವು. ಈ ಬಾರಿ 13,124 ಮನೆಗಳು ಮಾರಾಟವಾಗಿದ್ದು, ಶೇ 18ರಷ್ಟು ಏರಿಕೆಯಾಗಿದೆ. ಚೆನ್ನೈನಲ್ಲಿ ಮನೆಗಳ ಮಾರಾಟ ದುಪ್ಪಟ್ಟಾಗಿದ್ದು, 7,862 ಮನೆಗಳ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ 3,560 ಮನೆಗಳು ಮಾರಾಟವಾಗಿವೆ.

ಮುಂಬೈ, ಪುಣೆ, ದೆಹಲಿ–ಎನ್‌ಸಿಆರ್‌ನಲ್ಲಿ ಮನೆಗಳಿಗೆ ಬೇಡಿಕೆ ಇಳಿಕೆಯಾಗಿದೆ. ದೇಶದ ಪ್ರಮುಖ ಎಂಟು ಮಾರುಕಟ್ಟೆಗಳಲ್ಲಿ ಹಿಂದಿನ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 96,544 ಮನೆಗಳು ಮಾರಾಟವಾಗಿದ್ದವು. ಈ ಬಾರಿ 95,547 ಮಾರಾಟವಾಗಿದ್ದು, ಮಾರಾಟ ಶೇ 1ರಷ್ಟು ಇಳಿಕೆಯಾಗಿದೆ.

ಮುಂಬೈ ಮಹಾನಗರ ಪ್ರದೇಶದಲ್ಲಿ 23,334. ಪುಣೆಯಲ್ಲಿ 12,990, ದೆಹಲಿ–ಎನ್‌ಸಿಆರ್ ನಲ್ಲಿ 7,961 ಮತ್ತು ಅಹಮದಾಬಾದ್‌ನಲ್ಲಿ 8,889 ಮನೆ ಮಾರಾಟವಾಗಿವೆ. ಕೋಲ್ಕತ್ತದಲ್ಲಿ ಮನೆಗಳ ಮಾರಾಟದಲ್ಲಿ ಶೇ 33ರಷ್ಟು ಹೆಚ್ಚಳವಾಗಿದ್ದು, 3,729 ಮನೆಗಳು ಮಾರಾಟವಾಗಿವೆ.



ಬೆಂಗಳೂರು–ಬಳ್ಳಾರಿ ನಡುವೆ ಸ್ಟಾರ್ ಏರ್ ವಿಮಾನ ಸೇವೆ

ಬಳ್ಳಾರಿ: ‘ಸ್ಟಾರ್ ಏರ್’ ವಿಮಾನಯಾನ ಕಂಪನಿಯು ನವೆಂಬರ್ 1ರಿಂದ ಬೆಂಗಳೂರು–ಬಳ್ಳಾರಿ (ತೋರಣಗಲ್‌ನ ವಿದ್ಯಾನಗರದಲ್ಲಿರುವ ಜಿಂದಾಲ್ ವಿಮಾನ ನಿಲ್ದಾಣ) ನಡುವೆ ನಿತ್ಯ ವಿಮಾನ ಸೇವೆ ಆರಂಭಿಸಲಿದೆ.

‘ಬೆಂಗಳೂರಿನಿಂದ ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿಗೆ ಸುಲಭವಾಗಿ ಭೇಟಿ ನೀಡಬಹುದು. ಬೆಂಗಳೂರಿನಿಂದ ವಿದ್ಯಾನಗರಕ್ಕೆ ನಿತ್ಯ ಬೆಳಿಗ್ಗೆ 7.50ಕ್ಕೆ ವಿಮಾನ ಸೇವೆ ಲಭ್ಯವಾಗಲಿದೆ. ವಿದ್ಯಾನಗರದಿಂದ ಬೆಂಗಳೂರಿಗೆ ನಿತ್ಯ ಬೆಳಿಗ್ಗೆ 9.10ಕ್ಕೆ ವಿಮಾನ ಇರಲಿದೆ’ ಎಂದು ಕಂಪನಿ ತಿಳಿಸಿದೆ.

ಲಕ್ಷ್ಮಿ: ಜೀವನದ ಬೆಳಕು

• ನಚಿಕೇತ್ ಹೆಗಡೆ

ಮನುಷ್ಯನ ಬದುಕನ್ನು ಅರ್ಥಪೂರ್ಣವಾಗಿಸಲು ಮತ್ತವನನ್ನು ಪರಿಪೂರ್ಣನನ್ನಾಗಿಸಲು ಸಂಸ್ಕೃತಿಯು ನಾಲ್ಕು ಸಾಧನಗಳನ್ನು ರೂಪಿಸಿಕೊಂಡಿದೆ. ಅವೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು. ಈ ಪುರುಷಾರ್ಥಗಳ ಚೌಕಟ್ಟು ಈಗಾಗಲೇ ಅರ್ಥಕಾಮಗಳ ಕುರಿತಾಗಿ ಮನುಷ್ಯನಿಗಿರುವ ಅತ್ಯಂತ ಆಸ್ಥೆ ಮತ್ತು ಮಿತಿಮೀರಿದ ಹವಣಿಗೆ ಧರ್ಮದ ಕಡಿವಾಣವನ್ನು ತೊಡಿಸುತ್ತವೆ ಮತ್ತು ಮೋಕ್ಷದ ಗುರಿಯನ್ನು ತೋರಿಸುತ್ತವೆ.

ಇವುಗಳಲ್ಲಿ ಎರಡನೆಯದಾದ ಅರ್ಥವು - ಧರ್ಮ ಮತ್ತು ಧರ್ಮಕ್ಕೆ ಅವಿರುದ್ಧವಾದ ಕಾಮ - ಈ ಎರಡನ್ನೂ ಬೆಸೆಯುವ ಕೊಂಡಿಯಾಗಿ ಒದಗಿಬರುತ್ತದೆ. ಮನುಷ್ಯನೊಬ್ಬನ ಧರ್ಮಪೂರ್ಣವಾದ ಕಾಮ(ಬಯಕೆ)ಗಳನ್ನು ಅರ್ಥವು ಈಡೇರಿಸುತ್ತದೆ. ಮತ್ತೊಂದು ನೆಲೆಯಿಂದ ಹೇಳುವುದಾದರೆ ಧಾರ್ಮಿಕವಾದ

ಕಾಮನೆಗಳನ್ನು ಸಾಧಿಸಲು ಒದಗಿಬರುವ ಸಾಧನಗಳೆಲ್ಲವೂ ‘ಅರ್ಥ’ಗಳೇ! ಅದು ಅಷ್ಟೈಶ್ವರ್ಯಗಳಿರಬಹುದು, ಸಿದ್ಧಿಗಳಿರಬಹುದು, ಸಂತಾನವಿರಬಹುದು ಅಥವಾ ವಿದ್ಯೆಯೂ ಇರಬಹುದು – ಎಲ್ಲವೂ ಒಂದರ್ಥದಲ್ಲಿ ಅರ್ಥಗಳೇ.

ಇಂಥ ಅರ್ಥವನ್ನು ಸನಾತನ ಪರಂಪರೆ ಸಾಕಾರಗೊಳಿಸಿಕೊಂಡಿರುವುದು ಲಕ್ಷ್ಮೀದೇವಿಯ ರೂಪದಲ್ಲಿ. ನಾಲ್ಕು ದಿಗ್ಗಜಗಳಿಂದ ಜಲಾಭಿಷೇಕವನ್ನು ಮಾಡಿಸಿಕೊಳ್ಳುತ್ತ ಕುಂಭವೊಂದರಲ್ಲಿ ಸಂಪತ್ತನ್ನು ತುಂಬಿಕೊಂಡು ಕಮಲದ ಮೇಲೆ ಕುಳಿತಿರುವಂತೆ ಸಾಮಾನ್ಯವಾಗಿ ಈಕೆ ಚಿತ್ರಿತಳಾಗುತ್ತಾಳೆ. ಅಂತಹ ಈ ದೇವಿಯು ಹರಿಯ ಹೃದಯವಾಸಿಯೂ ಹೌದು. ಹಾಗಾಗಿಯೇ ನಾರಾಯಣನು ರಮಾರಮಣನೂ ಹೌದು, ಶ್ರೀನಿಧಿಯೂ ಹೌದು. ಆತನ ಹೃದಯಕವಾಟವನ್ನು ತಟ್ಟಬಲ್ಲಷ್ಟು ಧರ್ಮದ ಸಂಚಯವಿರುವವರಿಗಷ್ಟೇ ಅದರೊಳಗಿನ ಲಕ್ಷ್ಮಿಯ ಪ್ರಾಪ್ತಿ ಎನ್ನುವುದೇ ಇದರ ಸಂಕೇತವಾಗಿದ್ದಿರಲಿಕ್ಕೂ ಸಾಕು!

ಲಕ್ಷ್ಮಿಯು ಅರ್ಥದ ಸಾಕಾರ ಎಂದು ನೋಡಿದೆವಷ್ಟೇ. ಹಾಗೆಂದೇ ಅದರ ಬಗೆಬಗೆಯ ರೂಪಗಳನ್ನು ಅವಳು ತಾಳುತ್ತಾಳೆ. ಒಮ್ಮೆ ಸಂತಾನಲಕ್ಷ್ಮಿಯಾಗಿಯೂ, ಮತ್ತೊಮ್ಮೆ ಅದೃಷ್ಟಲಕ್ಷ್ಮಿಯಾಗಿಯೂ, ಮಗದೊಮ್ಮೆ ವಿದ್ಯಾಲಕ್ಷ್ಮಿಯಾಗಿಯೂ, ಐಶ್ವರ್ಯಲಕ್ಷ್ಮೀ, ಗಜಲಕ್ಷ್ಮಿಯೇ ಮೊದಲಾದ ಎಂಟು ರೂಪಗಳಲ್ಲಿಯೂ ಪ್ರಕಟಳಾಗಿ ಜಗಚ್ಚಕ್ರವನ್ನು ಮುನ್ನಡೆಸುತ್ತಾಳೆ.

ಇಂಥ ದೇವಿಯನ್ನು ನಾವು ದೀಪಾವಳಿಯ ಹೊತ್ತಿನಲ್ಲಿ ಮನೆಗೆ ಬರಮಾಡಿಕೊಂಡು ಪೂಜಿಸುತ್ತೇವೆ. ಭಾರತದ ಉತ್ತರದ ದೇಶಗಳಲ್ಲಿ ತ್ರಯೋದಶಿಯಂದೇ ‘ಧನತ್ರಯೋದಶಿ’ ಅಥವಾ ‘ಧನ್ ತೆರಾಸ್’ ಎನ್ನುವುದಾಗಿ ಆಚರಿಸಲ್ಪಡುತ್ತದೆ, ಈ ಉತ್ಸವ. ಅಂದು ಲಕ್ಷ್ಮಿಯನ್ನು ಆವಾಹಿಸಿ ಪೂಜೆಗೈದು ಮನೆಮನೆಗೆ ಸಿಹಿಯನ್ನು ಹಂಚಿ, ಆಪ್ತರೊಂದಿಗೆ ಸೇರಿ ನರ್ತಿಸುವುದೇ ಮೊದಲಾದ ವಿಧಾನಗಳಿಂದ ಉತ್ತರದವರು ಈ ಪರ್ವವನ್ನು ಸಂಭ್ರಮಿಸುತ್ತಾರೆ.

ಇನ್ನು ದಕ್ಷಿಣದವರು ಅಮಾವಾಸ್ಯೆಯಂದು ರಾತ್ರಿಯ ಕಾಲದಲ್ಲಿ ಲಕ್ಷ್ಮಿಯನ್ನು ಬರಮಾಡಿಕೊಳ್ಳುವರು. ತಾವು ಸಂಪತ್ತು ಎಂದು ಭಾವಿಸುವ ವಸ್ತುಗಳನ್ನು ವಿಶೇಷವಾಗಿ ಅಲಂಕರಿಸಿ ಪೂಜಿಸುತ್ತಾರೆ; ಫಲಪುಷ್ಪಾದಿಗಳನ್ನು ನಿವೇದಿಸುತ್ತಾರೆ. ಹತ್ತಿರದ ದೇವಾಲಯಗಳಲ್ಲಿ ಊರಿನವರೆಲ್ಲ ಜೊತೆಸೇರಿ ದೀಪಗಳನ್ನು ಬೆಳಗಿ ತಮ್ಮ ಪಾಲಿನ ಸೇವೆಯನ್ನರ್ಪಿಸಿ ಕೃತಾರ್ಥರಾಗುತ್ತಾರೆ.

ಉತ್ಸವಗಳು ಹೀಗೆ ಪುರುಷಾರ್ಥಗಳ ಸಾಧನೆಯನ್ನು ನೆನಪಿಸಿ ಆ ದಿಶೆಯಲ್ಲಿ ಮನುಷ್ಯರನ್ನು ಪ್ರೇರೇಪಿಸುವ ಶಕ್ತಿಯಾಗಿಯೂ, ಸಮುದಾಯಪ್ರಜ್ಞೆಯನ್ನು ಜಾಗ್ರತಗೊಳಿಸುವ ಸಾಧನಗಳಾಗಿಯೂ ಈ ನೆಲದ ಜನಜೀವನವನ್ನು ಲವಲವಿಕೆಯಿಂದ ತುಂಬಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಪ್ರವಾಸ

Travel Agencies

4 ಜ್ಯೋತಿರ್ಲಿಂಗದೊಂದಿಗೆ ಗುಜರಾತ್ ಹಾಗೂ ಮಧ್ಯಪ್ರದೇಶ ಪ್ರವಾಸ ನಾಗೇಶ್ವರ ಸೋಮನಾಥ್ ಓಂಕಾರೇಶ್ವರ್ ಮಹಾಕಾಳೇಶ್ವರ ನಿಷ್ಕಳಂಕ ಮಹಾದೇವ ಗಂಗೇಶ್ವರ ಮಹಾದೇವ್ ಇತರೆ ಸ್ಥಳಗಳು: 9480843945/ 9019462508

6 ದಿನಗಳು ದುಬೈ, 6 ದಿನಗಳು ಬಾಲಿ, ನಾಲ್ಕು ದಿನಗಳು ಲಂಕಾವಿ, 7 ದಿನಗಳು ಜಪಾನ್ ಭಟ್ ಟ್ರಾವೆಲ್ಸ್:9844037295/ 9844166555

Travel

ಕಾಶಿ ನೇಪಾಳ ಪ್ರವಾಸ 17.11.2025 ರಿಂದ 15 ದಿನಗಳು. ಅಯೋಧ್ಯ ಲುಂಬಿನಿ ಪೋಖ್ರಾ,ಮುಕ್ತಿನಾಥ ಕಟ್ಮಂಡು ಜನಕಪುರ್ ಬೈದ್ಯನಾಥ್ ಜ್ಯೋತಿರ್ಲಿಂಗ ಗಯಾ,ಕಾಶಿ ಪ್ರಯಾಗ್,ಗುಜರಾತ್ ಮಧ್ಯಪ್ರದೇಶ ಪ್ರವಾಸ 03.12.2025, 14.12.2025 ರಿಂದ 11 ದಿನಗಳು ಅಹಮದಾಬಾದ್ ಮಾತೃಗಯಾ ದ್ವಾರಕಾ ಸೋಮನಾಥ್ ಗಂಗೇಶ್ವರ ನಿಷ್ಕಳಂಕಮಹಾದೇವ್ ವಲ್ಲಭಾಯ್ ಪಟೇಲರ ಪ್ರತಿಮೆ ಉಜ್ಜಯಿನಿ ಮಹಾಕಾಳೇಶ್ವರ ಓಂಕಾರೇಶ್ವರ ವಿಮಾನ/ಎಸಿ ಬಸ್ಸಿನಲ್ಲಿ ಪ್ರವಾಸ ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ ಅನಿತಾ ಟ್ರಾವೆಲ್ಸ್ ಶೇಷಾದ್ರಿಪುರ ಬೆಂಗಳೂರು. 7760884305 9448602641

ಕಾಶಿ ಅಯೋಧ್ಯ, ಗಯಾ,ಕೊಲ್ಕತ್ತಾ ಪುರಿಜಗನ್ನಾಥ್ ಭುವನೇಶ್ವರ್ 10 ದಿನಗಳು. ವೈಷ್ಣೋದೇವಿ ಕಾಶ್ಮೀರ್ ಫ್ಯಾಮಿಲಿ ಪ್ರವಾಸ 10 ದಿನಗಳು. ಗ್ಯಾಂಟಾಕ್ ಡಾರ್ಜಲಿಂಗ್,ಸಿಕ್ಕಿಂ ಫ್ಯಾಮಿಲಿ ಪ್ರವಾಸಗಳಿಗಾಗಿ ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಮಲ್ಲೇಶ್ವರ ಬೆಂಗಳೂರು.3. 9448294477

27.10.2025 ನೇಪಾಳ ಮುಕ್ತಿನಾಥ ಪಶುಪತಿನಾಥ ಕಾಶಿ; 19.11.25 ರಾಜಸ್ಥಾನ. 30.11.25 ಪುರಿ ಜಗನ್ನಾಥ ಜಾರ್ಖಂಡ್ ವೈದ್ಯನಾಥ ಕಲ್ಕತ್ತಾ. ಮಲ್ಲಿಕಾರ್ಜುನ ಪ್ಯಾಕೇಜ್ ಮೊ; 8496044942

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಅಂಡಮಾನ್: ಚಂಡಮಾರುತ ಸಾಧ್ಯತೆ

ಪೋರ್ಟ್‌ಬ್ಲೇರ್ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತದ ಪರಿಚಲನೆ ಅಕ್ಟೋಬರ್ 21ರಿಂದ ತೀವ್ರಗೊಳ್ಳುವ ಸಾಧ್ಯತೆಯಿರುವುದರಿಂದ, ಭಾರತೀಯ ಹವಾಮಾನ ಇಲಾಖೆಯು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಚಂಡಮಾರುತದ ಎಚ್ಚರಿಕೆ ನೀಡಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅಕ್ಟೋಬರ್ 23ರವರೆಗೆ ಭಾರಿ ಮಳೆಯಾಗಲಿರುವ ಸಾಧ್ಯತೆ ಇರುವುದರಿಂದ ಸ್ಥಳೀಯ ಬಂದರುಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ನಿಕೋಬಾರ್ ದ್ವೀಪಗಳ ಒಂದೆರೆಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಅಕ್ಟೋಬರ್ 21ರಿಂದ 25ರವರೆಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಒಂದೆರೆಡು ಸ್ಥಳಗಳಲ್ಲಿ ಬಿರುಗಾಳಿ, ಮಿಂಚು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಗಾಜಾ ಮೇಲೆ 153 ಟನ್ ಬಾಂಬ್: ನೆತನ್ಯಾಹು

ನೆತನ್ಯಾಹು

ಜೆರುಸಲೇಂ, ಕೈರೊ (ಎಎಫ್‌ಪಿ): ಹಮಾಸ್ ಬಂಡುಕೋರರು ಕದನ ವಿರಾಮ ಉಲ್ಲಂಘಿಸಿದ್ದ ಕಾರಣ ಪ್ರತಿದಾಳಿಯಾಗಿ ಗಾಜಾ ಗುರಿಯಾಗಿಸಿಕೊಂಡು ಇಸ್ರೇಲ್ ಸೇನೆ ಭಾನುವಾರ 153 ಟನ್‌ಗಳಷ್ಟು ಬಾಂಬ್ ಹಾಕಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೋಮವಾರ ಸಂಸತ್‌ಗೆ ತಿಳಿಸಿದ್ದಾರೆ.

‘ನಮ್ಮ ಒಂದು ಕೈನಲ್ಲಿ ಶಸ್ತ್ರವಿದೆ, ಮತ್ತೊಂದು ಕೈ ಶಾಂತಿಗಾಗಿ ಚಾಚಿದೆ. ಇಸ್ರೇಲ್ ಹಿಂದಿಗಿಂತಲೂ ಈಗ ತುಂಬಾ ಬಲಿಷ್ಠವಾಗಿದೆ’ ಎಂದು ಸಂಸತ್ ಸದಸ್ಯರಿಗೆ ತಿಳಿಸಿದರು.

ಹಮಾಸ್ ದಾಳಿಯಲ್ಲಿ ನಮ್ಮ ಇಬ್ಬರು ಸೈನಿಕರು ಮೃತಪಟ್ಟ ನಂತರ, ನಮ್ಮ ಸೇನೆ ವಾಯುದಾಳಿ ನಡೆಸಿತು ಎಂದು ನೆತನ್ಯಾಹು ಹೇಳಿದ್ದಾರೆ. ಆದರೆ, ದಾಳಿ ನಡೆಸಿಲ್ಲ ಎಂದು ಹಮಾಸ್ ತಿಳಿಸಿದೆ.

₹64 ಕೋಟಿ ಮೌಲ್ಯದ ಮದ್ಯ, ನಗದು ವಶ

ಪಟ್ನಾ (ಪಿಟಿಐ): ಅಕ್ಟೋಬರ್ 6ರಂದು ವಿಧಾನಸಭೆ ಚುನವಣಾ ವೇಳಾಪಟ್ಟಿ ಘೋಷಣೆಯಾದಂದಿನಿಂದ ಬಿಹಾರದಾದ್ಯಂತ ₹64.13 ಕೋಟಿ ಮೌಲ್ಯದ ಮದ್ಯ, ನಗದು, ಮಾದಕ ದ್ರವ್ಯ ಮತ್ತು ಉಚಿತವಾಗಿ ನೀಡಲು ಸಂಗ್ರಹಿಸಲಾಗಿದ್ದ ವಸ್ತುಗಳನ್ನು ತನಿಖಾ ಸಂಸ್ಥೆಗಳು ವಶಕ್ಕೆ ಪಡೆದಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಮದ್ಯ ಮುಕ್ತ ರಾಜ್ಯವಾದ ಬಿಹಾರದಲ್ಲಿ ವಶಪಡಿಸಿಕೊಂಡಿರುವ ಈ ವಸ್ತುಗಳಲ್ಲಿ ಮದ್ಯದ ಮೌಲ್ಯವೇ ₹23.41 ಕೋಟಿ ಆಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿ ಇತ್ತೀಚೆಗೆ ಒದಗಿಸಿದ ಮಾಹಿತಿಯ ಪ್ರಕಾರ, ಉಚಿತವಾಗಿ ನೀಡಲು ಸಂಗ್ರಹಿಸಲಾದ ₹14 ಕೋಟಿ ಮೌಲ್ಯದ ವಸ್ತುಗಳು, ₹4.19 ಕೋಟಿ ನಗದು ಮತ್ತು ₹16.88 ಕೋಟಿ ಮೌಲ್ಯದ ಮಾದಕ ದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಕ್ಟೋಬರ್ 6ರಿಂದ ಪೊಲೀಸ್ ಮತ್ತು ಇತರ ತನಿಖಾ ಸಂಸ್ಥೆಗಳು ರಾಜ್ಯದಲ್ಲಿ 753 ಜನರನ್ನು ಬಂಧಿಸಿದ್ದು, 13,587 ಜಾಮೀನುರಹಿತ ವಾರಂಟ್‌ಗಳನ್ನು ಜಾರಿ ಮಾಡಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ನಕ್ಸಲ್ ಭಯೋತ್ಪಾದನೆ ನಿರ್ಮೂಲನೆ’

100ಕ್ಕೂ ಹೆಚ್ಚು ಜಿಲ್ಲೆಗಳು ಮಾವೋವಾದಿ ಪಿಡುಗಿನಿಂದ ಮುಕ್ತ: ಪ್ರಧಾನಿ ನರೇಂದ್ರ ಮೋದಿ

ಪಣಜಿ (ಪಿಟಿಐ): ‘ಭಾರತವು ನಕ್ಸಲ್–ಮಾವೋವಾದಿ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಹಾದಿಯಲ್ಲಿದೆ. ಈ ಪಿಡುಗಿನಿಂದ ಮುಕ್ತವಾದ 100ಕ್ಕೂ ಹೆಚ್ಚು ಜಿಲ್ಲೆಗಳು ಈ ವರ್ಷ ದೀಪಾವಳಿಯನ್ನು ಗೌರವ, ಘನತೆಯಿಂದ ಆಚರಿಸಲಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಗೋವಾ ಕರಾವಳಿಯಲ್ಲಿ ಐಎನ್‌ಎಸ್ ವಿಕ್ರಾಂತ್‌ನಲ್ಲಿ ಸಶಸ್ತ್ರ ಪಡೆಗಳನ್ನು ಉದ್ದೇಶಿಸಿ ಸೋಮವಾರ ಮಾತನಾಡಿದ ಪ್ರಧಾನಿ, ‘ನಮ್ಮ ಭದ್ರತಾ ಪಡೆಗಳ ಶೌರ್ಯ, ಧೈರ್ಯದಿಂದಾಗಿ ದೇಶವು ಕಳೆದ ಕೆಲವು ವರ್ಷಗಳಲ್ಲಿ ಮತ್ತೊಂದು ಪ್ರಮುಖ ಮೈಲಿಗಲ್ಲು ಸಾಧಿಸಿದೆ. 2014ಕ್ಕಿಂತ ಮೊದಲು ದೇಶದಾದ್ಯಂತ ಸುಮಾರು 125 ಜಿಲ್ಲೆಗಳು ಮಾವೋವಾದಿಗಳ ಹಿಡಿತದಲ್ಲಿದ್ದವು. ಕಳೆದ ದಶಕದಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡ ಕ್ರಮಗಳಿಂದಾಗಿ ಮಾವೋವಾದಿಗಳ ಚಟುವಟಿಕೆ 11 ಜಿಲ್ಲೆಗಳಿಗೆ ಸೀಮಿತಗೊಂಡಿದೆ’ ಎಂದು ತಿಳಿಸಿದರು.

‘ಈ 11 ಜಿಲ್ಲೆಗಳ ಪೈಕಿ ಮೂರರಲ್ಲಿ ಮಾತ್ರ ಮಾವೋವಾದಿಗಳ ಪ್ರಭಾವವಿದೆ. 100ಕ್ಕೂ ಹೆಚ್ಚು ಜಿಲ್ಲೆಗಳು ಮೊದಲ ಬಾರಿಗೆ ಪರಿಶುದ್ಧ ಗಾಳಿಯನ್ನು ಉಸಿರಾಡುತ್ತಿವೆ ಮತ್ತು ಭವ್ಯವಾದ ದೀಪಾವಳಿಯನ್ನು ಆಚರಿಸುತ್ತಿವೆ’ ಎಂದು ಹೇಳಿದರು.

‘ಈ ಪ್ರದೇಶಗಳಲ್ಲಿ ಶಾಲೆ, ರಸ್ತೆ ಮತ್ತು ಆಸ್ಪತ್ರೆಗಳನ್ನು ನಿರ್ಮಿಸಲು ಮಾವೋವಾದಿಗಳು ಅವಕಾಶ ನೀಡಿರಲಿಲ್ಲ. ಶಾಲೆ ಮತ್ತು ಆಸ್ಪತ್ರೆಗಳನ್ನು ಸ್ಫೋಟಿಸುತ್ತಿದ್ದರು. ವೈದ್ಯರನ್ನು ಗುಂಡಿಕ್ಕಿ ಕೊಲ್ಲುತ್ತಿದ್ದರು. ಅದೇ ಪ್ರದೇಶಗಳಲ್ಲಿ ಈಗ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ. ಹೊಸ ವ್ಯವಹಾರಗಳು ಬೇರೂರುತ್ತಿವೆ. ಶಾಲೆ ಮತ್ತು ಆಸ್ಪತ್ರೆಗಳು ಮಕ್ಕಳಿಗೆ ಹೊಸ ಭವಿಷ್ಯವನ್ನು ನಿರ್ಮಿಸುತ್ತಿವೆ. ಭದ್ರತಾ ಪಡೆಗಳ ತಪಸ್ಸು, ತ್ಯಾಗ ಮತ್ತು ಧೈರ್ಯದಿಂದಾಗಿ ಈ ಯಶಸ್ಸು ಸಾಧ್ಯವಾಗಿದೆ’ ಎಂದು ತಿಳಿಸಿದರು.

ಶ್ರೇಷ್ಠ ಸಂಕೇತ: ‘ಐಎನ್‌ಎಸ್ ವಿಕ್ರಾಂತ್ ಆತ್ಮನಿರ್ಭರ ಭಾರತದ ಶ್ರೇಷ್ಠ ಸಂಕೇತ. ಇದು ಯುದ್ಧನೌಕೆಯಷ್ಟೇ ಅಲ್ಲ. 21ನೇ ಶತಮಾನದ ಭಾರತದ ಕಠಿಣ ಪರಿಶ್ರಮ, ಪ್ರತಿಭೆ, ಪ್ರಭಾವ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ಬ್ರಹ್ಮೋಸ್ ಹೆಸರೇ ಕೆಲವರ ಮನಸ್ಸಿನಲ್ಲಿ ಭಯ ಹುಟ್ಟಿಸುತ್ತದೆ. ಈಗ ಅನೇಕ ದೇಶಗಳು ಈ ಕ್ಷಿಪಣಿಗಳನ್ನು ಖರೀದಿಸಲು ಉತ್ಸುಕವಾಗಿವೆ’ ಎಂದು ಮೋದಿ ಹೇಳಿದರು.

‘ಭಾರತವನ್ನು ವಿಶ್ವದ ಅಗ್ರ ರಕ್ಷಣಾ ರಫ್ತುದಾರ ದೇಶಗಳಲ್ಲಿ ಒಂದನ್ನಾಗಿ ಮಾಡುವುದು ನಮ್ಮ ಸರ್ಕಾರದ ಗುರಿಯಾಗಿದೆ. 2014ರಿಂದ ನಮ್ಮ ಶಿಪ್‌ಯಾರ್ಡ್‌ಗಳಲ್ಲಿ 40ಕ್ಕೂ ಹೆಚ್ಚು ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲಾಗಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- ಭದ್ರತಾ ಪಡೆಗಳ ಶೌರ್ಯ, ಧೈರ್ಯಕ್ಕೆ ಪ್ರಧಾನಿ ಶ್ಲಾಘನೆ
- ಯುದ್ಧನೌಕೆಗಳ ಹಾರಾಟ ವೀಕ್ಷಿಸಿದ ಮೋದಿ
- ನೌಕಾಪಡೆ ಸಿಬ್ಬಂದಿಯ ಕುಟುಂಬದವರೊಂದಿಗೆ ಭೋಜನಕೂಟ

ಭೂಸೇನೆ, ವಾಯುಸೇನೆ ಹಾಗೂ ನೌಕಾಸೇನೆಯ ನಡುವಿನ ಅಸಾಧಾರಣ ಸಮನ್ವಯವು ‘ಆಪರೇಷನ್ ಸಿಂಧೂರ’ ಸಮಯದಲ್ಲಿ ಪಾಕಿಸ್ತಾನ ಶರಣಾಗುವಂತೆ ಮಾಡಿತು

ನರೇಂದ್ರ ಮೋದಿ, ಪ್ರಧಾನಿ

ಗೋವಾ ಹಾಗೂ ಕಾರವಾರ ಕರಾವಳಿ ಪ್ರದೇಶದಲ್ಲಿ ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆಯಲ್ಲಿ ಸೋಮವಾರ ನಡೆದ ದೀಪಾವಳಿ ಹಬ್ಬದ ಆಚರಣೆ ವೇಳೆ ನೌಕಾಪಡೆ ಯೋಧರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು –ಪಿಟಿಐ ಚಿತ್ರ

ನೌಕಾಪಡೆಯೊಂದಿಗೆ ಪ್ರಧಾನಿ ದೀಪಾವಳಿ ಆಚರಣೆ

ಯುದ್ಧನೌಕೆ ಐಎನ್‌ಎಸ್ ವಿಕ್ರಾಂತ್‌ನಲ್ಲಿರುವ ನೌಕಾಪಡೆಯ ಯೋಧರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದೀಪಾವಳಿ ಹಬ್ಬವನ್ನು ಆಚರಿಸಿದರು.

ಭಾನುವಾರ ಸಂಜೆ ಗೋವಾದ ಕರಾವಳಿಗೆ ಆಗಮಿಸಿದ ಪ್ರಧಾನಿ, ಸ್ವದೇಶಿ ನಿರ್ಮಿತ ಯುದ್ಧನೌಕೆಯನ್ನು ಹತ್ತಿದರು. ಬಳಿಕ, ಮಿಗ್ 29ಕೆ ಯುದ್ಧ ವಿಮಾನಗಳಿಂದ ಸುತ್ತುವರಿದ ಫ್ಲೈಟ್‌ಡೆಕ್‌ಗೆ ಹೋದರು. ಹಗಲು ಹಾಗೂ ರಾತ್ರಿಯಲ್ಲಿ ಯುದ್ಧನೌಕೆಯ ಸಣ್ಣ ರನ್‌ವೇಯಲ್ಲಿ ಮಿಗ್ 29 ಯುದ್ಧ ವಿಮಾನಗಳ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ ಅನ್ನು ವೀಕ್ಷಿಸಿದರು.

ಭಾರತೀಯ ನೌಕಾಪಡೆಯ ಅಧಿಕಾರಿಗಳು ಮತ್ತು ನಾವಿಕರು ವಿವಿಧ ದೇಶಭಕ್ತಿ ಗೀತೆಗಳನ್ನು ಹಾಡಿದರು. ರೋಮಾಂಚಕ ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಮೋದಿ ಸಾಕ್ಷಿಯಾದರು. ಇದರಲ್ಲಿ ಭಾರತೀಯ ಸಶಸ್ತ್ರ ಪಡೆಗಳ ‘ಆಪರೇಷನ್ ಸಿಂಧೂರ’ದ ಯಶಸ್ಸನ್ನು ಸ್ಮರಿಸಲು ಅವರು ವಿಶೇಷವಾಗಿ ಬರೆದ ಹಾಡು ಸಹ ಸೇರಿದೆ. ಬಳಿಕ, ಪ್ರಧಾನಿಯು ನೌಕಾಪಡೆ ಸಿಬ್ಬಂದಿಯ ಕುಟುಂಬದವರೊಂದಿಗೆ ಊಟ ಸವಿದರು.

ಸೋಮವಾರ ಬೆಳಿಗ್ಗೆ ಮೋದಿ ಐಎನ್‌ಎಸ್ ವಿಕ್ರಾಂತ್‌ನ ಡೆಕ್‌ನಲ್ಲಿ ನಡೆದ ಯೋಗಾಸನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಯುದ್ಧನೌಕೆಗಳ ಹಾರಾಟವನ್ನು ವೀಕ್ಷಿಸಿದರು. ನೌಕಾಪಡೆಯ ಸಿಬ್ಬಂದಿಗೆ ಸಿಹಿ ತಿನ್ನಿಸಿದರು.

ಪ್ರಧಾನಿಯು 2014ರಿಂದಲೂ ಸಶಸ್ತ್ರ ಪಡೆಗಳೊಂದಿಗೆ ದೀಪಾವಳಿ ಆಚರಿಸುತ್ತಿದ್ದಾರೆ.

ರಾಹುಲ್ ಗಾಂಧಿ ಜಾಂಗೀರ್ ಮಾಡಿದ ಕ್ಷಣ –ಪಿಟಿಐ ಚಿತ್ರ

ದೀಪಾವಳಿ: ಸಿಹಿ ತಯಾರಿಸಿದ ರಾಹುಲ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ದೇಶದ ಜನರಿಗೆ ದೀಪಾವಳಿಯ ಶುಭಾಶಯ ಕೋರಿದ್ದಾರೆ. ಇದೇ ವೇಳೆ ದೆಹಲಿಯ ಪ್ರಾಚೀನ ಸಿಹಿ ತಿನಿಸಿನ ಮಳಿಗೆಯೊಂದಕ್ಕೆ ತೆರಳಿ ತಾವೇ ಖುದ್ದಾಗಿ ಸಿಹಿ ತಿನಿಸು ತಯಾರಿಸಿರುವ ವಿಡಿಯೊವನ್ನೂ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘ಹಳೇ ದೆಹಲಿಯ ಪ್ರಾಚೀನ ಸಿಹಿ ತಿನಿಸಿನ ಮಳಿಗೆ ಘಂಟೇವಾಲಾ ಸ್ವೀಟ್ ಶಾಪ್‌ನಲ್ಲಿ ಜಾಂಗೀರ್ (ಇಮರ್ತಿ) ಮತ್ತು ಬೇಸನ್ ಲಾಡು ತಯಾರಿಸಿದ್ದೇನೆ. ಶತಮಾನದಷ್ಟು ಹಳೆಯದಾದ ಈ ಮಳಿಗೆಯ ಶುದ್ಧ, ಪಾರಂಪರಿಕ, ಹೃದಯಸ್ಪರ್ಶಿ ಸಿಹಿ ಇನ್ನೂ ಹಾಗೆಯೇ ಉಳಿದಿದೆ. ನೀವು ಹೇಗೆ ವಿಭಿನ್ನವಾಗಿ ದೀಪಾವಳಿಯನ್ನು ಆಚರಿಸುತ್ತಿದ್ದೀರಿ ಎಂಬುದರ ಬಗ್ಗೆ ನಮಗೂ ತಿಳಿಸಿ’ ಎಂದು ರಾಹುಲ್ ‘ಎಕ್ಸ್’ನಲ್ಲಿ ಬರೆದು, ವಿಡಿಯೊ ಪೋಸ್ಟ್ ಮಾಡಿದ್ದಾರೆ.

ಸಿಹಿ ಮಳಿಗೆಯ ಮಾಲೀಕರು ರಾಹುಲ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ರಾಹುಲ್ ಅವರ ಅಜ್ಜ–ಅಜ್ಜಿ ಹಾಗೂ ಕುಟುಂಬದ ಇತರರಿಗೂ ತಾವು ಸಿಹಿ ಉಣಬಡಿಸಿದ್ದ ವಿಚಾರವನ್ನು ತಿಳಿಸಿದ್ದಾರೆ. ಅಲ್ಲದೇ, ರಾಹುಲ್ ಅವರ ಮದುವೆಗೂ ತಾವೇ ಸಿಹಿ ತಯಾರಿಸಿ ಕೊಡಬೇಕೆಂಬ ಹಂಬಲದ ಬಗ್ಗೆ ಮಾತನಾಡಿರುವುದೂ ವಿಡಿಯೊದಲ್ಲಿದೆ.

ಜುಬಿನ್ ಪ್ರಕರಣ: ಸಿಂಗಪುರ ತಲುಪಿದ ತನಿಖಾಧಿಕಾರಿಗಳು

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣದ ತನಿಖೆಯ ಭಾಗವಾಗಿ ಅಸ್ಸಾಂನ ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳು ಸಿಂಗಪುರಕ್ಕೆ ಸೋಮವಾರ ತಲುಪಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜುಬಿನ್ ಗರ್ಗ್

ಅಸ್ಸಾಂನ ವಿಶೇಷ ತನಿಖಾ ತಂಡವು (ಎಸ್‌ಐಟಿ) ಗರ್ಗ್ ಶಂಕಾಸ್ಪದ ಸಾವಿನ ಕುರಿತು ತನಿಖೆ ನಡೆಸುತ್ತಿದೆ.

ಅಪರಾಧ ತನಿಖಾ ವಿಭಾಗದ (ಸಿಐಡಿ) ವಿಶೇಷ ಡಿಜಿಪಿ ಮುನ್ನಾ ಪ್ರಸಾದ್ ಗುಪ್ತಾ ಮತ್ತು ಟಿಟಾಬೋರ್ ಉಪ ಜಿಲ್ಲಾ ಎಸ್‌ಪಿ ತರುಣ್ ಗೋಯೆಲ್ ಈಗಾಗಲೇ ಸಿಂಗಪುರ ತಲುಪಿದ್ದಾರೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಸಿಂಗಪುರದಲ್ಲಿ ನಡೆಯುತ್ತಿರುವ ತನಿಖೆಯ ಕುರಿತು ಅಧಿಕಾರಿ ಯಾವುದೇ ಮಾಹಿತಿಯನ್ನು ನೀಡಿಲ್ಲ.

ಇಬ್ಬರು ಅಧಿಕಾರಿಗಳು, ಗರ್ಗ್ ಅವರು ಕೊನೆಯುಸಿರೆಳೆದ ಸ್ಥಳಕ್ಕೆ ಭೇಟಿ ನೀಡಲಿದ್ದು, ಅಲ್ಲಿನ ಪೊಲೀಸರೊಂದಿಗೆ ಪ್ರಕರಣದ ಕುರಿತು ಚರ್ಚಿಸಲಿದ್ದಾರೆ ಎಂದು ಮೂಲವೊಂದು ತಿಳಿಸಿದೆ.

ಚಟಾಕಿಗಳಿಗೆ ತಮ್ಮತನದ ‘ಟೈಮಿಂಗ್’ ನೀಡಿದ ಅಪರೂಪದ ನಟ ಇನ್ನು ನೆನಪು

ಅಂತ್ಯಗೊಂಡ ಅಸರಾನಿ ‘ಹಾಸ್ಯವಲ್ಲರಿ’

ಪ್ರಜಾವಾಣಿ ವಾರ್ತೆ

ಮುಂಬೈ: ‘ಶೋಲೆ’ ಹಿಂದಿ ಸಿನಿಮಾದ ಜೈಲರ್ ಪಾತ್ರದಲ್ಲಿ ಸದಾ ನೆನಪಿನಲ್ಲಿ ಉಳಿದಿರುವ ಹಾಸ್ಯನಟ ಗೋವರ್ಧನ್ ಅಸರಾನಿ ಸೋಮವಾರ ನಿಧನರಾದರು. 84 ವರ್ಷ ವಯಸ್ಸಿನ ಅವರು ಐದು ದಿನಗಳ ಹಿಂದೆ ವಯೋಸಹಜ ದೈಹಿಕ ಸಮಸ್ಯೆಗಳ ಕಾರಣಕ್ಕೆ ಜುಹುವಿನ ಆರೋಗ್ಯ ನಿಧಿ ಆಸ್ಪತ್ರೆಗೆ ಸೇರಿದ್ದರು.

ಅವರ ಅಂತ್ಯಸಂಸ್ಕಾರವು ಶಾಸ್ತ್ರಿನಗರದ ಸಾಂತಾಕ್ರೂಜ್ ನಗರದಲ್ಲಿ ನಡೆಯಿತು ಎಂದು ಅಸರಾನಿ ಅವರ ವ್ಯವಸ್ಥಾಪಕ ಬಾಬುಭಾಯಿ ಥಿಬಾ ತಿಳಿಸಿದ್ದಾರೆ.

1940ರಲ್ಲಿ ಜೈಪುರದಲ್ಲಿ ಸಿಂಧಿ ಕುಟುಂಬದಲ್ಲಿ ಹುಟ್ಟಿದ ಗೋವರ್ಧನ್ ಅವರು ಅಸರಾನಿ ಎಂದೇ ಜನಪ್ರಿಯರಾಗಿದ್ದರು. ಅವರ ತಂದೆ ಕಾರ್ಪೆಟ್‌ಗಳನ್ನು ಮಾರುವ ಅಂಗಡಿ ಇಟ್ಟಿದ್ದರು. ಆ ವ್ಯವಹಾರದಲ್ಲಿ ಆಸಕ್ತಿ ತೋರಿಸದ ಅಸರಾನಿ ಅವರಿಗೆ ಅಭಿನಯದಲ್ಲಿ ಒಲವಿತ್ತು. ಸೇಂಟ್ ಕ್ಸೇವಿಯರ್ ಶಾಲೆಯಲ್ಲಿ ಕಲಿತು,

ಅಸರಾನಿ

ರಾಜಸ್ಥಾನ ಕಾಲೇಜಿನಿಂದ ಪದವಿ ಮುಗಿಸಿದರು. ಆ ಹೊತ್ತಿಗಾಗಲೇ ಅವರು ಜೈಪುರ ಆಕಾಶವಾಣಿಯಲ್ಲಿ ಕಂಠದಾನ ಕಲಾವಿದರಾಗಿ ಪಳಗಿದ್ದರು.

ಪುಣೆಯ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಫ್‌ಟಿಐಐ)ನಲ್ಲಿ 1964ರಲ್ಲಿ ತರಬೇತಿ ಪಡೆದು ಹೊರಬಂದರಾದರೂ ಸಿನಿಮಾದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿದ್ದು ಮೂರು ವರ್ಷಗಳ ನಂತರ; 1967ರಲ್ಲಿ ‘ಹರೇ ಕಾಂಚ್ ಕಿ ಚೂಡಿಯಾಂ’ ಸಿನಿಮಾದಲ್ಲಿ. ನಟ ಬಿಸ್ವಜೀತ್ ಸ್ನೇಹಿತನ ಪಾತ್ರದಲ್ಲಿ ಅವರು ಆ ಚಿತ್ರದಲ್ಲಿ ನಟಿಸಿದರು. ಅದೇ ಕಾಲಘಟ್ಟದಲ್ಲಿ ಕೆಲವು ಗುಜರಾತಿ ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುವ ಅವಕಾಶಗಳೂ ಅವರನ್ನು ಹುಡುಕಿಕೊಂಡು ಬಂದವು.

ಹೃಷಿಕೇಶ್ ಮುಖರ್ಜಿ, ಗುಲ್ಜಾರ್ ಹಾಗೂ ಬಿ.ಆರ್. ಚೋಪ್ರಾ ತರಹದ ದಿಗ್ಗಜರ ಚಿತ್ರಗಳ ಮೂಲಕ ಅಭಿನಯದ ಛಾಪು ಮೂಡಿಸಿದ ಅಸರಾನಿ ಅವರು ಹಿಂದಿಯ ಮೊದಲ ಸೂಪರ್ ಸ್ಟಾರ್ ರಾಜೇಶ್ ಖನ್ನಾ ಆಪ್ತಸ್ನೇಹಿತರಾಗಿದ್ದರು. ಅವರೊಟ್ಟಿಗೆ ಸುಮಾರು 25 ಚಿತ್ರಗಳಲ್ಲಿ ತೆರೆ ಹಂಚಿಕೊಂಡಿದ್ದರು.

ವೃತ್ತಿಬದುಕಿನ ಸಂಧ್ಯಾಕಾಲದಲ್ಲೂ ಅವರ ಎರಡನೇ ಇನಿಂಗ್ಸ್ ಶುರುವಾದದ್ದು ನಿರ್ದೇಶಕ ಪ್ರಿಯದರ್ಶನ್ ಹಾಸ್ಯಚಿತ್ರಗಳಿಂದ. ‘ಹೇರಾ ಫೇರಿ’, ‘ಆಮ್‌ದನಿ ಅಠನ್ನಿ ಖರ್ಚಾ ರುಪಯ್ಯಾ’, ‘ಬಾಗ್‌ಬನ್’, ‘ಚುಪ್ಕೆ ಚುಪ್ಕೆ’, ‘ಗರಮ್ ಮಸಾಲಾ’, ‘ಬೋಲ್ ಬಚ್ಚನ್’ ಇವೆಲ್ಲವೂ ಅವರ ಎರಡನೇ ಇನಿಂಗ್ಸ್ ನೆನಪಿಸುವ ಹಿಂದಿ ಚಿತ್ರಗಳು.

ನಟಿ ಮಂಜು ಬನ್ಸಲ್ ಅವರನ್ನು ವಿವಾಹವಾಗಿದ್ದ ಅಸರಾನಿ ಅವರಿಗೆ ಮಗ ನವೀನ್ ಇದ್ದಾರೆ.

ಫಿಲ್ಮ್‌ಫೇರ್ ಸೇರಿದಂತೆ ಕೆಲವು ಪ್ರಮುಖ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಈ ನಟ ತಮ್ಮ ಹಾಸ್ಯವಲ್ಲರಿಯ ‘ಟೈಮಿಂಗ್’ನಿಂದಾಗಿಯೇ ಗುರುತಾಗಿದ್ದರು. 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ಅವರು, ‘ಶೋಲೆ’ ಚಿತ್ರದ ವಿಲಕ್ಷಣ ಜೈಲರ್ ಪಾತ್ರದ ಮೂಲಕ ಸದಾ ಜೀವಂತ.

ಮುಖ್ಯಾಂಶಗಳು

- ವಯೋಸಹಜ ದೈಹಿಕ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದ ನಟ
- ಅಸರಾನಿ ಎಂದೇ ಜನಪ್ರಿಯ
- ಜೈಪುರದಲ್ಲಿ 1940ರಲ್ಲಿ ಜನನ



ರಕ್ಕಸಪುರದೋಳ್ ರಾಜ್ ಬಿ. ಶೆಟ್ಟಿ

ಪ್ರಯೋಗಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡವರು ನಟ ರಾಜ್ ಬಿ.ಶೆಟ್ಟಿ. 'ಒಂದು ಮೊಟ್ಟೆಯ ಕಥೆ'ಯಲ್ಲಿ 'ಬೋಳುತಲೆ'ಯ ಜನಾರ್ಧನನಾಗಿ, 'ಗರುಡ ಗಮನ..'ದಲ್ಲಿ ರುದ್ರಭಯಂಕರ ಶಿವನಾಗಿ, 'ಟೋಬಿ'ಯಲ್ಲಿ ಮಾತು ಬಾರದ 'ಟೋಬಿ'ಯಾಗಿ, 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದಲ್ಲಿ ನಂದಿಬಟ್ಟಲು ಹೂವಿನಂತ ಶುಭ್ರ ಮನಸ್ಸಿನ 'ಅನಿಕೇತ್' ಆಗಿ, 'ರೂಪಾಂತರ'ದಲ್ಲಿ ಹೆಸರೇ ಇಲ್ಲದ ರೌಡಿಯಾಗಿ, ಇತ್ತೀಚೆಗೆ ತೆರೆಕಂಡ 'ಸು ಫ್ರಮ್ ಸೋ'ನಲ್ಲಿ ನಗೆಗಡಲಲ್ಲಿ ತೇಲಾಡಿಸುವ 'ಕರುಣಾಕರ ಗುರೂಜಿ'ಯಾಗಿ ಬಂದ ರಾಜ್ ಬಿ.ಶೆಟ್ಟಿ ಇದೀಗ 'ರಕ್ಕಸಪುರದೋಳ್' ಕಾಣಿಸಿಕೊಳ್ಳಲಿದ್ದಾರೆ.

ಸಾಹಸ ನಿರ್ದೇಶಕ ಕೆ.ರವಿವರ್ಮಾ ನಿರ್ಮಾಣದ, ರವಿ ಸಾರಂಗ ನಿರ್ದೇಶನದ 'ರಕ್ಕಸಪುರದೋಳ್' ಸಿನಿಮಾದ ಪೋಸ್ಟರ್ ಬಿಡುಗಡೆಯಾಗಿದ್ದು, ಕೈಯಲ್ಲೊಂದು ಗದೆ ಹಿಡಿದು ಕಿರೀಟ ಧರಿಸಿ ಯಮನಂತೆ ರಾಜ್ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಪ್ರೇಮ್ ಅವರ ಜೊತೆ ಕೆಲಸ ಮಾಡಿದ ಅನುಭವ ನಿರ್ದೇಶಕ ರವಿ ಅವರಿಗಿದೆ. ಇದೇ ಮೊದಲ ಬಾರಿಗೆ ಪೊಲೀಸ್ ಪಾತ್ರದಲ್ಲಿ ರಾಜ್ ಬಿ.ಶೆಟ್ಟಿ ಕಾಣಿಸಿಕೊಳ್ಳಲಿದ್ದಾರೆ. ಈ ಮೂಲಕ ಮತ್ತೊಂದು ಭಿನ್ನವಾದ ಪಾತ್ರದೊಂದಿಗೆ ಅವರು ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಬಿ.ಸುರೇಶ್, ಅರ್ಚನಾ ಕೊಟ್ಟಿಗೆ ಮುಂತಾದವರು ತಾರಾಬಳಗದಲ್ಲಿದ್ದು, 'ಒಂದು ಸರಳ ಪ್ರೇಮಕಥೆ' ಖ್ಯಾತಿಯ ಸ್ವತಿಷ್ಠಾ ಕೃಷ್ಣನ್ ಈ ಸಿನಿಮಾಗೆ ನಾಯಕಿಯಾಗಿದ್ದಾರೆ. ಆನಂದ್ ಆಡಿಯೊ ಸಿನಿಮಾದ ಆಡಿಯೊ ಹಕ್ಕುಗಳನ್ನು ಖರೀದಿಸಿದೆ. ಚಿತ್ರಕ್ಕೆ ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿರಲಿದ್ದು, ಕ್ರಾಂತಿ ಕುಮಾರ್ ಸಂಭಾಷಣೆ ಬರೆದಿದ್ದಾರೆ.

ಕನ್ನಡದ ಜೊತೆಗೆ ಮಲಯಾಳ ಚಿತ್ರರಂಗದಲ್ಲೂ ಗುರುತಿಸಿಕೊಂಡಿರುವ ರಾಜ್ 'ಟರ್ಬೊ' ಹಾಗೂ 'ರುಧಿರಂ' ಎಂಬ ಸಿನಿಮಾ ಮಾಡಿದ್ದರು. ಗುರುದತ್ ಗಾಣಿಗ ನಿರ್ದೇಶನದ ಕನ್ನಡದ 'ಕರಾವಳಿ' ಹಾಗೂ 'ಜುಗಾರಿ ಕ್ರಾಸ್'ನಲ್ಲೂ ರಾಜ್ ನಟಿಸಿದ್ದು, ಇವೆರಡೂ ಇನ್ನಷ್ಟೇ ತೆರೆಕಾಣಬೇಕಿವೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ '45' ಸಿನಿಮಾ ಡಿ.25ರಂದು ತೆರೆಕಾಣುತ್ತಿದ್ದು, ಇದರಲ್ಲಿ ಶಿವರಾಜ್‌ಕುಮಾರ್, ಉಪೇಂದ್ರ ಜೊತೆ ರಾಜ್ ತೆರೆಹಂಚಿಕೊಂಡಿದ್ದಾರೆ.

ಇದೇ 31ಕ್ಕೆ 'ಕೋಣ' ತೆರೆಗೆ

ರಿಥ್ವಿ ಜಗದೀಶ್, ಕೋಮಲ್, ತನಿಷಾ

ಕುಪ್ಪಂಡಾಸ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಕೋಮಲ್ ನಟನೆಯ 'ಕೋಣ' ಸಿನಿಮಾದ ಬಿಡುಗಡೆ ದಿನಾಂಕ ನಿಗದಿಯಾಗಿದೆ. ಚಿತ್ರವು ಅಕ್ಟೋಬರ್ 31ರಂದು ತೆರೆಕಾಣಲಿದೆ.

'ಬಿಗ್‌ಬಾಸ್' ಖ್ಯಾತಿಯ ತನಿಷಾ ಕುಪ್ಪಂಡ, ಕಾರ್ತಿಕ್ ಕಿರಣ್ ಸಂಕಪಾಲ್, ರವಿಕಿರಣ್ ಎನ್. ನಿರ್ಮಾಣ ಮಾಡಿರುವ ಈ ಸಿನಿಮಾದಲ್ಲಿ 'ಲಕ್ಷ್ಮಿ' ಎಂಬ ಪಾತ್ರದಲ್ಲಿ ತನಿಷಾ ನಟಿಸಿದ್ದಾರೆ. 'ಕೋಣ ಎನ್ನುವ ಪದ ಚಿಕ್ಕ ವಯಸ್ಸಿನಿಂದ ಎಲ್ಲರಿಗೂ ಕನೆಕ್ಟ್ ಆಗಿರುತ್ತದೆ. ನಾನು ಶಾಲೆಯಲ್ಲಿ ಓದಬೇಕಾದರೆ ನಮ್ಮ ಟೀಚರ್ 'ಕೋಣ' ಎಂದೇ ಬೈಯುತ್ತಿದ್ದರು. ನನಗೆ ಆಗ ಕೋಪ ಬರುತ್ತಿತ್ತು. ಈಗ 'ಕೋಣ' ಎನ್ನುವುದೇ ಶೀರ್ಷಿಕೆಯಾಗಿದೆ. ಈ ಚಿತ್ರ ನನಗೆ ತೃಪ್ತಿ ಕೊಟ್ಟಿದೆ' ಎನ್ನುತ್ತಾರೆ ಕೋಮಲ್.

ತನಿಷಾ ಕುಪ್ಪಂಡ ಮಾತನಾಡಿ, 'ಸಿನಿಮಾದಲ್ಲಿ ಕೋಮಲ್ ಅವರು 'ನಾರಾಯಣ' ಎಂಬ ಪಾತ್ರ ಮಾಡಿದ್ದು, ಅವರ ಪತ್ನಿಯಾಗಿ ನಾನು ನಟಿಸಿದ್ದೇನೆ. ಬಹಳ ಭಿನ್ನವಾದ ಪಾತ್ರ ನನಗಿಲ್ಲಿದೆ. ನಿರ್ಮಾಪಕಿಯಾಗಿಯೂ ಹೊಸ ಹೆಜ್ಜೆಯನ್ನು ಇಡುತ್ತಿದ್ದೇನೆ' ಎಂದರು.

ಕೀರ್ತಿರಾಜ್, ರಿಥ್ವಿ ಜಗದೀಶ್, ರಘು ರಾಮನಕೊಪ್ಪ, ವಿಜಯ್ ಚೆಂಡೂರ್, ಎಂ.ಕೆ. ಮಠ, ರಂಜಿತ್ ಗೌಡ, ತುಕಾಲಿ ಸಂತೋಷ್, ಹುಲಿ ಕಾರ್ತಿಕ್, ನಿರಂಜನ್, ಅನಂತ್, ಶಿಶಿರ್ ಶಾಸ್ತ್ರಿ, ಗೋಲ್ಡ್ ಸುರೇಶ್, ಸುಷ್ಮಿತ, ಜಗಪ್ಪ, ಮಂಜು ಪಾವಗಡ, ಕುರಿ ಸುನಿಲ್, ನಮ್ರತಾ ಗೌಡ, ವಿನಯ್ ಗೌಡ, ಮೋಹನ್ ಕೃಷ್ಣರಾಜ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಡಾರ್ಕ್ ಕಾಮಿಡಿ ಜಾನರ್‌ನಲ್ಲಿರುವ ಈ ಸಿನಿಮಾವನ್ನು ಹರಿಕೃಷ್ಣ ನಿರ್ದೇಶಿಸಿದ್ದಾರೆ. ಒಂದು ನೈಜ ಘಟನೆಯನ್ನು ಆಧರಿಸಿ ಈ ಚಿತ್ರ ತಯಾರಾಗಿದೆ ಎಂದಿದೆ ಚಿತ್ರತಂಡ.

ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನ, ವೀನಸ್ ನಾಗರಾಜ ಮೂರ್ತಿ ಛಾಯಾಚಿತ್ರಗ್ರಹಣ, ಉಮೇಶ್ ಆರ್.ಬಿ. ಸಂಕಲನ, ವಿನೋದ್ ಕುಮಾರ್ ಸಾಹಸ ನಿರ್ದೇಶನ, ಶಶಿಕುಮಾರ್ ಸಂಭಾಷಣೆ ಚಿತ್ರಕ್ಕಿದೆ.

ನ.21ಕ್ಕೆ ಬರ್ತಾಳೆ 'ಭಾಗ್ಯಲಕ್ಷ್ಮಿ..'

ದೀಕ್ಷಿತ್ ಶೆಟ್ಟಿ, ಬೃಂದಾ ಆಚಾರ್ಯ

ಅಭಿಷೇಕ್ ಎಂ. ನಿರ್ದೇಶನದ ಚೊಚ್ಚಲ ಸಿನಿಮಾ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ದೀಕ್ಷಿತ್ ಶೆಟ್ಟಿ ಹಾಗೂ ಬೃಂದಾ ಆಚಾರ್ಯ ನಟಿಸಿರುವ ಈ ಸಿನಿಮಾ ನ.21ರಂದು ತೆರೆಕಾಣಲಿದೆ.

ಇತ್ತೀಚೆಗಷ್ಟೇ ಸಿನಿಮಾದ 'ಅಕ್ಕರೆ ಆಗಿದೆ ಅಪ್ಸರೆ ಮೇಲೆ...' ಹಾಡು ಬಿಡುಗಡೆಯಾಗಿತ್ತು. 'ರಂಗಿತರಂಗ' ಸಿನಿಮಾ ನಿರ್ಮಾಣ ಮಾಡಿದ್ದ ಎಚ್.ಕೆ.ಪ್ರಕಾಶ್ ನಿರ್ಮಾಣದ ಈ ಸಿನಿಮಾದಲ್ಲಿ ಸಾಧುಕೋಕಿಲ, ಗೋಪಾಲ ಕೃಷ್ಣ ದೇಶಪಾಂಡೆ, ಉಷಾ ಭಂಡಾರಿ, ಭರತ್, ವಿಶ್ವನಾಥ್, ಹರೀಶ್ ಸಮಷ್ಟಿ ಮುಂತಾದವರು ನಟಿಸಿದ್ದಾರೆ. ಇದೊಂದು ಬ್ಯಾಂಕ್ ಕಳ್ಳತನಕ್ಕೆ ಸಂಬಂಧಿಸಿದ ಸಿನಿಮಾವಾಗಿದ್ದು, 'ಟೈಗರ್' ಎನ್ನುವ ಪಾತ್ರದಲ್ಲಿ ದೀಕ್ಷಿತ್ ನಟಿಸಿದ್ದಾರೆ.

'ಜೆಸಿ'ಯ ರ‍್ಯಾಪ್ ಹಾಡು ಬಿಡುಗಡೆ

ಪ್ರಖ್ಯಾತ್

ನಟ ಡಾಲಿ ಧನಂಜಯ ಅವರ 'ಡಾಲಿ ಪಿಕ್ಚರ್ಸ್' ನಿರ್ಮಾಣದ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. 'ಜೆಸಿ' ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದ್ದು ಚಿತ್ರದ 'ರ‍್ಯಾಪ್' ಹಾಡನ್ನು ಚಿತ್ರತಂಡ ಇತ್ತೀಚೆಗೆ ಬಿಡುಗಡೆ ಮಾಡಿದೆ.

ಪ್ರಖ್ಯಾತ್ ನಾಯಕನಾಗಿ ನಟಿಸಿರುವ ಸಿನಿಮಾ ಇದಾಗಿದೆ. 2018ರಲ್ಲಿ ಬಿಡುಗಡೆಯಾದ 'ನಡುವೆ ಅಂತರವಿರಲಿ' ಸಿನಿಮಾದಲ್ಲಿ ಹೀರೊ ಆಗಿ ಮಿಂಚಿದ್ದ ಪ್ರಖ್ಯಾತ್ ಹಲವು ವರ್ಷಗಳ ಬಳಿಕ ಮತ್ತೆ ತೆರೆ ಮೇಲೆ ಬರುತ್ತಿದ್ದಾರೆ. 'ವ್ರೂಮ್...ವ್ರೂಮ್...ರೋಡ್ ಮೇಲೆ ಬೀಸ್ಟ್ ಬಂತು ಸೈಡ್ ಕೊಡು...' ಎನ್ನುವ ರ‍್ಯಾಪ್ ಹಾಡನ್ನು ಖ್ಯಾತ ರ‍್ಯಾಪರ್‌ಗಳಾದ ಎಮ್ ಸಿ ಬಿಜ್ಜು ಮತ್ತು ರಾಹುಲ್ ಡಿಟ್ಟೋ ಅವರು ಬರೆದು, ಸಂಗೀತ ನೀಡಿ ಹಾಡಿದ್ದಾರೆ.

ಹಾಡಿನ ಮೂಲಕವೇ ಪ್ರಚಾರ ಆರಂಭಿಸಿರುವ ತಂಡ ಟ್ರೇಲರ್ ಬಿಡುಗಡೆ ಮಾಡಲು ಯೋಜನೆ ಹಾಕಿಕೊಂಡಿದೆ. 'ಜೆಸಿ' ಎಂದರೆ ಜುಡಿಷಿಯಲ್ ಕಸ್ಟಡಿ. ಜೈಲಿನಿಂದ ಹೊರಗೆ ಬಂದಿರುವ ಯುವಕನ ಕಥೆ ಈ ಸಿನಿಮಾದಲ್ಲಿ ಇರಲಿದೆ.

ಸಿನಿಮಾಗೆ ಚೇತನ್ ಜೈರಾಮ್ ಆ್ಯಕ್ಷನ್ ಕಟ್ ಹೇಳಿದ್ದು, ಚೇತನ್ ಅವರಿಗೆ ಇದು ಚೊಚ್ಚಲ ಸಿನಿಮಾ. ಪ್ರಖ್ಯಾತ್‌ಗೆ ಜೋಡಿಯಾಗಿ ಭಾವನ ರೆಡ್ಡಿ ನಟಿಸಿದ್ದಾರೆ. ಮಾಸ್ತಿ ಸಂಭಾಷಣೆ ಚಿತ್ರಕ್ಕಿದೆ. ಮಾಸ್ ಕಥಾಹಂದರ ಇರುವ ಸಿನಿಮಾಗೆ ಕಾರ್ತಿಕ್ ಛಾಯಾಚಿತ್ರಗ್ರಹಣ, ರೋಹಿತ್ ಸೋವರ್ ಸಂಗೀತ ನಿರ್ದೇಶನವಿದೆ.

ಸಂಕ್ಷಿಪ್ತ ಸುದ್ದಿ

ಹರಿಣಗಳ ಕಳಪೆ ಫೀಲ್ಡಿಂಗ್‌ನ ಲಾಭ ಪಡೆದ ಪಾಕ್

ರಾವಲ್ಪಿಂಡಿ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡದ ಕಳಪೆ ಫೀಲ್ಡಿಂಗ್‌ನ ಲಾಭ ಪಡೆದ ಪಾಕಿಸ್ತಾನ ತಂಡವು ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಮೊದಲ ದಿನವಾದ ಸೋಮವಾರ ಆಟ ಮುಗಿದಾಗ 5 ವಿಕೆಟ್‌ಗೆ 259 ರನ್ ಗಳಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಆತಿಥೇಯರಿಗೆ, ದಕ್ಷಿಣ ಆಫ್ರಿಕಾ ಕ್ಷೇತ್ರರಕ್ಷಕರು ಐದು ಜೀವದಾನಗಳನ್ನು ನೀಡಿದರು. 71 ರನ್ ಗಳಿಸಿದ್ದಾಗ ಕೇಶವ ಮಹಾರಾಜ್ ಬೌಲಿಂಗ್‌ನಲ್ಲಿ ಜೀವದಾನ ಪಡೆದಿದ್ದ ನಾಯಕ ಶಾನ್ ಮಸೂದ್ 87 ರನ್ ಗಳಿಸಿದರು.

ಲಯಕ್ಕೆ ಮರಳಲು ಹರಸಾಹಸ ಪಡುತ್ತಿರುವ ಬಾಬರ್ ಆಜಂ 16 ರನ್ ಗಳಿಸಿದರು. ಇದರೊಂದಿಗೆ ಈ ಅನುಭವಿ ಆಟಗಾರ 29 ಟೆಸ್ಟ್ ಇನಿಂಗ್ಸ್‌ಗಳನ್ನು ಶತಕವಿಲ್ಲದೇ ಕಳೆದಂತಾಗಿದೆ.

38ರಲ್ಲಿ ಪದಾರ್ಪಣೆ!: ಲಾಹೋರ್‌ನಲ್ಲಿ ನಡೆದ ಮೊದಲ ಟೆಸ್ಟ್ ಗೆದ್ದ ಪಾಕಿಸ್ತಾನ 1–0 ಮುನ್ನಡೆ ಪಡೆದಿದೆ. ಈ ಪಂದ್ಯದಲ್ಲಿ ವೇಗಿ ಹಸನ್ ಅಲಿ ಬದಲು ಅನುಭವಿ ಆಸಿಫ್ ಅಫ್ರಿದಿ ಅವಕಾಶ ಪಡೆದರು.

ಆಸಿಫ್ (39 ವರ್ಷ 299 ದಿನ) ಅವರು ಪಾಕ್ ಪರ ಪದಾರ್ಪಣೆ ಮಾಡಿದ ಎರಡನೇ ಅತಿ ಹಿರಿಯ ಆಟಗಾರನಾದರು. 1955ರಲ್ಲಿ ಭಾರತ ವಿರುದ್ಧ ಚೊಚ್ಚಲ ಪಂದ್ಯ ಆಡಿದಾಗ ಮಿರಾನ್ ಬಕ್ಷ್ ಅವರ ವಯಸ್ಸು 47 ವರ್ಷ 284 ದಿನ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 91 ಓವರುಗಳಲ್ಲಿ 5 ವಿಕೆಟ್‌ಗಳಿಗೆ 259 (ಅಬ್ದುಲ್ಲಾ ಶಫೀಕ್ 57, ಶಾನ್ ಮಸೂದ್ 87, ಸಾದ್ ಶಕೀಲ್ ಔಟಾಗದೇ 42; ಕೇಶವ ಮಹಾರಾಜ್ 63ಕ್ಕೆ2). ದಕ್ಷಿಣ ಆಫ್ರಿಕಾ ವಿರುದ್ಧ.

ಆಸ್ಟ್ರೇಲಿಯಾ ವಿರುದ್ಧ ಏಕದಿನ ಸರಣಿ ● ಆಲ್‌ರೌಂಡರ್‌ಗಳಿಗೆ ಕೋಚ್ ಮಣೆ

ಕುಲದೀಪ್‌ಗೆ ಸಿಗುವುದೇ ಅವಕಾಶ?

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಹೆಡ್ ಕೋಚ್ ಗೌತಮ್ ಗಂಭೀರ್ ಅವರು ಆಟದ ತಂತ್ರಗಳಿಗೆ ಸಂಬಂಧಿಸಿದಂತೆ ತಮ್ಮ ಅಚಲ ನಿಲುವುಗಳಿಗೆ ಅಂಟಿಕೊಂಡವರು. ಬ್ಯಾಟಿಂಗ್ ಆಳ ಬಲಪಡಿಸುವ ಉದ್ದೇಶದಿಂದ ಆಲ್‌ರೌಂಡರ್‌ಗಳನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಿರುವುದೂ ಇವುಗಳಲ್ಲಿ ಒಂದು.

ಹೆಡ್ ಕೋಚ್ ಅವರ ಈ ನಿಲುವಿನಿಂದಾಗಿ ಪ್ರಮುಖ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ಪ್ರಸ್ತುತ ತಂಡದಲ್ಲಿ ಸ್ಥಾನ ಪಡೆಯುವುದು ಕಠಿಣವಾಗುತ್ತಿದೆ. ಈ ಎಡಗೈ ರಿಸ್ಟ್ ಸ್ಪಿನ್ನರ್ 113 ಪಂದ್ಯಗಳಿಂದ 181 ವಿಕೆಟ್‌ಗಳನ್ನು ಪಡೆದಿದ್ದಾರೆ.

ಈ ಸರಣಿಯಲ್ಲಿ ಮೂರೇ ಪಂದ್ಯಗಳು ಇರುವುದರಿಂದ, ಬೌನ್ಸ್ ಮತ್ತು ಸೀಮ್ ಚಲನೆಗೆ ಅವಕಾಶವಿರುವ ಆಸ್ಟ್ರೇಲಿಯಾದ ಅಂಗಣದಲ್ಲಿ ಗಂಭೀರ್ ಮುಂದೆಯೂ ಮೂವರು ಆಲ್ ರೌಂಡರ್‌ಗಳನ್ನು ಆಡಿಸುತ್ತಾರೆಯೇ ಎಂದು ಹೇಳುವುದು ಕಷ್ಟ.

ಮಳೆಯಿಂದಾಗಿ ಪದೇ ಪದೇ ನಿಲುಗಡೆಯಾದ ಮೊದಲ ಪಂದ್ಯದಲ್ಲಿ ಭಾರತ ಕೇವಲ 136 ರನ್ ಗಳಿಸಿತ್ತು. ರಕ್ಷಿಸಲು ಅಲ್ಪಮೊತ್ತ ಮಾತ್ರ ಇದ್ದ ಕಾರಣ ಹಿನ್ನಡೆಗೆ ಬೌಲಿಂಗ್ ಘಟಕವನ್ನು ದೂರುವುದು ನ್ಯಾಯಸಮ್ಮತವೆನಿಸದು.

ಕುಲದೀಪ್ ಯಾದವ್

ಆದರೆ ಭಾರತ ಮೂವರು ಆಲ್ ರೌಂಡರ್‌ಗಳನ್ನು– ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ (ಕೊನೆಯ ಇಬ್ಬರು ಪರಿಣತ ಸ್ಪಿನ್ನರ್‌ಗಳು)– ಅವರ ಮೇಲೆ ಉಳಿದ ಪಂದ್ಯಗಳಿಗೂ ವಿಶ್ವಾಸವಿಟ್ಟಲ್ಲಿ, ಕಾನ್ಪುರದ ಬೌಲರ್‌ಗೆ ತಂಡದಲ್ಲಿ ಸ್ಥಾನ ಕಲ್ಪಿಸುವುದು ಅಸಂಭವ ಎನಿಸಲಿದೆ.

ಇದೇ 23ರಂದು (ಗುರುವಾರ) ಅಡಿಲೇಡ್‌ನಲ್ಲಿ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ಭಾರತ ತಂಡ ಇದೇ ಹನ್ನೊಂದರ ಬಳಗವನ್ನು ಉಳಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಆದರೆ ಪ್ರವಾಸಿ ತಂಡಕ್ಕೆ ಈ ಸಂಯೋಜನೆ ಸೂಕ್ತವಾಗಿದೆಯೇ ಎಂಬ ಪ್ರಶ್ನೆ ಉಳಿಯಲಿದೆ.

ಕುಲದೀಪ್ ಅವರನ್ನು ಹೊರಗಿಡುತ್ತಿರುವುದು ಗಂಭೀರ್ ಅವರ ಕಾಲಕ್ಕೆ ಸೀಮಿತವಾಗಿಲ್ಲ. ಈ ಹಿಂದೆ ರವಿ ಶಾಸ್ತ್ರಿ ಹೆಡ್ ಕೋಚ್ ಆಗಿದ್ದಾಗಲೂ ಹೀಗೇ ಆಗಿತ್ತು. ರಾಹುಲ್ ದ್ರಾವಿಡ್ ಅವರ ಅವಧಿಯಲ್ಲೂ ಇದು ಪುನರಾವರ್ತನೆಯಾಯಿತು.

ಈ ರೀತಿ ಮಾಡುವುದರಿಂದ ಕುಲದೀಪ್ ಅವರ ಮನೋಬಲದ ಮೇಲೆ ಪರಿಣಾಮವಾಗಲಿದೆ ಎಂದು ದಿಗ್ಗಜ ಸ್ಪಿನ್ನರ್‌ಗಳಲ್ಲಿ ಒಬ್ಬರಾದ ಆರ್.ಅಶ್ವಿನ್ ಅಭಿಪ್ರಾಯಪಡುತ್ತಾರೆ.

'ಸುರಕ್ಷಿತ ಬೌಲರ್ ಆಗಿ ವಾಷಿಂಗ್ಟನ್ ಅವರನ್ನು ಆಡಿಸಬೇಕೇ ಅಥವಾ 'ಹೈ ರಿಸ್ಕ್, ಹೈ ರಿವಾರ್ಡ್' ಆಟಗಾರ ಕುಲದೀಪ್ ಅವರನ್ನು ಆಯ್ಕೆ ಮಾಡಬೇಕೇ' ಎಂಬುದು ಗಂಭೀರ್ ಮತ್ತು ಶುಭಮನ್ ಗಿಲ್ ಅವರ ಮುಂದಿರುವ ಪ್ರಶ್ನೆ. ಉತ್ತರ ಸುಲಭವಲ್ಲ.

ಗೋವಾ ವಿರುದ್ಧದ ಪಂದ್ಯಕ್ಕೆ ರೊನಾಲ್ಡೊ ಅನುಮಾನ

ಮಾರ್ಗಾವೊ (ಪಿಟಿಐ): ಸೌದಿ ಅರೇಬಿಯಾದ ಪ್ರಸಿದ್ಧ ಫುಟ್‌ಬಾಲ್ ಕ್ಲಬ್ ಅಲ್ ನಸ್ರ್ ತಂಡವು ಎಎಫ್‌ಸಿ ಚಾಂಪಿಯನ್ಸ್ ಲೀಗ್ 2ರ ಗುಂಪು ಹಂತದ ಎಫ್‌ಸಿ ಗೋವಾ ವಿರುದ್ಧದ ಪಂದ್ಯಕ್ಕಾಗಿ ಸೋಮವಾರ ರಾತ್ರಿ ಭಾರತಕ್ಕೆ ಪ್ರಯಾಣ ಬೆಳೆಸಲಿದೆ. ಆದರೆ, ತಾರಾ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ತಂಡದೊಂದಿಗೆ ಬರುವುದು ಅನುಮಾನವಾಗಿದೆ.

ಇದರಿಂದಾಗಿ ಪೋರ್ಚುಗಲ್‌ನ ಫುಟ್‌ಬಾಲ್ ದಂತಕಥೆ ರೊನಾಲ್ಡೊ ಅವರ ಆಟವನ್ನು ಕಣ್ತುಂಬಿಕೊಳ್ಳಲು ಕಾತರದಿಂದ ಕಾಯುತ್ತಿದ್ದ ಭಾರತದ ಅಭಿಮಾನಿಗಳಿಗೆ ನಿರಾಸೆಯಾಗಲಿದೆ. ನಸ್ರ್ ಮತ್ತು ಗೋವಾ ತಂಡಗಳ ನಡುವಿನ ಪಂದ್ಯ ಇದೇ 22ರಂದು ಫಟೋರ್ಡಾದ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಿಗದಿಯಾಗಿದೆ.

ಎಫ್‌ಸಿ ಗೋವಾ ಆಡಳಿತ ಮಂಡಳಿಯ ಮನವಿಗಳ ಹೊರತಾಗಿಯೂ 40 ವರ್ಷದ ರೊನಾಲ್ಡೊ ಪ್ರಯಾಣ ತಂಡದ ಭಾಗವಾಗುತ್ತಿಲ್ಲ ಎಂದು ಸೌದಿ ಅರೇಬಿಯಾದ ಕ್ರೀಡಾ ಪತ್ರಿಕೆ 'ಅಲ್ ರಿಯಾಧಿಯಾ' ವರದಿ ಮಾಡಿದೆ.

ಎಫ್‌ಸಿ ಗೋವಾ ತಂಡವು ಈ ಋತುವಿನಲ್ಲಿ ಮಾಜಿ ಚಾಂಪಿಯನ್ ಅಲ್ ಸೀಬ್ ತಂಡದ ವಿರುದ್ಧ ಜಯಗಳಿಸಿ ಎಎಫ್‌ಸಿ ಚಾಂಪಿಯನ್ಸ್ ಲೀಗ್ 2ಕ್ಕೆ ಅರ್ಹತೆ ಪಡೆದಿತ್ತು. ಟೂರ್ನಿಯ ಡಿ ಗುಂಪಿನಲ್ಲಿ ನಸ್ರ್ ತಂಡದೊಂದಿಗೆ ಗೋವಾ ತಂಡ ಇದೆ. ಹೀಗಾಗಿ, ಆ ತಂಡದ ಆಟಗಾರ ರೊನಾಲ್ಡೊ ಭಾರತಕ್ಕೆ ಬರಬಹುದು ಎಂದು ನಿರೀಕ್ಷಿಸಲಾಗಿತ್ತು.

ಏಷ್ಯನ್ ಯೂತ್ ಗೇಮ್ಸ್: ಭಾರತಕ್ಕೆ ಎರಡು ಪದಕ

ಮನಾಮಾ (ಬಹರೇನ್) (ಪಿಟಿಐ): ಹದಿನಾಲ್ಕು ವರ್ಷದ ಕನಿಷ್ಕಾ ಬಿಧುರಿ ಮತ್ತು ಅರವಿಂದ್ ಅವರು ಸೋಮವಾರ ಏಷ್ಯನ್ ಯೂತ್ ಗೇಮ್ಸ್‌ನ ಕುರಾಶ್ ಸ್ಪರ್ಧೆಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದರು.

ಕನಿಷ್ಕಾ ಅವರು ಬಾಲಕಿಯರ 52 ಕೆ.ಜಿ. ವಿಭಾಗದ ಫೈನಲ್‌ನಲ್ಲಿ 0–3ರಿಂದ ಉಜ್ಬೇಕಿಸ್ತಾನದ ಕರಿಮೋವಾ ಮುಬಿನಾಬೋನುಗೆ ಅವರಿಗೆ ಮಣಿದು, ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಇದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ ಕನಿಷ್ಕಾ 10–0 ಅಂತರದಿಂದ ಜಲಲೋದ್ದೀನ್ ಸೆಟಾಯೇಶ್ ವಿರುದ್ಧ ಗೆದ್ದು ಪ್ರಶಸ್ತಿ ಸುತ್ತು ಪ್ರವೇಶಿಸಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಥಾಯ್ಲೆಂಡ್‌ನ ಖುಂಡಿ ವಾರಾಚಯಾ ಎದುರು ಗೆಲುವು ಸಾಧಿಸಿದ್ದರು.

ಬಾಲಕರ 83 ಕೆ.ಜಿ. ವಿಭಾಗದಲ್ಲಿ ಅರವಿಂದ ಅವರು ಕಂಚಿನ ಪದಕದ ಹೋರಾಟದಲ್ಲಿ 10–0ಯಿಂದ ದವ್ಲಾಟ್ಝೋಡಾ ವಿರುದ್ಧ ಗೆಲುವು ಸಾಧಿಸಿದರು. ಸೆಮಿಫೈನಲ್‌ನಲ್ಲಿ ಅರವಿಂದ 0–10ರಿಂದ ಉಜ್ಬೇಕಿಸ್ತಾನದ ಗೋಲಿಬೊವ್ ಶೋಹ್ಜಾಹೋನ್ ವಿರುದ್ಧ ಸೋತಿದ್ದರು.

15 ವರ್ಷದ ಖುಷಿ ಭಾನುವಾರ ಬಾಲಕಿಯರ 70 ಕೆ.ಜಿ. ಕುರಾಶ್ ಸ್ಪರ್ಧೆಯಲ್ಲಿ ಕಂಚಿನ ಪದಕದೊಂದಿಗೆ ಭಾರತದ ಪರ ಮೊದಲ ಪದಕ ಗೆದ್ದಿದ್ದರು.

ಇದೇ 31ರವರೆಗೆ ನಡೆಯಲಿರುವ ಕೂಟದಲ್ಲಿ 222 ಮಂದಿಯ ಭಾರತ ಅಥ್ಲೀಟುಗಳ ತಂಡ ಭಾಗವಹಿಸುತ್ತಿದೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಮಹಿಳೆಯರಿದ್ದಾರೆ.

ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಯೋಗೇಶ್ವರ ದತ್ ಅವರು ತಂಡದ ಷೆಫ್‌–ಡಿ– ಮಿಷನ್ ಆಗಿದ್ದಾರೆ.

ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಸಾತ್ವಿಕ್–ಚಿರಾಗ್‌ಗೆ ಪ್ರಶಸ್ತಿಯ ತವಕ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಮಂಗಳವಾರ ಆರಂಭವಾಗಲಿರುವ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಏಷ್ಯಾ ವಲಯದಲ್ಲಿ ಈಚೆಗೆ ನಡೆದ ಬಹುತೇಕ ಟೂರ್ನಿಗಳಲ್ಲಿ ಸ್ಥಿರ ಪ್ರದರ್ಶನ ನೀಡಿರುವ ಈ ಜೋಡಿಯು ತಮ್ಮ 'ನೆಚ್ಚಿನ ಸ್ಥಳ' ಪ್ಯಾರಿಸ್‌ನಲ್ಲಿ ಮೂರನೇ ಬಾರಿಗೆ ಚಾಂಪಿಯನ್ ಆಗುವ ತವಕದಲ್ಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 6ನೇ ಕ್ರಮಾಂಕದಲ್ಲಿರುವ ಸಾತ್ವಿಕ್ – ಚಿರಾಗ್ ಅವರು 2022 ಹಾಗೂ 2024ರಲ್ಲಿ ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಈ ವರ್ಷದ ಆಗಸ್ಟ್‌ನಲ್ಲಿ ಪ್ಯಾರಿಸ್‌ನಲ್ಲಿಯೇ ನಡೆದ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಜಯಿಸಿದ್ದರು.

ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ಎಡ) ಹಾಗೂ ಚಿರಾಗ್ ಶೆಟ್ಟಿ

ಸಾತ್ವಿಕ್–ಚಿರಾಗ್ ಜೋಡಿಯು ಇಂಡೊನೇಷ್ಯಾದ ಮುಹಮ್ಮದ್ ರಿಯಾನ್ ಅರ್ಡಿಯಾಂಟೊ– ರಹಮತ್ ಹಿದಾಯತ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ಲಕ್ಷ್ಯ ಸೇನ್

ಪುರುಷರ ಸಿಂಗಲ್ಸ್‌ನಲ್ಲಿ ಅನುಭವಿ ಆಟಗಾರ ಲಕ್ಷ್ಯ ಸೇನ್ ಹಾಗೂ ಉದಯೋನ್ಮುಖ ಆಟಗಾರ ಆಯುಷ್ ಶೆಟ್ಟಿ ಅವರು ಕಣದಲ್ಲಿದ್ದು, ಸುಧಾರಿತ ಪ್ರದರ್ಶನದ ನಿರೀಕ್ಷೆಯಲ್ಲಿದ್ದಾರೆ.

ಲಕ್ಷ್ಯ ಅವರು ಮೊದಲ ಸುತ್ತಿನಲ್ಲಿ ಐರ್ಲೆಂಡ್‌ನ ನ್ಹಾಟ್ ನುಯೆನ್ ವಿರುದ್ಧ ಹಾಗೂ ಕರ್ನಾಟಕದ ಆಯುಷ್ ಅವರು ಜಪಾನ್‌ನ ಕೋಕಿ ವತಾನಬೆ ಎದುರು ಅಭಿಯಾನ ಆರಂಭಿಸಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಉದಯೋನ್ಮುಖ ಆಟಗಾರ್ತಿಯರಾದ ಅನ್ಮೋಲ್ ಖಾರ್ಬ್ ಹಾಗೂ ಉನ್ನತಿ ಹೂಡ ಅವರೂ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಓಲಾ ಸಿಇಒ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಕೆ.ಅರವಿಂದ್ ಅವರ ಸಹೋದರ ಅಶ್ವಿನ್ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್‌ಗಳಾದ 108 ಹಾಗೂ 3(5)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೂರಿನಲ್ಲಿ ಏನಿದೆ?: 'ಅರವಿಂದ್ ಅವರು ಕೋರಮಂಗಲದಲ್ಲಿ ಇರುವ ಓಲಾ ಎಲೆಕ್ಟ್ರಿಕ್ ಕಂಪನಿಯ ಎಂಜಿನಿಯರಿಂಗ್ ವಿಭಾಗದಲ್ಲಿ 2022ರಿಂದ ಕೆಲಸ ಮಾಡುತ್ತಿದ್ದರು. ಚಿಕ್ಕಲ್ಲಸಂದ್ರದ ಮಂಜುನಾಥ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅರವಿಂದ್ ಬರೆದಿಟ್ಟ ಮರಣಪತ್ರವು ಅವರ ಕೊಠಡಿಯಲ್ಲಿ ದೊರೆತಿದೆ. ಅದರಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ' ಎಂದು ದೂರು ನೀಡಲಾಗಿದೆ.

'ನನ್ನ ತಮ್ಮನ ಸಾವಿನ ನಂತರ ಅಂದರೆ ಸೆ.30ರಂದು ಬ್ಯಾಂಕ್ ಖಾತೆಗೆ ಕಂಪನಿಯವರು ₹17.46 ಲಕ್ಷ ವರ್ಗಾವಣೆ ಮಾಡಿದ್ದರು. ಅದರ ಬಗ್ಗೆ ಅನುಮಾನ ಬಂದಿತ್ತು. ಈ ಸಂಬಂಧ ಓಲಾ ಕಂಪನಿಯ ಹಿರಿಯ ಅಧಿಕಾರಿ ಸುಬ್ರತ್ ಕುಮಾರ್ ದಾಸ್ ಅವರನ್ನು ವಿಚಾರಿಸಲಾಯಿತು. ಅದಾದ ಮೇಲೆ ಕಂಪನಿಯ ಪ್ರತಿನಿಧಿಗಳಾದ ಕೃತೇಶ್ ದೇಸಾಯಿ, ಪರಮೇಶ್, ರೋಷನ್ ಅವರು ಮನೆಗೆ ಬಂದು ಅರವಿಂದ್ ಅವರ ಖಾತೆಗೆ ವರ್ಗಾವಣೆ ಮಾಡಿದ್ದ ಹಣದ ಬಗ್ಗೆ ಅಸ್ಪಷ್ಟ ಮಾಹಿತಿ ನೀಡಿ ಕಂಪನಿಯವರ ತಪ್ಪುಗಳನ್ನು ಮರೆಮಾಚಿದಂತೆ ಕಂಡುಬಂದಿತ್ತು' ಎಂಬ ದೂರಿನ ಅಂಶವನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಬಳಿಕ ಮರಣಪತ್ರವನ್ನು ಪರಿಶೀಲಿಸಿದಾಗ ಕಂಪನಿಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್ ಹಾಗೂ ಕಂಪನಿಯ ಮಾಲೀಕರಾದ ಭವೀಶ್ ಅಗರ್‌ವಾಲ್ ಅವರು ಒತ್ತಡ ಹೇರಿದ್ದರು. ಅಲ್ಲದೇ ವೇತನ, ಭತ್ಯೆ ನೀಡದೇ ಕಿರುಕುಳ ನೀಡಿದ್ದರು. ಅದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂಬುದಾಗಿ ಆ ಪತ್ರದಲ್ಲಿ ಅರವಿಂದ ಬರೆದಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಒಪ್ಪಂದಕ್ಕೆ ಬಾರದ 'ಇಂಡಿಯಾ' ಬಣ

ಒಂದನೇ ಪುಟದಿಂದ...

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 122 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಸಲೂ ಕಡೆಯ ದಿನಾಂಕವಾಗಿತ್ತು. ವಿಧಾನಸಭೆಯಲ್ಲಿ ಅತೀ ದೊಡ್ಡ ಪಕ್ಷವಾಗಿರುವ ಆರ್‌ಜೆಡಿ ಒಂದೇ ಕಂತಿನಲ್ಲಿ 143 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿತು. ಈ ಪಟ್ಟಿ ಪ್ರಕಟಗೊಂಡಿದ್ದು ನಾಮಪತ್ರ ಸಲ್ಲಿಕೆಯ ಅವಧಿ ಮುಗಿಯಲು ಕೆಲವೇ ಗಂಟೆಗಳು ಇರುವಾಗ. ಇದಕ್ಕೂ ಮೊದಲೇ ಪಕ್ಷವು ಅಭ್ಯರ್ಥಿಗಳಿಗೆ ಬಿ–ಫಾರಂ ನೀಡಿತ್ತು.

ಆರ್‌ಜೆಡಿಗೆ ಮೊದಲಿನಿಂದಲೂ ಯಾದವ–ಮುಸ್ಲಿಂ ಸಮುದಾಯಗಳೇ ಸಾಂಪ್ರದಾಯಿಕ ಮತ ಬ್ಯಾಂಕ್. ಟಿಕೆಟ್ ಹಂಚಿಕೆಯಲ್ಲೂ ಈ ಸಮುದಾಯಗಳಿಗೆ ಆದ್ಯತೆ ನೀಡಲಾಗಿದೆ. ಈ ಸಮುದಾಯಗಳಿಗೆ 50ಕ್ಕೂ ಅಧಿಕ ಟಿಕೆಟ್ ಕೊಡಲಾಗಿದೆ. 23 ಮಹಿಳೆಯರಿಗೆ ಮಣೆ ಹಾಕಲಾಗಿದೆ.

ಕಾಂಗ್ರೆಸ್ ಪಕ್ಷವು ಮತ್ತೆ ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿತ್ತು. 48 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ರಾಜ್ಯ ಘಟಕದ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದ ಪಕ್ಷವು ಮತ್ತೆ ಹಂತ ಹಂತವಾಗಿ ಮೂರು ಪಟ್ಟಿಗಳನ್ನು ಪ್ರಕಟಿಸಿತು. ಪಕ್ಷವು 61 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದೆ. ಕಳೆದ ಬಾರಿ ಪಕ್ಷವು 70ರಲ್ಲಿ ಸ್ಪರ್ಧಿಸಿ 19ರಲ್ಲಿ ಜಯ ಗಳಿಸಿತ್ತು.

ಪಕ್ಷವು ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ಕುಮಾರ್ ರಾಮ್ ಅವರನ್ನು ಕುಟುಂಬ ಕ್ಷೇತ್ರದಿಂದ ಅಭ್ಯರ್ಥಿಯನ್ನಾಗಿ ಮಾಡಿದೆ. ಈ ಕ್ಷೇತ್ರಕ್ಕಾಗಿ ಆರ್‌ಜೆಡಿ ಸಹ ಪಟ್ಟು ಹಿಡಿದಿತ್ತು. ಈ ಕ್ಷೇತ್ರಕ್ಕೆ ಆರ್‌ಜೆಡಿ ಅಭ್ಯರ್ಥಿಯನ್ನು ಕಣಕ್ಕಿಳಿಸಲಿದೆ ಎಂದು ವದಂತಿ ಹಬ್ಬಿತ್ತು. ಆದರೆ, 143 ಕ್ಷೇತ್ರಗಳ ಪಟ್ಟಿಯಲ್ಲಿ ಈ ಕ್ಷೇತ್ರದ ಅಭ್ಯರ್ಥಿಯ ಹೆಸರಿಲ್ಲ.

ಕೈ ಪಾಳಯದಲ್ಲಿ ಅಸಮಾಧಾನ: ಅಧಿಕೃತವಾಗಿ ಮೈತ್ರಿ ಒಪ್ಪಂದ ಏರ್ಪಡದ ಬಗ್ಗೆ ಕಾಂಗ್ರೆಸ್ ಪಾಳಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ. 'ಸೀಟು ಹಂಚಿಕೆಯ ಒಪ್ಪಂದ ಕುದುರಿಸುವಲ್ಲಿ ನಮ್ಮ ಉನ್ನತ ನಾಯಕತ್ವ ಸಂಪೂರ್ಣ ವಿಫಲವಾಗಿದೆ. ಅರ್ಹರಲ್ಲದ ಹಲವಾರು ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗಿದೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'ಬಾರಾಬಿಘಾ ವಿಧಾನಸಭಾ ಕ್ಷೇತ್ರದ ಉದಾಹರಣೆಯನ್ನೇ ತೆಗೆದುಕೊಳ್ಳಿ. 2020ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಗಜಾನಂದ ಪ್ರಸಾದ್ ಸಾಹಿ 200ಕ್ಕಿಂತ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಈ ಬಾರಿ ಅವರಿಗೇ ಟಿಕೆಟ್ ನೀಡಿಲ್ಲ' ಎಂದು ಅವರು ಹೇಳಿದರು.

'ಇನ್ನೊಂದೆಡೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ 25,000ಕ್ಕೂ ಹೆಚ್ಚು ಮತಗಳ ಅಂತರದಿಂದ ಸೋತಿದ್ದರೂ, ರಿಗಾದ ಮಾಜಿ ಶಾಸಕ ಅಮಿತ್ ಕುಮಾರ್ ತುನ್ನಾ ಮತ್ತು ಬಾಗಾದ ಜಯೇಶ್ ಮಂಗಲಂ ಸಿಂಗ್ ಅವರಿಗೆ ಈ ಬಾರಿ ಪಕ್ಷ ಟಿಕೆಟ್ ನೀಡಿದೆ. ಟಿಕೆಟ್ ಹಂಚಿಕೆಯಲ್ಲಿ ಇಂತಹ ಹಲವು ಎಡವಟ್ಟುಗಳು ಆಗಿವೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಅಖಾಡದಿಂದ ಜೆಎಂಎಂ ಹಿಂದಕ್ಕೆ

ಒಂದನೇ ಪುಟದಿಂದ...

ಬಿಹಾರದಲ್ಲಿ 10 ಕ್ಷೇತ್ರಗಳನ್ನು ಪಕ್ಷಕ್ಕೆ ಬಿಟ್ಟು ಕೊಡಬೇಕು ಎಂದು ಜೆಎಂಎಂ ನಾಯಕರು ಒತ್ತಡ ಹೇರಿದ್ದರು. ಆರು ಸ್ಥಾನಗಳನ್ನಷ್ಟೇ ಬಿಟ್ಟುಕೊಡಲು ಆರ್‌ಜೆಡಿ ನಾಯಕರು ಒಪ್ಪಿದ್ದರು. ಇದರಿಂದ ಅಸಮಾಧಾನಗೊಂಡಿದ್ದ ಪಕ್ಷದ ನಾಯಕರು ಬಿಹಾರದಲ್ಲಿ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಎಚ್ಚರಿಸಿದ್ದರು. ಪಕ್ಷವು ಸೋಮವಾರ ತನ್ನ ನಿರ್ಧಾರ ಬದಲಿಸಿದೆ. ಮಿತ್ರಪಕ್ಷಗಳಾದ ಆರ್‌ಜೆಡಿ ಮತ್ತು ಕಾಂಗ್ರೆಸ್‌ನ ರಾಜಕೀಯ ಪಿತೂರಿ ಕಾರಣದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪಕ್ಷ ಹೇಳಿಕೊಂಡಿದೆ. ಇದರಿಂದಾಗಿ, ಮೈತ್ರಿಕೂಟದಲ್ಲಿ ಭಿನ್ನಮತ ಮತ್ತಷ್ಟು ಹೆಚ್ಚಳವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಜೆಎಂಎಂನ ಹಿರಿಯ ನಾಯಕಿ ಸುದಿವ್ಯ ಕುಮಾರ್, 'ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಜೊತೆಗಿನ ಮೈತ್ರಿಯನ್ನು ನಮ್ಮ ಪಕ್ಷ ಮರು ಪರಿಶೀಲಿಸಲಿದೆ. ಈ ಷಡ್ಯಂತ್ರಕ್ಕೆ ಸೂಕ್ತ ಉತ್ತರ ನೀಡುತ್ತೇವೆ' ಎಂದು ಎಚ್ಚರಿಸಿದರು. ರಾಜ್ಯ ಪ್ರವಾಸೋದ್ಯಮ ಸಚಿವ ಕುಮಾರ್ ಸಹ ಇದೇ ಎಚ್ಚರಿಕೆ ನೀಡಿದರು.

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಚಕೈ, ಧಮ್ದಹಾ, ಕಟೋರಿಯಾ, ಮಣಿಹರಿ, ಜಮುಯಿ ಮತ್ತು ಪಿರ್ಪೈಂಟಿ ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಜೆಎಂಎಂ ಶನಿವಾರ ಘೋಷಿಸಿತ್ತು.

ರ‍್ಯಾಲಿ: ವಿನಯ್‌ಗೆ ಪ್ರಶಸ್ತಿ 'ಟ್ರಿಪಲ್'

ಬೆಂಗಳೂರು: ಕರ್ನಾಟಕದ ವಿನಯ್ ಎಸ್. ಮಾದಯ್ಯ ಅವರು ಆಂಧ್ರ ಪ್ರದೇಶದ ಕುಪ್ಪಂನಲ್ಲಿ ಭಾನುವಾರ ನಡೆದ 'ರೇಸ್ ಟು ಕ್ಲೌಡ್ಸ್' ರಾಷ್ಟ್ರೀಯ ರ‍್ಯಾಲಿ ಸ್ಪರ್ಧೆಯ ಮೂರು ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಕರ್ನಾಟಕ ಮೋಟರ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿದ್ದ ರ‍್ಯಾಲಿಯಲ್ಲಿ ಟ್ರಾಕ್‌ಮಿಸ್ಟರ್ಸ್ ತಂಡವನ್ನು ಪ್ರತಿನಿಧಿಸಿದ್ದ ವಿನಯ್ ಅವರು, 1151–1650 ಸಿ.ಸಿ ಪ್ರೊ ಸ್ಟಾಕ್ ವಿಭಾಗದಲ್ಲಿ 2.5 ಕಿ.ಮೀ. ದೂರದ ಗುರಿಯನ್ನು 2 ನಿಮಿಷ, 3.803 ಸೆಕೆಂಡುಗಳಲ್ಲಿ ತಲುಪಿ ಮೊದಲಿಗರಾದರು. ಜೊತೆಗೆ, ಇಂಡಿಯನ್ ಓಪನ್ ಹಾಗೂ ಐಎನ್‌ಆರ್‌ಸಿ ರ‍್ಯಾಲಿ ವಿಭಾಗದಲ್ಲಿಯೂ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಕೊಹಿಮಾದ ಗೀತಾಲತಾ ರಾಯ್ (2ನಿ.42.217ಸೆ.) ಚಾಂಪಿಯನ್ ಆದರು. ಈ ರ‍್ಯಾಲಿಯು ಇದೇ ಮೊದಲ ಬಾರಿಗೆ ರಾಷ್ಟ್ರಮಟ್ಟದ ಮಾನ್ಯತೆಯನ್ನು ಪಡೆದುಕೊಂಡಿದ್ದು, ಒಟ್ಟು 31 ಸ್ಪರ್ಧಿಗಳು ಭಾಗವಹಿಸಿದ್ದರು.

ಕರ್ನಾಟಕದ ವಿನಯ್ ಮಾದಯ್ಯ

ಯುಎಸ್ ಓಪನ್ ಸ್ಕ್ವಾಷ್: ಅಭಯ್ ಮುನ್ನಡೆ

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ಅಭಯ್ ಸಿಂಗ್ ಅವರು ಯುಎಸ್ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಸೋಮವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ರಮಿತ್ ಟಂಡನ್ ಅವರು ಸೋಲಿನೊಂದಿಗೆ ನಿರ್ಗಮಿಸಿದರು.

27 ವರ್ಷ ವಯಸ್ಸಿನ ಅಭಯ್ ಅವರು 16ರ ಘಟ್ಟದ ಪಂದ್ಯದಲ್ಲಿ 3–2ರಿಂದ (11–8, 4–11, 4–11, 11–6, 11–5) ಈಜಿಪ್ಟ್‌ನ ಮೊಹಮ್ಮದ್ ಎಲ್‌ಶೆರ್ಬಿನಿ ಅವರನ್ನು ಮಣಿಸಿದರು.

ರಮಿತ್ 3–0ಯಿಂದ (5–11, 9–11, 7–11) ನ್ಯೂಜಿಲೆಂಡ್‌ನ ಪೌಲ್ ಕಾಲ್ ಎದುರು ಪರಾಭವಗೊಂಡರು.

ಬಾಂಗ್ಲಾ ಕೈಯಿಂದ ಗೆಲುವು ಕಸಿದ ಲಂಕಾ

• ಕೊನೆಯ 2 ಓವರುಗಳಲ್ಲಿ ನಾಟಕೀಯ ತಿರುವು • ಹಸಿನಿ ಅರ್ಧಶತಕ • ಅಟಪಟ್ಟು ಆಲ್‌ರೌಂಡ್ ಆಟ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ನವಿ ಮುಂಬೈ (ಪಿಟಿಐ): ಕೊನೆಯ ಎರಡು ಓವರುಗಳಲ್ಲಿ ನಾಟಕೀಯ ತಿರುವುಗಳನ್ನು ಕಂಡ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ತಂಡ, ಬಾಂಗ್ಲಾದೇಶ ತಂಡದಿಂದ ಗೆಲುವನ್ನು ಕಸಿದುಕೊಂಡಿತು. ಸೋಮವಾರ ನಡೆದ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯವನ್ನು ಶ್ರೀಲಂಕಾ ಏಳು ರನ್‌ಗಳಿಂದ ಜಯಿಸಿತು. ಇದು ಜಂಟಿ ಆತಿಥೇಯರಿಗೆ ಮೊದಲ ಜಯ.

ಈ ಗೆಲುವಿನೊಡನೆ, ಲಂಕಾ ಸೆಮಿಫೈನಲ್‌ನ ಕ್ಷೀಣ ಆಸೆ ಉಳಿಸಿಕೊಂಡರೆ, ಬಾಂಗ್ಲಾದೇಶ ಹೊರಬಿತ್ತು. 203 ರನ್‌ಗಳ ಗುರಿ ಬೆನ್ನತ್ತಿದ್ದ ಬಾಂಗ್ಲಾದೇಶ ಒಂದು ಹಂತದಲ್ಲಿ 4 ವಿಕೆಟ್‌ಗೆ 191 ರನ್ ಗಳಿಸಿ ಗೆಲುವಿನ ಹಾದಿಯಲ್ಲಿತ್ತು. 12 ಎಸೆತಗಳಲ್ಲಿ 12 ರನ್ ಗಳಿಸುವ ಸುಲಭ ಗುರಿ ಎದುರಿತ್ತು. ಆದರೆ ಒಂದು ರನ್ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡು ಪಂದ್ಯ ಕೈಚೆಲ್ಲಿತು. 49ನೇ ಓವರಿನಲ್ಲಿ ಸುಗಂಧಿಕಾ ಕೇವಲ ಮೂರು ರನ್ ಕೊಟ್ಟು ಒಂದು ವಿಕೆಟ್ ಪಡೆದರು.

ಬ್ಯಾಟಿಂಗ್‌ನಲ್ಲಿ 46 ರನ್ ಗಳಿಸಿದ್ದ ನಾಯಕಿ ಚಾಮರಿ ಅಟಪಟ್ಟು ಕೊನೆಯ ಓವರಿನಲ್ಲಿ ಕೇವಲ ಒಂದು ರನ್ನಿತ್ತು 3 ವಿಕೆಟ್ ಪಡೆದರು. ಒಬ್ಬರು ರನ್‌ಔಟ್ ಆದರು. ಬಾಂಗ್ಲಾದೇಶ ನಾಯಕಿ ನಿಗರ್ ಸುಲ್ತಾನಾ ಹೋರಾಟದ 77 (98) ಮತ್ತು ಶಮೀನ್ ಅಖ್ತರ್ (ಅಜೇಯ 64) ಅವರ ಆಟ ಫಲ ನೀಡಲಿಲ್ಲ.

ತಂಡ 3 ವಿಕೆಟ್‌ಗೆ 44 ರನ್ ಗಳಿಸಿದ್ದಾಗ ಶಮೀಮ್ ಮತ್ತು ನಿಗರ್ ಅವರು ನಾಲ್ಕನೇ ವಿಕೆಟ್‌ಗೆ 82 ರನ್ ಜೊತೆಯಾಟವಾಡಿದ್ದರು. ಮೊತ್ತ 126 ರನ್ ಆಗಿದ್ದಾಗ, ಗಾಯಾಳಾಗಿದ್ದ ಶಮೀಮ್ ಕೊನೆಯ ಓವರಿನಲ್ಲಿ ಮರಳಿದರೂ ಅವರಿಗೆ ಒಂದು ಎಸೆತವನ್ನಷ್ಟೇ ಆಡುವ ಅವಕಾಶ ದೊರೆಯಿತು.

ಇದಕ್ಕೆ ಮೊದಲು, ಲೆಗ್ ಸ್ಪಿನ್ನರ್ ಶೋರ್ನಾ ಅಖ್ತರ್ (10–4–27–3) ಅವರ ಸ್ಫೂರ್ತಿಯುತ ಬೌಲಿಂಗ್ ಪ್ರದರ್ಶನದಿಂದ ಬಾಂಗ್ಲಾ ತಂಡವು, ಶ್ರೀಲಂಕಾ ತಂಡವನ್ನು 202 ರನ್‌ಗಳಿಗೆ ಕಟ್ಟಿಹಾಕಿತ್ತು. ಹಸಿನಿ ಪೆರೇರಾ ಜೀವನಶ್ರೇಷ್ಠ 85 ರನ್ ಹೊಡೆದರು.

ಮೂರನೇ ಕ್ರಮಾಂಕದ ಆಟಗಾರ್ತಿ ಹಸಿನಿ ಅವರಿಗೆ ಇದು ಚೊಚ್ಚಲ ಅರ್ಧಶತಕ. 99 ಎಸೆತಗಳನ್ನು ಎದುರಿಸಿದ ಅವರು ಒಂದು ಸಿಕ್ಸರ್, 13 ಬೌಂಡರಿಗಳನ್ನು ಬಾರಿಸಿದರು. ಎರಡು ಉಪಯುಕ್ತ ಜೊತೆಯಾಟಗಳಲ್ಲಿ ಭಾಗಿಯಾಗಿ ಶ್ರೀಲಂಕಾ ತಂಡದ ಕುಸಿತ ತಪ್ಪಿಸಿದರು. ವಿಷ್ಮಿ ಗುಣರತ್ನೆ ಇನಿಂಗ್ಸ್‌ನ ಮೊದಲ ಎಸೆತದಲ್ಲೇ ನಿರ್ಗಮಿಸಿದ್ದರು. ಚಾಮರಿ ಅಟಪಟ್ಟು ಜೊತೆಗೂಡಿದ ಹಸಿನಿ ಎರಡನೇ ವಿಕೆಟ್‌ಗೆ 71 ರನ್ ಸೇರಿಸಿದರು. ಅಟಪಟ್ಟು (46, 43ಎ, 4x6, 6x2) ಅವರು ಈ ಪಂದ್ಯದ ಮೂಲಕ ಏಕದಿನ ಮಾದರಿಯಲ್ಲಿ 4000 ರನ್ ಪೂರೈಸಿದ ಲಂಕಾದ ಮೊದಲ ಆಟಗಾರ್ತಿ ಎನಿಸಿದರು.

ಹಸಿನಿ ನಂತರ ನೀಲಾಕ್ಷಿಕಾ ಸಿಲ್ವ (37) ಜೊತೆ 74 ರನ್ ಸೇರಿಸಿದರು. ಆದರೆ ಲಂಕಾ ಉತ್ತಮ ಮೊತ್ತದತ್ತ ಸಾಗುತ್ತಿರುವಂತೆ ಕಂಡಾಗ ಶೋರ್ನಾ ಪೆಟ್ಟು ನೀಡಿದರು. ಒಂದು ಹಂತದಲ್ಲಿ 32 ಓವರುಗಳ ನಂತರ 4 ವಿಕೆಟ್‌ಗೆ 174 ರನ್ ಗಳಿಸಿದ್ದ ಲಂಕಾ 48.4 ಓವರುಗಳಲ್ಲಿ 202 ರನ್‌ಗಳಿಗೆ ಆಲೌಟಾಯಿತು. ತಮ್ಮ ನಾಲ್ಕನೇ ಓವರಿನಲ್ಲಿ ನೀಲಾಕ್ಷಿ ಅವರ ವಿಕೆಟ್ ಪಡೆದ ಶೋರ್ನಾ ನಂತರದ ಎರಡು ಓವರುಗಳಲ್ಲಿ ಕ್ರಮವಾಗಿ ಅನುಷ್ಕಾ ಸಂಜೀವನಿ ಮತ್ತು ಹಸಿನಿ ಅವರ ಪ್ರಮುಖ ವಿಕೆಟ್‌ಗಳನ್ನು ಪಡೆದಿದ್ದರಿಂದ ಬಾಂಗ್ಲಾದೇಶ ಹಿಡಿತ ಸಾಧಿಸಿತು. ರಿವರ್ಸ್ ಸ್ವೀಪ್ ಯತ್ನದಲ್ಲಿ ಹಸಿನಿ ಎಲ್‌ಬಿಡಬ್ಲ್ಯು ಆದರು.

ಸ್ಕೋರುಗಳು: ಶ್ರೀಲಂಕಾ: 48.4 ಓವರುಗಳಲ್ಲಿ 202 (ಚಾಮರಿ ಅಟಪಟ್ಟು 46, ಹಸಿನಿ ಪೆರೇರಾ 85, ನೀಲಾಕ್ಷಿಕಾ ಸಿಲ್ವ 37; ರಬೆಯಾ ಖಾನ್ 39ಕ್ಕೆ2, ಶೋರ್ನಾ ಅಖ್ತರ್ 27ಕ್ಕೆ3); ಬಾಂಗ್ಲಾದೇಶ: 50 ಓವರುಗಳಲ್ಲಿ 9 ವಿಕೆಟ್‌ಗೆ 195 (ಶಮೀಮ್ ಅಖ್ತರ್ ಔಟಾಗದೇ 64, ನಿಗರ್ ಸುಲ್ತಾನಾ 77; ಸುಗಂಧಿಕಾ 38ಕ್ಕೆ2, ಚಾಮರಿ ಅಟಪಟ್ಟು 42ಕ್ಕೆ4).

ಪಂದ್ಯದ ಆಟಗಾರ್ತಿ: ಹಸಿನಿ ಪೆರೇರಾ

ಶ್ರೀಲಂಕಾ ತಂಡದ ಹಸಿನಿ ಪೆರೇರಾ

ಸತತ 5ನೇ ಗೆಲುವಿನತ್ತ ದಕ್ಷಿಣ ಆಫ್ರಿಕಾ ಚಿತ್ತ

ಕೊಲಂಬೊ (ಪಿಟಿಐ): ಸೆಮಿಫೈನಲ್‌ಗೆ ಈಗಾಗಲೇ ಸ್ಥಾನ ಕಾಯ್ದಿರಿಸಿರುವ ದಕ್ಷಿಣ ಆಫ್ರಿಕಾ ತಂಡವು ಐಸಿಸಿ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಮಂಗಳವಾರ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಸತತ ಐದನೇ ಗೆಲುವಿನ ಗುರಿಯಲ್ಲಿರುವ ಹರಿಣಗಳ ಪಡೆಯು ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆಯುವತ್ತ ಕಣ್ಣಿಟ್ಟಿದೆ.

ಕೊಲಂಬೊದಲ್ಲಿ ನಿಗದಿಯಾಗಿದ್ದ ಬಹುತೇಕ ಪಂದ್ಯಗಳು ಮಳೆಗೆ ಕೊಚ್ಚಿ ಹೋಗಿವೆ. ಹೀಗಾಗಿ, ಎಲ್ಲರ ಕಣ್ಣುಗಳು ಮುಗಿಲಿನತ್ತ ನೆಟ್ಟಿವೆ. ಸದ್ಯ ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಲಾರಾ ವೋಲ್ವಾರ್ಟ್ ನಾಯಕತ್ವದ ತಂಡವು (8 ಅಂಕ), ಪಾಕಿಸ್ತಾನ (2 ಅಂಕ) ವಿರುದ್ಧ ಗೆಲುವು ಸಾಧಿಸಿ ಪೂರ್ಣ ಎರಡು ಅಂಕ ಗಳಿಸುವ ಹುಮ್ಮಸ್ಸಿನಲ್ಲಿದೆ. ಟೂರ್ನಿಯಲ್ಲಿ ಬಹುತೇಕ ಹೊರಬಿದ್ದಿರುವ ಪಾಕ್‌ಗೆ ಇದು 'ಆಟಕ್ಕುಂಟು ಲೆಕ್ಕಕ್ಕಿಲ್ಲದ' ಪಂದ್ಯವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸೋಲಿನ ಹೊಣೆ ಹೊರುವೆ: ಸ್ಮೃತಿ ಮಂದಾನ

ಇಂದೋರ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ನಾಲ್ಕು ರನ್‌ಗಳ ಆಘಾತಕಾರಿ ಸೋಲಿನ ಹೊಣೆಯನ್ನು ತಾವೇ ಹೊರುವುದಾಗಿ ಭಾರತ ತಂಡದ ಉಪ ನಾಯಕಿ ಸ್ಮೃತಿ ಮಂದಾನ ಹೇಳಿದ್ದಾರೆ. ತಮ್ಮ ವಿಕೆಟ್ ಪತನವಾಗಿದ್ದು ಬ್ಯಾಟಿಂಗ್ ಕುಸಿತಕ್ಕೆ ಕಾರಣವಾಯಿತು ಎಂದೂ ತಿಳಿಸಿದ್ದಾರೆ.

ಗೆಲುವಿಗೆ 289 ರನ್ ಗಳಿಸಬೇಕಾಗಿದ್ದ ಭಾರತ ತಂಡವು ಒಂದು ಹಂತದಲ್ಲಿ ಉತ್ತಮ ಸ್ಥಿತಿಯಲ್ಲಿತ್ತು. ನಾಯಕಿ ಹರ್ಮನ್‌ಪ್ರೀತ್ ಜೊತೆ 125 ರನ್ ಮತ್ತು ದೀಪ್ತಿ ಶರ್ಮಾ ಜೊತೆ 67 ರನ್ ಜೊತೆಯಾಟವಾಡಿದ್ದ ಮಂದಾನ (88) ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು. ಆದರೆ ಲಾಂಗ್‌ಆನ್ ಮೇಲೆ ಚೆಂಡನ್ನು ಎತ್ತುವ ಯತ್ನದಲ್ಲಿ ಮಂದಾನ ನಿರ್ಗಮಿಸಿದ ನಂತರ ಇಂಗ್ಲೆಂಡ್ ಮರಳಿ ಹಿಡಿತ ಪಡೆಯಿತು. 'ಹೊಡೆತಗಳ ಆಯ್ಕೆ ಉತ್ತಮವಾಗಿರಬೇಕಿತ್ತು. ಈ ತಪ್ಪು ನನ್ನಿಂದಲೇ ಶುರುವಾಯಿತು' ಎಂದು ಎಡಗೈ ಆಟಗಾರ್ತಿ ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬರೇ ಐದು ಮಂದಿ ಬೌಲರ್‌ಗಳ ಆಯ್ಕೆಯೊಡನೆ ಕಣಕ್ಕಿಳಿದರೆ ಸಾಲದು ಎಂಬುದು ಕಳೆದ ಎರಡು ಪಂದ್ಯಗಳಲ್ಲಿ ಅರಿವಿಗೆ ಬಂದಿತ್ತು. ನಮ್ಮಲ್ಲಿ ಕೆಲವು ಓವರುಗಳನ್ನು ಮಾಡಬಲ್ಲ ಪರಿಣತ ಬ್ಯಾಟರ್‌ಗಳಿಲ್ಲ' ಎಂದರು.

ಸತತ ಮೂರನೇ ಸೋಲಿನಿಂದ ಭಾರತದ ಸೆಮಿಫೈನಲ್ ಹಾದಿ ದುರ್ಗಮವಾಗತೊಡಗಿದೆ.

ಇಂಗ್ಲೆಂಡ್‌ಗೆ ಮಣಿದ ನ್ಯೂಜಿಲೆಂಡ್

ಕ್ರೈಸ್ಟ್‌ಚರ್ಚ್ (ಎಎಫ್‌ಪಿ): ಆರಂಭ ಆಟಗಾರ ಫಿಲ್ ಸಾಲ್ಟ್ (85;56ಎ) ಮತ್ತು ನಾಯಕ ಹ್ಯಾರಿ ಬ್ರೂಕ್ (78;35ಎ) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ತಂಡ, ಸೋಮವಾರ ಇಲ್ಲಿ ನಡೆದ ಎರಡನೇ ಟಿ20 ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 65 ರನ್‌ಗಳಿಂದ ಸೋಲಿಸಿತು.

'ಬ್ಲ್ಯಾಕ್ ಕ್ಯಾಪ್ಸ್' ನಾಯಕ ಮಿಚೆಲ್ ಸ್ಯಾಂಟನರ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬಳಿಕ ಪ್ರವಾಸಿ ತಂಡ 20 ಓವರುಗಳಲ್ಲಿ 4 ವಿಕೆಟ್‌ಗೆ 236 ರನ್‌ಗಳ ದೊಡ್ಡ ಮೊತ್ತ ಪೇರಿಸಿತು.

ನ್ಯೂಜಿಲೆಂಡ್ 18 ಓವರುಗಳಲ್ಲಿ 171 ರನ್‌ಗಳಿಗೆ ಆಟ ಮುಗಿಸಿತು. ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯ ಆಕ್ಲೆಂಡ್‌ನ ಈಡನ್ ಪಾರ್ಕ್‌ನಲ್ಲಿ ಗುರುವಾರ ರಾತ್ರಿ ನಡೆಯಲಿದೆ. ಮೊದಲ ಪಂದ್ಯ ಮಳೆಯಿಂದ ಸ್ಥಗಿತಗೊಂಡಿತ್ತು.